ಸಂಪುಟ 15
ಸಂಚಿಕೆ 27

ಐಕ್ಯರಂಗ

ರೂ. 2.00
11 ಜುಲೈ 1993

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ರಾವ್ ಸರಕಾರದ ಎರಡು ವರ್ಷಗಳು!

ಜಾತ್ಯಾತೀತತೆ ಕಾಪಾಡುವಲ್ಲಿ ನಿಷ್ಕ್ರಿಯ ದೇಶವನ್ನು ಮಾರುವಲ್ಲಿ ಅತಿ ಸಕ್ರಿಯ

ಜೂನ್ 21 ರಂದು ನರಸಿಂಹರಾವ್ ಸರಕಾರದ ಎರಡು ವರ್ಷಗಳು ಮುಗಿದವು. ಆದರೆ ಎರಡನೇ ವಾರ್ಷಿಕೋತ್ಸವದ ದಿನ ಕಾಂಗ್ರೆಸ್ ಪಕ್ಷಕ್ಕೆ ಆಚರಿಸಲು ಏನೂ ಇದ್ದಂತಿಲ್ಲ. ರಾವ್ ಸರಕಾರದ ಸಾಧನೆಗಳ ಬಗ್ಗೆ ಸರಕಾರೀ ಪ್ರಚಾರವೇನೇ ಇರಲಿ, ಈ ಸರಕಾರ ಎರಡು ವರ್ಷ ಮುಗಿಸಿತಲ್ಲಾ ಎಂಬುದೇ ಈ ಸರಕಾರದ ಏಕೈಕ ಸಾಧನೆ.

ಬಹುಮತವಿಲ್ಲದೆ ಆಡಳಿತ ಆರಂಭಿಸಿದ ರಾವ್ ಸರಕಾರವನ್ನು ಈಗ ಕೊನೆಯಿಲ್ಲದ ಸಮಸ್ಯೆಗಳು, ಭ್ರಷ್ಟಚಾರದ ಹಗರಣಗಳು ಮುತ್ತಿಕೊಂಡಿವೆ. ಎರಡುವರ್ಷಗಳ ಒಂದೆ ಈ ಸರಕಾರಕ್ಕೆ ಇದ್ದ ಅಲ್ಪಸ್ವಲ್ಪ ವಿಶ್ವಾಸಾರ್ಹತೆಯನ್ನು ಕಳಚಿ ಹಾಕಿದೆ. ಇದಕ್ಕೆ ಅದು ಕಳೆದ ಎರಡು ವರ್ಷಗಳಲ್ಲಿ ಅನುಸರಿಸಿದ ಧೋರಣೆಗಳೇ ಹೊಣೆ.

ನಿಷ್ಕ್ರಿಯವಾಗಿ ನಿಂತ ಸರಕಾರ

ಪ್ರಧಾನ ಮಂತ್ರಿ ನರಸಿಂಹರಾವ್ ಪ್ರಥಮ ಹಾಗೂ ಅತಿದೊಡ್ಡ ಅಪರಾಧವೆಂದರೆ ರಾಷ್ಟ್ರೀಯ ಐಕ್ಯತೆಗೆ, ಗಣತಂತ್ರ ಸಂವಿಧಾನಕ್ಕೆ ಅತ್ಯಂತ ತೀವ್ರ ಸವಾಲು ಬಂದಿದ್ದಾಗ ಅವರ ಸರಕಾರ ನಿಷ್ಕ್ರಿಯವಾಗಿ ಕೂತದ್ದು. ಇತಿಹಾಸದಲ್ಲಿ ಅವರ ಈ ನಿಷ್ಕ್ರಿಯತೆ ದಾಖಲಾಗಿ ಬಿಟ್ಟಿದೆ. ಕೋಮುವಾದೀ ಶಕ್ತಿಗಳ ಹೆಚ್ಚುತ್ತಿದ್ದ ಆಕ್ರಮಣದ ಎದುರು ನರಸಿಂಹರಾವ್ ಅನುಸರಿಸಿದ್ದು ಆಶಕ್ತಿಗಳನ್ನೇ ಸಂತುಷ್ಟಗೊಳಿಸುವ ಅವುಗಳೊಂದಿಗೆ ರಾಜಿಮಾಡಿಕೊಳ್ಳುವ ನೀತಿ. ಹೆಜ್ಜೆಹೆಜ್ಜೆಗೂ ಹಿಂದುತ್ವ ಶಕ್ತಿಗಳಿಗೆ ಅವಕಾಶ ಮಾಡಿಕೊಟ್ಟದರ ಪರಿಣಾಮವನ್ನು ಡಿಸೆಂಬರ್ 6 ರಂದು ದೇಶ ಕಂಡಿತು. ರಾವ್ ಸರಕಾರದ ಅಸಮರ್ಥತೆ ಅಲ್ಲಿಗೇ ನಿಲ್ಲಲಿಲ್ಲ. ಈಗಲೂ ಅಯೋಧ್ಯೆಯ ವಿವಾದಗ್ರಸ್ತ ಸ್ಥಳದಲ್ಲಿ ದೇವಸ್ಥಾನ ಕಟ್ಟುವಲ್ಲಿ ಅದು ಕಾವಿಪಡೆಗಳೊಂದಿಗೆ ಸ್ಪರ್ಧೆ ನಡೆಸುತ್ತಿರುವ ವಿನಾಶಕಾರಿ ಹಾದಿ ಹಿಡಿದಿದೆ.

● *ಜಾತ್ಯಾತೀತ ನೀತಿಗಳ ರಕ್ಷಣೆಯಲ್ಲಿ ವಿಫಲತೆ, ಜನ-ವಿರೋಧಿ ದುಷ್ಟ ಆರ್ಥಿಕ ನೀತಿಗಳು ಹಾಗೂ ಸಾರ್ವಜನಿಕ ಜೀವನದಲ್ಲಿ ಭ್ರಷ್ಟತೆಯ ನರ್ತನ - ಎರಡು ವರ್ಷಗಳ ಈ ಸರಕಾರದ ಮೇಲಿರುವ ಆಪಾದನಾ ಪಟ್ಟಿಯಲ್ಲಿನ ಮುಖ್ಯ ಅಂಶಗಳು ಜನ ಅವರನ್ನು ಈ ಆಧಾರದಲ್ಲಿಯೇ ಪರಿಶೀಸುತ್ತಾರೆ ಎಂದಿದೆ ಸಿಪಿಐ(ಎಂ) ಕೇಂದ್ರ ಸಮಿತಿಯ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯ ಸಂಪಾದಕೀಯ.* ●

ತನ್ನ ಸಂಕುಚಿತ ಹಿತಾಸಕ್ತಿಯನ್ನು ಮೀರಿನಿಂತು ದೇಶದ ಐಕ್ಯತೆಯ ಸಮಸ್ಯೆಯನ್ನು ಪರಿಹರಿಸುವ ಸಾಮರ್ಥ್ಯ ಈಗಲೂ ಆ ಪಕ್ಷಕ್ಕೆ ಇದ್ದಂತಿಲ್ಲ. ಕಾಶ್ಮೀರದಲ್ಲಿ ಒಂದು ವಿಶ್ವಾಸಾರ್ಹ ಧೋರಣೆಯನ್ನು ರೂಪಿಸಲು ಇನ್ನೂ ಅದಕ್ಕೆ ಸಾಧ್ಯವಾಗಿಲ್ಲ. ಪಂಜಾಬಿನಲ್ಲಿ ಶಾಂತಿ, ಸಾಮಾನ್ಯ ಪರಿಸ್ಥಿತಿ ನೆಲೆಸಿರುವುದು ಒಂದು ಮಹತ್ವ ಮುನ್ನಡೆ. ಆದರೆ ಅಲ್ಲೂ ಪಂಜಾಬೀ ಜನತೆಯ ಸಮಸ್ಯೆಗಳ ರಾಜಕೀಯ ಪರಿಹಾರಕ್ಕೆ ಕೇಂದ್ರ ಸರಕಾರ ತುರ್ತಾಗಿ ಪ್ರಯತ್ನಿಸದಿದ್ದರೆ ಶಾಂತಿ ಬಹಳ ದಿನ ಉಳಿಯಲಿಕ್ಕಿಲ್ಲ. ರಾವ್ ಸರಕಾರಕ್ಕೆ ಈ ತುರ್ತಿನ ಅರಿವೇ ಇದ್ದಂತಿಲ್ಲ. ಇಂತಹ ಸಮಸ್ಯೆಗಳಿಗೆ ಮೂಲಭೂತ ಪರಿಹಾರ ನೀಡಲು ನೈಜ ವಿಕೇಂದ್ರೀಕರಣ ಹಾಗೂ ಕೇಂದ್ರ-ರಾಜ್ಯ ಸಂಬಂಧಗಳ ಪುನರ್ರಚನೆ ಮಾಡಿ ಒಕ್ಕೂಟ ವ್ಯವಸ್ಥೆ ರೂಪಿಸಲು ಹಿಂದಿನ ಕಾಂಗ್ರೆ ಸರಕಾರಗಳಂತೆ ರಾವ್ ಸರಕಾರ ಕೂಡಾ ನಿರಾಕರಿಸುತ್ತಲೇ ಇದೆ.

ಆರ್ಥಿಕ ಸ್ವಾವಲಂಬನೆಯನ್ನು ನಾಶಮಾಡಿದ "ಮಹಾಸಾಧನೆ"!

ರಾವ್ ಸರಕಾರದ ಎರಡು ವರ್ಷಗಳ ಮಹಾಸಾಧನೆಯೆಂದರೆ ಅದರ ಆರ್ಥಿಕ ನೀತಿಗಳು ಎಂದು ಟಾಂಟಾಂ ಮಾಡಲಾಗುತ್ತಿದೆ. ಉದಾರೀಕರಣದ ಮಾಯಾ ಮಂತ್ರ ಎಲ್ಲವನ್ನೂ ಸಾಧಿಸಿದೆ, ಹಣದುಬ್ಬರ 5-8 ಶೇ. ಕ್ಕೆ ಇಳಿದಿದೆ. ಎಂದು ಹೇಳುತ್ತಿರುವಾಗಲೇ ಜನಸಾಮಾನ್ಯರು ಎಲ್ಲಾ ಸರಕುಗಳ ಸರ್ವತೋಮುಖ ಬೆಲೆಯೇರಿಕೆಯಿಂದ ನರಳುತ್ತಿದ್ದಾರೆ. ಈ ನೀತಿಗಳು 1991 ರಿಂದ 60 ಆದ್ದರಿಂದ ಒಂದು ಕೋಟಿ ಉದ್ಯೋಗಾವಕಾಶಗಳನ್ನು ನುಂಗಿ ಹಾಕಿದೆ. ಮತ್ತೆ ಐ.ಎಂ.ಎಫ್. ಎದುರು 900 ಕೋಟಿ ಡಾಲರುಗಳ ಸಾಲಕ್ಕೆ ಭಿಕ್ಷಾಪಾತ್ರೆ ಒಡ್ಡಿ ದೇಶವನ್ನು ಸಾಲದ ಬಲೆಯೊಳಗೆ ಸಿಲುಕಿಸಿವೆ ಎಂದು ಮಾತ್ರ ಹೇಳುತ್ತಿಲ್ಲ. ಕಾಳಹಂದಿ, ಪಲಮು, ತ್ರಿಪುರಾದ ಕೆಲವಡೆ ಹಸಿವಿನಿಂದ ಜನ ಸಾಯಲು ಈ ಉದಾರೀಕರಣ ನೀತಿಯಡಿ ಸಾರ್ವಜನಿಕ ವಿತರಣಾ ವ್ಯವಸ್ಥೆ ದುರ್ಬ

ಪುಟ 8ನೋಡಿ

ಈಗ ಕೋಮುವಾದಿಗಳ ಮತ್ತೊಂದು ಬೆದರಿಕೆ

ಅಕ್ಟೋಬರ್ 24ರೊಳಗೆ ಅಯೋಧ್ಯೆ ವಿವಾದಗ್ರಸ್ತ ಸ್ಥಳವನ್ನು ಸರಕಾರ ತಮಗೊಪ್ಪಿಸದಿದ್ದರೆ ಇನ್ನೊಂದು ಚಳುವಳಿ ಆರಂಭಿಸುವುದಾಗಿ ವಿಹೆಚ್‌ಪಿ ಹತೋಟಿಯಲ್ಲಿರುವ ರಾಮಜನ್ಮಭೂಮಿ ಟ್ರಸ್ಟ್ ನೀಡಿರುವ ಕರೆ ಘರ್ಷಣೆಯ ವಾತಾವರಣವನ್ನು ಮತ್ತಷ್ಟು ಹೆಚ್ಚಿಸುವ ಬೆದರಿಕೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ. ನರಸಿಂಹರಾವ್ ಸರಕಾರ ಇದನ್ನು ಗಂಭೀರವಾಗಿ ತಗೊಳ್ಳಬೇಕು ಎಂದು ಅದು ಒತ್ತಾಯಿಸಿದೆ.

ಹರಿದ್ವಾರದಲ್ಲಿ ಸಾಧುಗಳ ಸಭೆಯಲ್ಲಿ ವಿಹೆಚ್‌ಪಿ ಮುಖಂಡರು ಬಹಿರಂಗವಾಗಿ ಭಾಗವಹಿಸಿ ಸಭೆಯ ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡಿದ್ದಾರೆಂದರೆ ಇತ್ತೀಚೆಗೆ ಟ್ರಿಬ್ಯೂನಲ್ ಎತ್ತಿ ಹಿಡಿದ ವಿ.ಹೆಚ್.ಪಿ. ಮೇಲಿನ ನಿಷೇಧವನ್ನು ಎಷ್ಟು ಲಘುವಾಗಿ ಕಂಡು ಉಲ್ಲಂಘಿಸಲಾಗುತ್ತಿದೆ ಎಂಬುದು ಕಂಡು ಬರುತ್ತದೆ. ಮತ್ತೊಮ್ಮೆ ಸಂವಿಧಾನವನ್ನು ಕಾನೂನಿನ ಶಾಸನವನ್ನು ರಕ್ಷಿಸುವಲ್ಲಿ ನರಸಿಂಹರಾವ್ ಸರಕಾರ ವಿಶ್ವಾಸಘಾತ ಮಾಡಲು ಅವಕಾಶ ನೀಡಬಾರದು. ಅದರ ದುಷ್ಪರಿಣಾಮಗಳನ್ನು ದೇಶ ಸಹಿಸಲಾಗದು ಎಂದು ಪಿ.ಬಿ. ಅಭಿಪ್ರಾಯಪಟ್ಟಿದೆ. ಹಿಂದೆ ವಿ.ಹೆಚ್.ಪಿ. - ಆರ್.ಎಸ್.ಎಸ್. ನೇತೃತ್ವದ ಛಿದ್ರಕಾರೀ ಚಟುವಟಿಕೆಗಳ ವಿರುದ್ಧ ಒಂದು ದೃಢ ನಿಲುವು ತಳೆಯಲು ರಾವ್ ಸರಕಾರ ನಿರಾಕರಿಸಿದ್ದರಿಂದ ಬಾಬ್ರಿ ಮಸೀದಿ ಧ್ವಂಸಕ್ಕೆ ಹಾದಿ ಮಾಡಿಕೊಟ್ಟಿತು. ಈಗಲಾದರೂ ರಾವ್ ಸರಕಾರ ಯಾವುದೇ ಇಂತಹ ರಾಜಕೀಯ ಕಿಡಿಗೇಡಿತನವನ್ನು ತಡೆಯಲು ದೃಢಕ್ರಮ ಕೈಗೊಳ್ಳಬೇಕು. ವಿಹೆಚ್‌ಪಿ. ಬೆದರಿಕೆಯನ್ನು ಎದುರಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಅದರ ಅಂಗವಾಗಿ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆ ಕರೆದು ಸರಕಾರ ತಾನು ಕೈಗೊಳ್ಳಲಿರುವ ಕಾರ್ಯಾಚರಣೆಯೇನು ಎಂದು ವಿವರ ನೀಡಬೇಕು ಎಂದು ಪೊಲಿಟ್‌ಬ್ಯೂರೋ ಒತ್ತಾಯಿಸಿದೆ.

ಮಾನವನ ಅಪೂರ್ವ ಸಾಧನೆಯ ಲಾಭ ಎಲ್ಲರಿಗೂ ಸಿಗುವಂತೆ ಮಾಡಲು ಸಾಧ್ಯ

-- ಕಾಂ. ಚೆರಿಯನ್

ಕೇಂದ್ರದಲ್ಲಿರುವ ಕಾಂಗ್ರೆ ಸರ್ಕಾರವು ತನ್ನ ಹೊಸ ಆರ್ಥಿಕ ನೀತಿಯಿಂದಾಗಿ ಭಾರತದ ಜನತೆಯ ಸ್ವಾವಲಂಬನೆಯನ್ನು ಐ.ಎಂ.ಎಫ್‌ಗೆ ಅಡುವು ಇಡುತ್ತಿರುವುದರ ವಿರುದ್ಧ ಕಾರ್ಮಿಕರನ್ನು ಉಗ್ರವಾದ ಹೋರಾಟಕ್ಕಿಳಿಸಿ ಎಂದು ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿ ಕಾಂ. ಚೆರಿಯನ್‌ರವರು ರಾಜ್ಯ ಮಂಡಳಿ ಪ್ರತಿನಿಧಿಗಳಿಗೆ ಕರೆ ನೀಡಿದರು. ಅವರು ಜೂನ್ 27 ರಂದು ಸಿಐಟಿಯು ಕರ್ನಾಟಕ ರಾಜ್ಯ ಮಂಡಳಿಯ ಮೂರುದಿನಗಳ ಸಭೆಯನ್ನು ಉದ್ಘಾಟಿಸುತ್ತಾ ಮಾತನಾಡುತ್ತಿದ್ದರು.

ಇಂದು ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರದಲ್ಲಿ ಸಾಧಿಸಲಾದ ಕ್ರಾಂತಿಯಿಂದ ಮಾನವಕುಲ ಪ್ರಗತಿಯತ್ತ ಮಹಾ ಮುನ್ನೆಗೆತದ ಹೊಸ್ತಿಲಲ್ಲಿದೆ. "ಕಂಪ್ಯೂಟರ್ಸ್ ಮತ್ತು ಸುಪರ್ ಕಂಪ್ಯೂಟರ್ಸ್‌ಗಳ ಶೋಧದಿಂದಾಗಿ ಮಾನವ ಮೆದುಳು ಶಕ್ತಿಯನ್ನು ಸಾವಿರಪಟ್ಟು ಅಭಿವೃದ್ಧಿ ಪಡಿಸಲು ಸಾಧ್ಯವಾಗಿದ್ದು ಮಾನವ ಸಮಾಜದ ಅಭೂತಪೂರ್ವ ಮುನ್ನಡೆಗೆ ಇದು ಹೊಸ ಅವಕಾಶಗಳನ್ನು ಮೂಡಿಸಿದೆ" ಎಂದು ಹೇಳಿದ ಕಾಮ್ರೆಡ್ ಚೆರಿಯನ್ ಅವರು ಸಮಾಜವಾದಿ ಉತ್ಪಾದನಾ ಸಂಬಂಧಗಳ ಸ್ಥಾಪನೆಯ ಮೂಲಕ ಮತ್ತು ಈ ಸಾಧನೆಯ ಲಾಭ ಇಡೀ ಮಾನವ ಸಮಾಜಕ್ಕೆ ಲಭಿಸುವುದು ಸಾಧ್ಯ ಎಂದರು.

ಹದಿನೆಂಟನೆಯ ಮತ್ತು ಹತ್ತೊಂಬತ್ತನೆಯ ಶತಮಾನದಲ್ಲಿ ಆದ ಔದ್ಯಮಿಕ ಕ್ರಾಂತಿಯ ಫಲವನ್ನು ಆಗ ಉಳ್ಳವರು ... ಎಲೆಕ್ಟ್ರಾನಿಕ್ ಕ್ರಾಂತಿಯ ಫಲವು ಕೂಡಾ ದೇಶದ ವಿಶಾಲ ಜನತೆಗೆ ತಲುಪದಂತೆ ಮಾಡಿದ್ದಾರೆಂದು ಕಾಂ. ಚೆರಿಯನ್ ಹೇಳಿದರು.

ಭಾರತ ದೇಶವನ್ನು ಲೂಟಿ ಮಾಡುವ ತನ್ನ ಪರಿಪಾಠವು ನಿರಂತರವಾಗಿ ಮುಂದುವರಿಸಿಕೊಂಡು ಹೋಗಲು, ಭಾರತದಲ್ಲಿಂದು ಕೋಮುದಳ್ಳುರಿಯನ್ನು ಎಬ್ಬಿಸಿ ದೇಶದ ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಚೌಕಟ್ಟನ್ನು ಧ್ವಂಸಗೊಳಿಸಲು ಸಾಮ್ರಾಜ್ಯಶಾಹಿಗಳು ಸಂಚು ನಡೆಯಿಸುತ್ತಿದ್ದಾರೆಂದು ಅವರು ಹೇಳಿದರು.

ರಾಜ್ಯ ಸಿಐಟಿಯು ಮಂಡಳಿ ಸಭೆಯು ತನ್ನ ಮೊದಲ ವಿಷಯವಾಗಿ ಅಸಂಘಟಿತ ಕಾರ್ಮಿಕರ ಹೋರಾಟದ ಬಗ್ಗೆ ಸುದೀರ್ಘವಾದ ಚರ್ಚೆ ನಡೆಸಿತು.

ಜುಲೈ 14,1993ರ ಮುಷ್ಕರ

ಅಸಂಘಟಿತ ಕಾರ್ಮಿಕರು ಅದರಲ್ಲೂ ಅಗರಬತ್ತಿ, ಉಡಿಗೆ, ಬೀಡಿ, ಹೋಟೆಲ್, ಇಂಜಿನಿಯರಿಂಗ್ ರಂಗದಲ್ಲಿಯ ಕೆಲಸಗಾರರು ತೀರಾ ಕಡಿಮೆ ವೇತನದಲ್ಲಿ ಚಿಂತಾಜನಕ ಸ್ಥಿತಿಯಲ್ಲಿ ದುಡಿಯುತ್ತಿದ್ದಾರೆ. ಆದ್ದರಿಂದ ಕನಿಷ್ಠ ವೇತನವನ್ನು 90 8 ಅಂಶದ ಸಿಪಿಐ ಮಟ್ಟದಲ್ಲಿ ತಿಂಗಳಿಗೆ ರೂ. 1250 ಕನಿಷ್ಠ ವೇತನ ಜಾರಿಗೊಳಿಸುವಂತೆ ಸಿಐಟಿಯು ಕರೆ ನೀಡಿದೆ.

ಕನಿಷ್ಠ ವೇತನ ಜಾರಿಗಾಗಿ ಒತ್ತಾಯಿಸಲು ಸಹಿ ಸಂಗ್ರಹ ಮಾಡಿ ಲೋಕಸಭೆ ಸ್ಪೀಕರ್‌ಗೆ ಮನವಿ ಸಲ್ಲಿಸಲಾಗುವುದಲ್ಲದೆ ಜುಲೈ ... ನಡೆಯುವ ಮುಷ್ಕರದಲ್ಲಿ ಪಾಲ್ಗೊಳ್ಳಲಾಗುವುದು.

ಜುಲೈ 7,1993 ರಂದು ಇಕಾನಾಮಿಕ್ಸ್ ಮತ್ತು ಸ್ಟಾಟಿಸ್ಟಿಕ್ಸ್ ನಿರ್ದೇಶಕರ ಕಛೇರಿ ಎದುರಿಗೆ ಧರಣಿ

ಗ್ರಾಹಕ ಬೆಲೆ ಸೂಚ್ಯಂಕದ ಬೇಸನ್ನು ಸಿಐಟಿಯು ಜೊತೆಗೆ ಚರ್ಚಿಸದೆ ಏಕಪಕ್ಷೀಯವಾಗಿ ಸರಕಾರವು 1960 ರಿಂದ 1987-88 ಕ್ಕೆ ಬದಲಾಯಿಸಿದ್ದನ್ನು ಸಿಐಟಿಯು ರಾಜ್ಯ ಮಂಡಳಿ ಗಣನೆಗೆ ತೆಗೆದುಕೊಂಡಿತು. ಇದರಿಂದಾಗಿ ಹರಿಹರದ ಬೇಸ್‌ನಲ್ಲಿ ತಕ್ಷಣದಲ್ಲಿ ಇಳಿಮುಖವಾಗುವುದು. ಹಿಂದಿನ ಸೂಚ್ಯಂಕದ ಆಧಾರದ ಮೇಲೆ ಹಲವಾರು ಕರಾರುಗಳಿಗೆ ಸಹಿ ಮಾಡಿರುವಾಗ ಹೊಸ ಸೂಚ್ಯಂಕದಿಂದಾಗಿ ಹರಿಹರ ಮತ್ತು ಸುತ್ತ ಮುತ್ತಲಿನ ಸಾವಿರಾರು ಕಾರ್ಮಿಕರಿಗೆ ಹಾನಿಯಾಗುವುದು.

ಜೈಲ್‌ಭರೋ ಮತ್ತು ಭಾರತ್ ಬಂದ್

ಅಖಿಲ ಭಾರತ ಮಟ್ಟದ ಸಂಘಟನೆಗಳ ಕರೆಯ ಮೇರೆಗೆ ಆಗಸ್ಟ್ 19,1993

ಪುಟ 6ನೋಡಿ



ಪಶ್ಚಿಮಬಂಗಾಳದ ರೆಡ್‌ಬ್ಯಾಂಕ್ ಚಹಾ ತೋಟದಲ್ಲಿ ಕಾಂಗ್ರೆ ನೇತೃತ್ವದ ಅಮಾನುಷ ಹಿಂಸಾಚಾರಕ್ಕೆ ಬಲಿಯಾದ [illegible] ಕಾರ್ಯಕರ್ತರು- ಪುಟ 6ನೋಡಿ.

ಬೆಲೆ ಕುಸಿತದಿಂದ ನಲುಗಿದ ರೈತರು

-- ಯು. ಬಸವರಾಜ

ಕೇಂದ್ರ ಸರ್ಕಾರದ ಭೂಮಾಲಕ ಬಂಡವಾಳಶಾಹಿ ಪಥ ಹಾಗೂ ಇತ್ತೀಚೆಗೆ ಅನುಸರಿಸುತ್ತಿರುವ ಹೊಸ ಆರ್ಥಿಕ ನೀತಿ ಆಮದು ನೀತಿಯಿಂದಾಗಿ ರೈತರು ಬೆಳೆದ ಬೆಳೆಗಳ ಬೆಲೆಗಳು ತೀವ್ರವಾಗಿ ಒಂದು ಭಾಗದಲ್ಲಿ ಕುಸಿಯಲು ಕಾರಣವಾದರೆ ಮತ್ತೊಂದು ಭಾಗದಲ್ಲಿ ವ್ಯಾಪಾರಗಾರರು ಹಾಗೂ ದಲ್ಲಾಳಿಗಳು ಮಾಮೂಲಿಯಾಗಿ ಸೃಷ್ಟಿಸುವ ಕೃತಕ ಮಾರುಕಟ್ಟೆಯ ಸಮಸ್ಯೆಯಿಂದಾಗಿ ಮತ್ತಷ್ಟು ರೈತರ ಬೆಲೆಗಳು ಕುಸಿಯಲು ಕಾರಣವಾಗಿದೆ.

ಸರಕಾರವೇ ಸಬ್ಸಿಡಿ ಕಡಿತಮಾಡಿ ಹಾಗೂ ಡೀ-ಕಂಟ್ರೋಲ್ ನೀತಿ ಅನುಸರಿಸುತ್ತಿದ್ದರಿಂದ ಮಾರುಕಟ್ಟೆಯಲ್ಲಿ ರಸಾಯನಿಕ ಗೊಬ್ಬರ, ಕ್ರಿಮಿನಾಶಕ ಬೀಜಗಳ ದರ ದಿನೆ ದಿನೇ ಏರುತ್ತಿರುವಾಗ, ಇತ್ತೀಚೆಗೆ ವ್ಯಾಪಾರಿಗಳು ಸುಗ್ಗಿಯ ಸಂದರ್ಭದಲ್ಲಿ ರೈತರ ಬೆಳೆಗಳ ಬೆಲೆಗಳು ಕುಸಿಯುವಂತೆ ಮಾಡುವುದರ ಜೊತೆ ಬಿತ್ತನೆಯ ಸಂದರ್ಭದಲ್ಲಿಯೂ ಕೂಡಾ ಅತ್ಯವಶ್ಯವಾಗಿ ಬೇಕಾಗುವ ರಸಾಯನಿಕ ಗೊಬ್ಬರಗಳನ್ನು ಮಂಗಮಾಯಮಾಡಿ ಬ್ಲಾಕ್‌ನಲ್ಲಿ ಒಂದೂವರೆ - ಎರಡುಪಟ್ಟು ದುಬಾರಿ ಬೆಲೆಗೆ ಮಾರುವುದು ಈಗ್ಗೆ ಎರಡು ಮೂರು ವರ್ಷಗಳಿಂದ ಸಾಮಾನ್ಯವಾಗಿಬಿಟ್ಟಿದೆ. (ಉದಾ. ಬಳ್ಳಾರಿನಗರದಲ್ಲಿ 1992 ರಲ್ಲಿ ಕೇಂದ್ರ ಸರ್ಕಾರ ಎರಡನೇ ಬಾರಿ ಗೊಬ್ಬರ ಬೆಲೆ ಏರಿಕೆ ಮಾಡವ ಸ್ವಲ್ಪ ಮುಂಚೆ ಕೃತಕವಾಗಿ ಡಿ.ಎ.ಪಿ. ಬೆಲೆಯನ್ನು ಏರಿಸಲಾಯಿತು. ಭತ್ತಕ್ಕೆ ಆಗ ಅತ್ಯವಶಕವಾಗಿ ಬೇಕಾಗಿದ್ದ ಗೊಬ್ಬರವಿದು. ನಗರದ ಯಾವುದೇ ಅಂಗಡಿಯಲ್ಲಿ ಬಹಿರಂಗವಾಗಿ ದೊರೆಯಲಿಲ್ಲ ಆದರೆ ಕಳ್ಳತನದಲ್ಲಿ 235 ಇದ್ದಂತಹದ್ದು 350 ರೂ ನಿಂದ 450 ರೂವರೆಗೆ ಮಾರುವುದು ತಿಳಿದಿದೆ) ಅಲ್ಲದೆ ಕಳಪೆ ಬೀಜ ಹಾಗೂ ಕಳಪೆ ಕ್ರಿಮಿನಾಶಕಗಳು ಮಾರುಕಟ್ಟೆಯಲ್ಲಿ ಯಥೇಚ್ಛವಾಗಿ ಯಾವುದೇ ಲಂಗುಲಗಾಮಿಲ್ಲದೇ ಮಾರಾಟವಾಗುತ್ತಿದೆ. ಈ ವಿಷಯದಲ್ಲಿ ಅಧಿಕಾರಿಗಳ ಹಾಗೂ ಮೇಲ್ಮಟ್ಟದ ಭ್ರಷ್ಟಾಚಾರಕ್ಕೆ ಮಿತಿಯೇ ಇಲ್ಲವಾಗಿದೆ. ಇದರಿಂದಾಗಿ ಕೀಟಭಾಧೆ ನಿಯಂತ್ರಣಕ್ಕೆ ಬಾರದೇ ರೈತರು ಅಧಿಕ ಕೀಟನಾಶಕಗವನ್ನು ಬಳಸುವ ಒತ್ತಡಕ್ಕೊಳಗಾಗಿ ಪ್ರತಿ ಎಕರೆಗೆ 2ರಿಂದ 3 ಸಾವಿರೂಗಳ ಅಧಿಕ ಹೊರೆ ಹೊರಬೇಕಾಗಿ ಬಂದರೂ ಪರಿಣಾಮ ಶೂನ್ಯವೇ ಆಗಿದೆ. ಕಳಪೆ ಬೀಜ ಹಾಗೂ ಕಳಪೆ ಕ್ರಿಮಿನಾಶಕಗಳ ಬಳಕೆ ಬೆಳೆಯ ಇಳುವರಿಯ ಮೇಲೆ ಗಂಭೀರ ಪರಿಣಾಮ ಉಂಟುಮಾಡುತ್ತದೆ. ಈ ಬಗ್ಗೆ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಸಾವಿರಾರು ಚಳುವಳಿ ಮಾಡಿನಂತರ 1991 ರಲ್ಲಿ ಬಂಗಾರಪ್ಪನವರು ಕ್ರಿಮಿನಾಶಕಗಳ ಕಳಪೆತನ ಒಪ್ಪಿಕೊಂಡು ಸುಮಾರು 19 ಕಂಪನಿಗಳ ಮೇಲೆ ಕ್ರಮವಹಿಸುವುದಾಗಿ ವಿಧಾನಸಭೆಯಲ್ಲಿ ತಿಳಿಸಿದರು.

ಆದರೆ ಇದುವರೆಗೆ ಯಾವುದೇ ಕ್ರಮ ಕೈಗೊಂಡ ಬಗ್ಗೆ ತಿಳಿದುಬಂದಿಲ್ಲ ಅಥವಾ ಕ್ರಮಕೈಗೊಂಡಿಲ್ಲದಿರುವುದರಿಂದ ಈಗಲೂ ಕಳಪೆ ಬೀಜ ಹಾಗೂ ಕಳಪೆ ಕ್ರಿಮಿನಾಶಕಗಳು ಯಥೇಚ್ಛವಾಗಿ ಮಾರಾಟವಾಗುತ್ತಿದ್ದು ಹತ್ತಿ ಬೆಳೆಗಾರರಿಗೆ, ತೊಗರಿ ಬೆಳೆಗಾರರಿಗೆ ಕೀಟಬಾಧೆ ನಿಯಂತ್ರಣಕ್ಕೆ ಬಾರದೇ ತೀವ್ರ ನಷ್ಟ ಉಂಟುಮಾಡಿದೆ.

ಕಳಪೆ ಕ್ರಿಮಿನಾಶಕಗಳ ಬಗೆಗೆ ಮಾತನಾಡಿ ಅವರ ಮೇಲೆ ಕ್ರಮಕೈಗೊಳ್ಳಬೇಕಾದ ಅಧಿಕಾರಿಗಳು, ಅವುಗಳನ್ನ ರಕ್ಷಿಸುವ ರೀತಿಯಲ್ಲಿ "ಕೀಟಕ್ಕೆ ಕ್ರಿಮಿನಾಶಕ ನಿರೋಧ ಶಕ್ತಿ ಬೆಳೆದಿದ್ದರಿಂದು" ಪ್ರಚಾರ ಮಾಡುತ್ತಿದ್ದಾರೆ. ಇದು ಏನೇ ಆದರೂ ರೈತರು ಮಾತ್ರ ತಮ್ಮ ಬೆಳೆಯನ್ನು ಕೀಟಗಳಿಂದ ರಕ್ಷಿಸಲು ಅಧಿಕ- ಅಧಿಕ ಕ್ರಿಮಿನಾಶಕಬಳಸುವ ಒತ್ತಾಯಕ್ಕೊಳಪಟ್ಟಿದ್ದಾರೆ.

ಮೇಲಿನೆಲ್ಲಾ ಕಾರಣದಿಂದಾಗಿ ಈ ಭಾರಿ ಪ್ರತಿವರ್ಷಕ್ಕಿಂತ ರೈತರಿಗೆ ಪ್ರತಿ ಎಕರೆಗೆ 3 ರಿಂದ 4 ಸಾವಿರ ರೂಗಳಷ್ಟು ಅಧಿಕ ಹೊರೆ ಬಿದ್ದರೆ ಕೀಟಭಾಧೆಯಿಂದಾಗಿ ಕಳಪೆ ಬೀಜ ಹಾವಳಿಯಿಂದಾಗಿ, ಬೆಲೆ ಏರಿಕೆಯ ಪರಿಣಾಮವುಂಟಾಗಿ ಇಳುವರಿ ಕಡಿಮೆಯಾಗಿರುವುದು ತಿಳಿದುಬಂದಿದೆ.

ಆದಾಗ್ಯೂ ಬಂದಂತಹ ಅಲ್ಪಸ್ವಲ್ಪ ಬೆಳೆಯನ್ನು ಸಾಲ ಕೊಟ್ಟವರ ಒತ್ತಾಯಕ್ಕೆ ದುಬಾರಿ ಟ್ರಕ್ (ಲಾರಿ) ಬಾಡಿಗೆಯೊಂದಿಗೆ ಮಾರುಕಟ್ಟೆಗೆ ತಂದರೆ ಮಾರುಕಟ್ಟೆಯಲ್ಲಿ ಕುಸಿದ ಬೆಲೆಗಳು ಬಾಯ್ತೆರೆದು ರೈತರನ್ನು ನುಂಗಲು ಕಾದಿವೆ. ಕುಸಿದ ಮಾರುಕಟ್ಟೆಯನ್ನು ಸಮರ್ಥವಾಗಿ ಮೇಲೆತ್ತಲು ಸರಕಾರಿ ಸಂಸ್ಥೆಗಳಿಗೆ ಸಾಧ್ಯವಾಗಿಲ್ಲ. ಅದರ ಮಿತಿಯಲ್ಲಿ ಸಾಧ್ಯವಾಗುವುದಿಲ್ಲ. ಸಮರ್ಥವಾಗಿ ಮಧ್ಯೆ ಪ್ರವೇಶಿಸುತ್ತಿಲ್ಲ. ಕೇಂದ್ರ ಸರಕಾರ ನಿಗದಿಪಡಿಸದ ಬೆಂಬಲಿತ ಬೆಲೆ ಅವೈಜ್ಞಾನಿಕವಾಗಿದ್ದು ಸಮರ್ಪಕವಲ್ಲ.

ಕಳೆದ ವರ್ಷ ಇದೇ ಸಂದರ್ಭದಲ್ಲಿ ಜೋಳಕ್ಕೆ ಕ್ವಿಂಟಲ್‌ಗೆ 350 ರೂನಿಂದ 475 ರೂವರೆಗೆ ದೊರೆತರೆ, ಈ ಬಾರಿ 200 ರೂ ನಿಂದ 225 ರೂಗೆ ದೊರೆಯುತ್ತಿದೆ. ಕೇವಲ 4 ತಿಂಗಳ ಕೆಳಗೆ ಹತ್ತಿಯ ಬೆಲೆ 1600 ರಿಂದ 1800 ರೂ ಇದ್ದರೆ ಇದೀಗ 750 ರಿಂದ 900 ರೂಗೆ ಕುಸಿದಿದೆ. ಶೇಂಗಾ ಬೆಲೆಯು 1150 ರಿಂದ 130 0 ರೂವರೆಗೆ ಹೋಗಿದ್ದರೆ ಈಗ 750 ರೂ ನಿಂದ 800 ರೂಗೆ ಇಳಿದಿದೆ. 450 ರೂ ನಿಂದ 500 ರೂವರೆಗೆ ಮಾರಾಟವಾದ ಮೆಕ್ಕೇಜೋಳ ಈ ಬಾರಿ 170 ರೂ ನಿಂದ 200 ಕ್ಕೆ ಕೇಳುವವರಿಲ್ಲವಾಗಿದೆ. ಭತ್ತ, ಸೂರ್ಯಕಾಂತಿ ಬೆಲೆಗಳು ಕುಸಿದಿವೆ. ಈರುಳ್ಳಿಗೆ ಬೆಲೆ ಸಿಗದೇ ತಿಪ್ಪೆಗೆಸೆದದ್ದು, ಒಣಮೆಣಸಿನಕಾಯಿ ಬೆಲೆ ಸಿಗದೆ ಬ್ಯಾಡಿಗಿ ಮಾರುಕಟ್ಟೆಯಿಂದ ರೈತರು ವಾಪಾಸು ತೆಗೆದುಕೊಂಡು ಹೋದದ್ದು ಕಳೆದ ದಿನಪತ್ರಿಕೆಗಳಲ್ಲಿ ಓದಿದ್ದೇವೆ.

ಒಟ್ಟಾರೆ ದುಬಾರಿ ವೆಚ್ಚಮಾಡಿದ ರೈತ ತನ್ನ ಬೆಳೆಗೆ ಮಾರುಕಟ್ಟೆಯಲ್ಲಿ ಸಮರ್ಪಕ ಬೆಲೆ ಸಿಗದೇ ಇಳುವರಿ ಹೆಚ್ಚಿಸದೇ ತೀವ್ರ ಚಿಂತಾಕ್ರಾಂತನಾಗಿದ್ದಾನೆ. ಇದೀಗ ಭೂಮಿ ಮಾರಾಟಮಾಡುವ ಒತ್ತಡಕ್ಕೆ(ಸಾಲಗಾರರ ಕಾರಣದಿಂದ) ಒಳಗಾಗಿದ್ದಾನೆ.

ಇದು ನಿಮಗೆ ತಿಳಿದಿರಲಿ

ಪಶ್ಚಿಮಬಂಗಾಳ ಪಂಚಾಯತ್ ಚುನಾವಣೆ ಬಿಜೆಪಿಯ ಲಗ್ಗೆಯೋ ಲಾಗವೋ?

ಬಿಜೆಪಿ ಪಶ್ಚಿಮ ಬಂಗಾಳದ ಪಂಚಾಯತ್ ಚುನಾವಣೆಯಲ್ಲಿ 2,500 ಸ್ಥಾನ ಗೆಲ್ಲುವುದರ ಮೂಲಕ ಕಮ್ಯುನಿಸ್ಟರ ಕೋಟೆಯೊಳಗೂ ಹೆಜ್ಜೆ ಹಾಕಿದೆ. ಕಳೆದ ಬಾರಿ ಬಿಜೆಪಿ ಕೇವಲ 35 ಸ್ಥಾನ ಮಾತ್ರ ಗೆದ್ದಿತ್ತು ಎಂದು ಬೀಗುತ್ತಿರುವ ಬಿಜೆಪಿ ಹಾಗೂ ಬಿಜೆಪಿ ವಾಸನೆಯ ಪತ್ರಿಕೆಗಳು ಕಣ್ಣು ಮುಚ್ಚಿ ಹಾಲು ಕುಡಿಯುವ ಬೆಕ್ಕಿನಂತೆ ವರ್ತಿಸುತ್ತಿವೆ.

ಕೇವಲ ಗೆದ್ದ ಸ್ಥಾನ ಮಾತ್ರ ಲೆಕ್ಕ ಹಾಕುತ್ತಿರುವ ಪತ್ರಿಕೆಗಳು ಬಿಜೆಪಿ ಸ್ಪರ್ಧಿಸಿದ್ದ ಸ್ಥಾನಗಳು ಎಷ್ಟು ಎಂಬುದನ್ನು ಬೇಕೆಂದೇ ಮರೆ ಮಾಚುತ್ತಿವೆ. ಬಿಜೆಪಿ 35 ಸ್ಥಾನ ಗೆದ್ದಾಗ ಕೇವಲ 2 ಸಾವಿರ ಸ್ಥಾನದಲ್ಲಿ ಮಾತ್ರ ಸ್ಪರ್ಧಿಸಿತ್ತು. ಆದರೆ ಈ ಬಾರಿ 40 ಸಾವಿರ ಸ್ಥಾನಗಳಲ್ಲಿ ಸ್ಪರ್ಧಿಸಿ 2,500 ಸ್ಥಾನ ಮಾತ್ರ ಗೆದ್ದು 37,500 ಸ್ಥಾನಗಳಲ್ಲಿ ಮೂತಿಗೆ ಇಕ್ಕಿಸಿಕೊಂಡಿದೆ!

ನಾನು ನೀನೂ ಜೋಡಿ

ಈ 2500 ಸ್ಥಾನ ಬಿಜೆಪಿ ಗೆದ್ದದ್ದು ಭಿಜೆಪಿಯ ಜೊತೆ ಕೈಕುಲುಕಿದ ಕಾಂಗ್ರೆನಿಂದಾಗಿ. 'ಕಾಂಗ್ರೆ,ಬಿಜೆಪಿ ಭಾಯಿ ಭಾಯಿ' ಎಂದು ಬೆನ್ನು ಚಪ್ಪರಿಸಿಕೊಂಡರು. ಕೇಂದ್ರದಲ್ಲಿ ಪಿ.ವಿ. ನರಸಿಂಹರಾಯರು ಬಿಜೆಪಿ ವಿರುದ್ಧ ಫೂತ್ಕರಿಸುವ ರೀತಿ ಇದು.

ಪಹಾಭಾಷ್‌ಗಿರಿ

ಸಿಪಿಐ(ಎಂ) ಚುನಾವಣೆಗಳಲ್ಲಿ ಗೂಂಡಾಗಿರಿ ನಡೆಸಿತು ಎಂದು ಕಾಂಗ್ರೆ, ಬಿಜೆಪಿ ಬೊಬ್ಬಿಟ್ಟಿತು. ಆದರೆ ಕೇಂದ್ರ ಸರ್ಕಾರವೇ ಕಳಿಸಿದ ಐಎಎಸ್ ಅಧಿಕಾರಿಗಳ ನಿಯೋಗ ಸಿಪಿಎಂ ಕಾನೂನುಬದ್ಧವಾಗಿ ಶಾಂತಿಯುತವಾಗಿ ಚುನಾವಣೆ ನಡೆಸಿದೆ ಎಂದು ಪಹಾಭಾಷ್‌ಗಿರಿ ನೀಡಿತು.

ಯಾರ ಗೂಂಡಾಗಿರಿ?

ಸಿಪಿಐ(ಎಂ) ಗೂಂಡಾಗಿರಿ ನಡೆಸಿತು ಎಂದು ಆರೋಪಿಸಿ ಬಿಜೆಪಿ, ಕಾಂಗ್ರೆ ಪಶ್ಚಿಮಬಂಗಾಳ ಬಂದ್‌ಗೆ ಕರೆ ನೀಡಿತು. ಕಾಂಗ್ರೆನ ಪ್ರಧಾನ ಕಾರ್ಯದರ್ಶಿ ವಿ. ಎನ್. ಗಾಡ್ಗೀಳ್ ಬಂದ್‌ಗೆ ಬೆಂಬಲ ಸಾರಿದಾಗ ಅವರದೇ ಪಕ್ಷದ ವಾರ್ತಾ ಮಂತ್ರಿ ಗಾಡ್ಗೀಳ್ ರವರನ್ನು ತರಾಟೆಗೆ ತೆಗೆದುಕೊಂಡರು. ಯಾಕೆಂದರೆ ಚುನಾವಣಾ ಹಿಂಸಾಚಾರದಲ್ಲಿ ಅತ್ಯಂತ ಹೆಚ್ಚು ಸಂಗಾತಿಗಳನ್ನು ಕಳೆದುಕೊಂಡಿದ್ದು ಸಿಪಿಎಂ. ಇದು ಬಯಲಾಗಿಬಿಟ್ಟರೆ ಎಂಬ ಆತಂಕ ಕಾಂಗ್ರೆಗಳದ್ದು.

ಸುದ್ದಿಯ ಹಿಂದಿನ ಕರಾಮತ್ತು

ಗಾಳಿ ಸುದ್ದಿ ಹಬ್ಬಿಸುವುದು ಕೋಮುವಾದಿಗಳಿಗಲ್ಲದೆ ಇನ್ನಾರಿಗೆ ಗೊತ್ತಿರುತ್ತದೆ. ಡಿ. 6 ಘಟನೆಯ ನಂತರ ಗಾಳಿ ಸುದ್ದಿ ಕ್ಷಣಮಾತ್ರದಲ್ಲಿ ಹಬ್ಬಿಸಿ ಜನರನ್ನು ಗೊಂದಲಕ್ಕೀಡುಮಾಡುವುದು ಅತ್ಯಂತ ಚೆನ್ನಾಗಿ ಇವರಿಗೆ ಕರಗತವಾಗಿದೆ. ಗೊಂದಲಕ್ಕೆ ತಳ್ಳಿ ಅದರ ಲಾಭ ಪಡೆಯುವುದು ಕಂಡವರ ಮಕ್ಕಳನ್ನು ಬಾವಿಗೆ ತಳ್ಳಿ ಆಳ ನೋಡುವಂತೆಯೇ ಸರಿ.

ಬಿಜೆಪಿಯ ರಾಷ್ಟ್ರ ಕಾರ್ಯಕಾರಿಣಿ ಬೆಂಗಳೂರಿನಲ್ಲಿ ನಡೆದು ಮುಕ್ತಾಯಕ್ಕೆ ಬಂದಾಗ ಪ್ರಬುದ್ಧ ಸಾಹಿತಿಗಳು ಅಚ್ಚುಮೆಚ್ಚಿನ ನಟರೆಲ್ಲರೂ ಬಿಜೆಪಿಯೊಡನೆ ಲಗ್ನ ಮಾಡಿಕೊಂಡ ಬೃಹತ್ ಪಾಕ್ ಕಾದಿತ್ತು.

ಈ ಪಟ್ಟಿಯಲ್ಲಿ ಹಿರಿಯ ಸಾಹಿತಿ ಡಾ. ಸಿದ್ದಯ್ಯ ಪುರಾಣಿಕ್, ಜಾತ್ಯಾತೀತ ನಿಲುವಿನ ಡಾ. ಹಾ. ಮಾ. ನಾಯಕ್, ಚಿತ್ರ ನಟರುಗಳಾದ ಜ್ಯೂಲಿ ಲಕ್ಷ್ಮಿ ಅಂಬರೀಶ್, ಜೈಜಗದೀಶ್, ಮುಖ್ಯಮಂತ್ರಿ ಚಂದ್ರು ದ್ವಾರಕೀಶ್ ಇತ್ಯಾದಿಗಳೆಲ್ಲರೂ ಬೇಲಿ ಹಾರಿದ್ದಾರೆ ಎಂಬ ಸುದ್ದಿಯನ್ನು ಮೇಲಿಂದ ಮೇಲೆ ಪ್ರಚಾರ ಪಡಿಸಲಾಯಿತು.

ಡಾ. ಸಿದ್ದಯ್ಯ ಪುರಾಣಿಕರಂತಹ ಹಿರಿಯರಿಗೆ ಸನ್ಮಾನ ಮಾಡುವ ಆಸೆ ತೋರಿಸಿ ಹಾ. ಮಾ. ನಾಯಕರನ್ನು ಇದಕ್ಕಾಗಿಯೇ ಮೇಲಿಂದ ಮೇಲೆ ಒತ್ತಾಯಿಸಿ, ಒಂದು ಕ್ಷಣ ಬಂದು ಹೋಗಿ ಎಂದು ಅಂಬರೀಶ್, ಜೈಜಗದೀಶ್, ಲಕ್ಷ್ಮಿಗೆ ಗೋಗರೆದ ಬಿಜೆಪಿ ಇವರೆಲ್ಲಾರೂ ಬಿಜೆಪಿಯನ್ನು ವರಿಸಿದರು ಎಂಬ ಸುದ್ದಿ ವ್ಯವಸ್ಥಿತವಾಗಿ ಪ್ರಚಾರ ಪಡೆದುಕೊಳ್ಳುವಂತೆ ನೋಡಿಕೊಂಡರು.

ಇದನ್ನೇ ಕಾಯುತ್ತಿದ್ದ ಚೆಡ್ಡಿ ಪತ್ರಕರ್ತರುಗಳು ರೋಮಾಂಚನಗೊಂಡು ಇದು ಇತಿಹಾಸದ ಸುವರ್ಣ ಘಟನೆ ಎಂಬಂತೆ ಪ್ರಚಾರ ನೀಡಿದರು.

ಈಗ ಡಾ. ಸಿದ್ದಯ್ಯ ಪುರಾಣಿಕ್, ಹಾ. ಮಾ. ನಾಯಕ್, ಅಂಬರೀಶ್, ಜೈಜಗದೀಶ್ ಎಲ್ಲರೂ ಬಿಜೆಪಿ ಸೇರಿಲ್ಲ ಎಂಬ ವಿವರಣೆಯನ್ನು ನೀಡಿದ್ದಾರೆ. ಜ್ಯೂಲಿಲಕ್ಷ್ಮಿ ಇದುವರೆಗೂ ತಾವು ಬಿಜೆಪಿ ಸೇರಿದ್ದಾಗಿ ಹೇಳಿಲ್ಲ.

ಪತ್ರಿಕೆ ಒದರಿದ್ದೆಲ್ಲಾ ಸತ್ಯವಲ್ಲ ಎನ್ನುವ ಕಾಲ ಬಂದಿದೆ. ಸುದ್ದಿಯ ಹಿಂದಿನ ಕರಾಮತ್ತನ್ನು ಪ್ರತಿ ಕ್ಷಣವೂ ಪರಿಶೀಲಿಸಬೇಕು.

ಜುಲೈ 14ರ ಮುಷ್ಕರಕ್ಕೆ ಸಿದ್ಧತೆ : ಬಿಜಾಪುರ ಜಿಲ್ಲೆಯಲ್ಲಿ ಕೈಮಗ್ಗ ನೇಕಾರರ ಮತ ಪ್ರದರ್ಶನ

ಸಿಐಟಿಯು ಅಖಿಲಭಾರತ ಮಟ್ಟದಲ್ಲಿ ರೂಪಿಸಿರುವ ಅಸಂಘಟಿತ ವಲಯದ ಕಾರ್ಮಿಕರ ವಿವಿಧ ಹಂತಗಳ ಚಳುವಳಿಯ ಅಂಗವಾಗಿ ಕರ್ನಾಟಕ ರಾಜ್ಯ ಕೈಮಗ್ಗ ನೇಕಾರ ಕಾರ್ಮಿಕರ ಸಮನ್ವಯ ಸಮಿತಿಯು ರಾಜ್ಯದಲ್ಲಿ ಕೈಮಗ್ಗ ನೇಕಾರರ ತಾಲೂಕ ಮಟ್ಟದ ಮತ ಪ್ರದರ್ಶನಕ್ಕೆ ಕರೆ ನೀಡಿತ್ತು. ಕೈಮಗ್ಗದ ನೇಕಾರರು ಅತೀ ಹೆಚ್ಚಿನ ಸಂಖ್ಯೆಯಲ್ಲಿರುವ ಬಿಜಾಪುರ ಜಿಲ್ಲೆಯ ನಾಲ್ಕು ಪ್ರಮುಖ ತಾಲ್ಲೂಕುಗಳಲ್ಲಿ ಈ ಕಾರ್ಯಕ್ರಮವನ್ನು ನಡೆಸಲಾಗಿದ್ದು ಇನ್ನುಳಿದ ಜಿಲ್ಲೆಗಳಲ್ಲಿ ಜುಲೈ 14ರ ಅಖಿಲ ಭಾರತ ಮುಷ್ಕರದ ಒಳಗಾಗಿ ತಾಲ್ಲೂಕು ಮಟ್ಟದ ಮತ ಪ್ರದರ್ಶನಗಳನ್ನು ಪೂರ್ಣಗೊಳಿಸಲಾಗುವುದು.

ರಬಕವಿ ಮತ್ತು ಬನಹಟ್ಟಿಯಲ್ಲಿರುವ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಎರಡು ಪ್ರಾಜೆಕ್ಟ್‌ಗಳ ಅಡಿಯಲ್ಲಿ ಬರುವ ನೇಕಾರರು ಮೇ 23,1993 ರಂದು ಜಮಖಂಡಿಯಲ್ಲಿ ಮೆರವಣಿಗೆ ನಡೆಸಿ ಉಪವಿಭಾಗಾಧಿಕಾರಿಗಳ ಕಛೇರಿ ಎದುರು ಮತಪ್ರದರ್ಶನ ಮಾಡಿ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ ಬಹಿರಂಗ ಸಭೆಯಲ್ಲಿ ಸಮನ್ವಯ ಸಮಿತಿಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿಯವರು ಮಾತನಾಡಿ ನಿಗಮದ ನೇಕಾರರಿಗೆ ತಿಂಗಳಲ್ಲಿ 26 ದಿನಗಳ ಕೆಲಸಕ್ಕೆ ಬೇಕಾಗುವಷ್ಟು ನೂಲು ಪೂರೈಕೆ ಮತ್ತು ತುಟ್ಟಿಭತ್ತೆ ಸಹಿತವಾದ ಕನಿಷ್ಠ ವೇತನ ನಿಗದಿಗೆ ಒತ್ತಾಯಿಸಿ ಜುಲೈ 14 ರಂದು ರಾಜ್ಯಾದ್ಯಂತ ನೇಕಾರರು ಮುಷ್ಕರ ಮಾಡುವರು ಎಂದು ಘೋಷಿಸಿದರು. ಸಭೆಯಲ್ಲಿ ಭಾಗವಹಿಸಿದ್ದ ಜನತಾದಳದ ಮಾಜಿ ಮಂತ್ರಿಗಳಾಗಿದ್ದ ಶ್ರೀ ಜೆ.ಎಸ್. ಬಾಗಲಕೋಟೆಯವರು ಮಾತನಾಡಿ ಕೈಮಗ್ಗದ ನೇಕಾರರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು. ಸಮನ್ವಯ ಸಮಿತಿಯ ಉಪಾಧ್ಯಕ್ಷರಾದ ಕಾಂ ಡಿ. ಎಂ. ಕಲಾಸಿ ಮತ್ತು ಕಾಂ. ವಿ.ಜೆ. ಮಾಗಿನಹಳ್ಳಿ ಉಪಸ್ಥಿತರಿದ್ದರು. ಕಾಂ.ಸದಾಶಿವ ಗೋಂದಕರ ಮೆರವಣಿಗೆಯ ನೇತೃತ್ವವನ್ನು ವಹಿಸಿದ್ದರು.

ಮುಧೋಳ್ ತಾಲ್ಲೂಕಿನ ಮಹಾಲಿಂಗಪುರ, ಬೆಳಗಲಿ ಮೊದಲಾದ ಗ್ರಾಮಗಳ ನೇಕಾರರು ತಾಲ್ಲೂಕ್ ಕೇಂದ್ರದಲ್ಲಿ ಮೆರವಣಿಗೆ ನಡೆಸಿ ತಹಶಿಲ್ದಾರರ ಕಛೇರಿ ಎದುರು ಸಾಮೂಹಿಕ ಧರಣಿ ನಡೆಸಿ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು. ಕಾಂ ಗಜಾನನ ಹಾಸಿಲಕರ್, ಪ್ರಕಾಶ್ ರಾವ್ ಮೊದಲಾದವರು ಮೆರವಣಿಗೆಯ ನೇತೃತ್ವವಹಿಸಿದ್ದರು. ಅಂದು ರಾತ್ರಿ ಮಹಾಲಿಂಗಪುರದಲ್ಲಿ ಏರ್ಪಡಿಸಲಾಗಿದ್ದ ನೇಕಾರರ ಸಭೆಯಲ್ಲಿ ಕಾಂ ನಿತ್ಯಾನಂದಸ್ವಾಮಿಯವರು ಭಾಗವಹಿಸಿ ಮಾತನಾಡಿದರು.

ಇಲಕಲ್ಲ್ ಕೈಮಗ್ಗ ನೇಕಾರರ ಒಂದು ಪ್ರಮುಖ ಕೇಂದ್ರ, ಸುಪ್ರಸಿದ್ಧ ಕೃತಕ ರೇಷ್ಮೆಯ 'ಇಲ್‌ಕಲ್ ಸೀರೆ' ಯನ್ನು ಇಲ್ಲಿ ತಯಾರಿಸಲಾಗುತ್ತಿದೆ. ಇಲ್ಲಿಯ ನೇಕಾರರು ಮೇ 25,1993 ರಂದು ನಗರದಲ್ಲಿ ಮೆರವಣಿಗೆ ನಡೆಸಿ ಹುನಗುಂದ ತಾಲ್ಲೂಕ್ ತಹಶೀಲ್ದಾರರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಕಾಂ ನಿತ್ಯಾನಂದ ಸ್ವಾಮಿ ಅವರು ಸುಪ್ರಿಂ ಕೋರ್ಟ್ ಇತ್ತೀಚೆಗೆ ಕೊಟ್ಟಿರುವ ತೀರ್ಪಿನ ಪ್ರಕಾರ ಕೈ ಮಗ್ಗಕ್ಕೆ ಮೀಸಲಿಟ್ಟಿರುವ ಬಣ್ಣ ಬಟ್ಟೆಗಳ ಉತ್ಪಾದನೆಯನ್ನು ಅಕ್ರಮವಾಗಿ ವಿದ್ಯುತ್ ಮಗ್ಗಗಳಲ್ಲಿ ಮಾಡುತ್ತಿರುವುದನ್ನು ಕಟ್ಟುನಿಟ್ಟಾಗಿ ಪ್ರತಿಬಂಧಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಕಾಂ ಶಂಕ್ರಪ್ಪ ದಟ್ಟಿ ಮತ್ತು ಶಂಕ್ರಪ್ಪ ಹಡಪದ ಅವರು ಮೆರವಣಿಗೆಯ ನೇತೃತ್ವ ವಹಿಸಿದ್ದರು. ಇತ್ತೀಚೆಗೆ ಮಳೆಗಾಳಿಯಿಂದ ಹಾನಿಗೊಳಗಾದ ನೇಕಾರ ಕಾಲೋನಿಯ ಮನೆಗಳನ್ನು ಕಾಂ. ನಿತ್ಯಾನಂದಸ್ವಾಮಿ ವೀಕ್ಷಿಸಿದರು.

ಬಾದಾಮಿ ತಾಲೂಕಿನ ಗುಳೇದಗುಡ್ಡ ನೇಕಾರಿಕೆಯ ಇನ್ನೊಂದು ಪ್ರಮುಖ ಕೇಂದ್ರ. ಇಲ್ಲಿಯ ಕೈಮಗ್ಗಗಳಲ್ಲಿ ತಯಾರಿಸಲಾಗುತ್ತಿರುವ ರೇಷ್ಮೆ ಖಣಗಳು ಭಾರಿ ಪ್ರಸಿದ್ಧ. ಇಲ್ಲಿಯ ನೇಕಾರರು ಶ್ರೀಮಂತ ಸಾಹುಕಾರರ ಅಡಿಯಲ್ಲಿ ಸುಮಾರು ಜೀತದಾಳುಗಳಂತೆ ಕೆಲಸಮಾಡುತ್ತಾರೆ. ಇವರಿಗೆ ಸರ್ಕಾರದ ಯಾವುದೇ ಯೋಜನೆಯ ಪ್ರಯೋಜನ ಇಲ್ಲಿಯವರೆಗೆ ಲಭಿಸಿಲ್ಲ. ಮೇ 26,1993 ರಂದು ಗುಳೇದಗುಡ್ಡದ ನೇಕಾರರು ಕೆಂಬಾವುಟಗಳನ್ನು ಹಿಡಿದು, ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಉಪತಹಶಿಲ್ದಾರರ ಕಛೇರಿ ಎದುರು ಪ್ರದರ್ಶನ ಮಾಡಿ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ನೇಕಾರರನ್ನು ಉದ್ದೇಶಿಸಿ ಮಾತನಾಡಿದ ಕಾಂ ನಿತ್ಯಾನಂದ ಸ್ವಾಮಿಯವರು ಕಚ್ಚಾ ಮಾಲಿನ ಪೂರೈಕೆಯಲ್ಲಿ ಕಡಿತ ಮಾಡಿರುವ ಸಾಹುಕಾರರ ಕ್ರಮಮವನ್ನು ಖಂಡಿಸಿದರು. ಕಾಂ . ವಿ.ಜೆ. ಮಾಗಿನಹಳ್ಳಿಯವರು ಮಾತನಾಡುತ್ತಾ ನೇಕಾರರು ಸಾಹುಕಾರರಿಗೆ ಹೆದರಿ ಸಂಘಟಿತರಾಗಲು ಹಿಂದೇಟು ಹಾಕಬಾರದೆಂದು ಹೇಳಿದರು. ಕಾಂ. ಡಿ.ಎಂ. ಕಲಾಸಿ ಅವರು ಮಾತನಾಡಿ ಜುಲೈ 14ರ ಮುಷ್ಕರವನ್ನು ಯಶಸ್ವಿ ಮಾಡಲು ನೇಕಾರರಿಗೆ ಮನವಿ ಮಾಡಿದರು. ಸಭೆ ನಡೆಯುತ್ತಿದ್ದಾಗ ಅನಾವಶ್ಯಕವಾಗಿ ಮಧ್ಯಪ್ರವೇಶಿಸಿ ತಕರಾರು ಮಾಡಲಾರಂಭಿಸಿದ ಉಪತಹಶೀಲ್ದಾರರ ಕ್ರಮಮವನ್ನು ನೇಕಾರರು ತೀವ್ರವಾಗಿ ಪ್ರತಿಭಟಿಸಿದರು. ಪೊಲೀಸರು ಮಧ್ಯ ಪ್ರವೇಶಿಸಿ ನೇಕಾರರನ್ನು ಸಮಾಧಾನ ಪಡಿಸಿದರು.

ಸಭೆಯನ್ನು ಸರಿಯಾಗಿ ಮುಗಿಸಿದ ನಂತರವೇ ಉಪತಹಶಿಲ್ದಾರರಿಗೆ ಮನವಿಯನ್ನು ಕೊಟ್ಟು ಪ್ರತಿಭಟನೆಯನ್ನು ಹಿಂತೆಗೆದುಕೊಳ್ಳಲಾಯಿತು.

ಬಿಜಾಪುರ ಜಿಲ್ಲೆಯ ಮುಧೋಳ್, ಜಮಖಂಡಿ, ಹುನಗುಂದ ಮತ್ತು ಬಾದಾಮಿ ತಾಲ್ಲೂಕುಗಳಲ್ಲಿ ನಡೆಸಲಾದ ಈ ಪ್ರದರ್ಶನಗಳಿಂದ ಜುಲೈ 14ರ ಮುಷ್ಕರಕ್ಕೆ ಒಳ್ಳೆಯ ಸಿದ್ಧತೆ ಮಾಡಿದಂತಾಗಿದೆ.

ರಾಜ್ಯದಲ್ಲಿ ಕಾಂಗ್ರೆಸ್(ಐ) ಮತ್ತು ಬಿಜೆಪಿಗಳನ್ನು ಸೋಲಿಸಬಲ್ಲ ಪರ್ಯಾಯವನ್ನು ಕಟ್ಟೋಣ

- ಪಿ.ರಾಮಚಂದ್ರರಾವ್

ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆ ಕಚ್ಚಾಟದಲ್ಲಿ ಮುಳುಗಿದೆ.ಈ ಸಂದರ್ಭವನ್ನು ಉಪಯೋಗಿಸಿಕೊಂಡು ಮತೀಯತೆಯ ಭಾವನೆಯನ್ನು ಎಬ್ಬಿಸಿ, ಅದರ ಜತೆಯಲ್ಲಿ 'ತಾಂತ್ರಿಕ'ವಾಗಿ ಜನತೆಯ ಎಲ್ಲಾ ವಿಭಾಗಗಳಿಗೆ ಎಲ್ಲಾ ರೀತಿಯ ಭರವಸೆಗಳನ್ನು ಕೋಮುವಾದ ಕೊಟ್ಟು ಅಧಿಕಾರಕ್ಕೇರಲು ಬಿಜೆಪಿ ತಯಾರಾಗಿ ನಿಂತಿದೆ. ರಾಜ್ಯದ ಹಿತದೃಷ್ಟಿಯಿಂದ ರಾಜ್ಯದಲ್ಲಿ ಕಾಂಗ್ರೆಸ್(ಐ)ನ ಅವಿರತ ರಾಜ್ಯಭಾರವನ್ನು ಮುರಿದು 1983-85 ರಲ್ಲಿ ರಾಮಕೃಷ್ಣ ಹೆಗ್ಡೆ ಎಡಪಕ್ಷಗಳ ಸಹಾಯದಿಂದ ನಡೆಸಿದ ಜನತಾದಳದ ಆಡಳಿತೆಯಂತಹ ಆಡಳಿತೆಯನ್ನು ಪುನಃ ಅಧಿಕಾರಕ್ಕೆ ತರಲು ಜನತೆ ಮುಂದಾಗಬೇಕು.

ಕರ್ನಾಟಕ ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸಿ ಜನತೆಯ ಹಿತಗಳನ್ನು ರಕ್ಷಿಸುವ ಈ ಪರ್ಯಾಯವನ್ನು ಹೇಗೆ ಕಟ್ಟಿ ಬೆಳೆಸುವುದು ಎಂಬುದನ್ನು ಪರ್ಯಾಲೋಚಿಸೋಣ.

ಕಾಂಗ್ರೆಸ್(ಐ) ರಾಜ್ಯದಲ್ಲಿ 1989 ರ ಚುನಾವಣೆಯಲ್ಲಿ ಅತ್ಯಧಿಕ ಬಹುಮತ ಪಡೆದು ಅಧಿಕಾರಕ್ಕೇರಿತು. ಜನತಾದವನ ಒಳಜಗಳವೇ ಬಹಿರಂಗಕ್ಕೆ ಬಂದು, ತೀವ್ರಗೊಂಡು ಅದು ಚುನಾವಣೆಯಲ್ಲಿ ಭಿನ್ನ ಭಿನ್ನ ಪಕ್ಷಗಳಾಗಿ ಸ್ಪರ್ಧಿಸಿದುದು 1989 ರಲ್ಲಿ ಕಾಂಗ್ರೆಸ್(ಐ) ಪುನಃ ಅಧಿಕಾರಕ್ಕೆ ಬರಲು ಮುಖ್ಯಕಾರಣ.

ಇರಲಿ, ಅಧಿಕಾರಕ್ಕೆ ಬಂದ ಕಾಂಗ್ರೆ ಏನು ಮಾಡಿತು? ಜನತಾದಳದ ಸರಕಾರವು ರಾಜ್ಯದ ಏಳಿಗೆಗೆ ತಂದ ಜನಪರ ಅಭಿವೃದ್ಧಿಯ ಕಾರ್ಯಕ್ರಮಗಳನ್ನೆಲ್ಲಾ ಕಿತ್ತು ಹಾಕಿತು. ಮಂಡಲ್ ಪಂಚಾಯತ್ ಜಿಲ್ಲಾ ಪರಿಷತ್‌ಗಳನ್ನು ಸ್ಥಗಿತಗೊಳಿಸಿ ಚುನಾವಣೆಗಳನ್ನು ನಡೆಸದೆ ಮೂರು ವರ್ಷ ದೂಡಿತು. ಆ ಮೂಲಕ ವಿಕೇಂದ್ರೀಕರಣ ತತ್ವಕ್ಕೇನೇ ಕೊಡಲಿ ಏಟು ಕೊಟ್ಟಿತು. ಸಹಕಾರಿ ಸಂಸ್ಥೆಗಳ ಚುನಾವಣೆಯನ್ನೂ ಸ್ಥಗಿತಗೊಳಿಸಿತು. ರೈತರ ಸಾಲದ ರದ್ದತಿಯ ನೀತಿಯನ್ನು ತ್ಯಜಿಸಿತು. ಆ ಪಕ್ಷದ ರಾಷ್ಟ್ರೀಯ ಧೋರಣೆಗಳಿಗನುಸಾರವಾಗಿ ವಿದ್ಯುಚ್ಛಕ್ತಿ, ಹಾಲು, ಬಸ್‌ದರ, ನೀರಿನ ತೆರಿಗೆ ಇತ್ಯಾದಿಗಳನ್ನು ಅಧಿಕಗೊಳಿಸಿತು. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಕಲುಷಿತಗೊಳಿಸಿತು. ಪುನಃ ಪೋಲೀಸ್ ದರ್ಬಾರನ್ನು ರಾಜ್ಯದಲ್ಲಿ ಸ್ಥಾಪಿಸಿ ಲಾಕಪ್‌ಗಳಲ್ಲಿ ಹತ್ತಾರು ಸಾವುಗಳಿಗೆ ಕಾರಣೀಭೂತವಾಯಿತು. ಸಾಮೂಹಿಕ ಟ್ರಾನ್ಸ್‌ಫರ್ ಮಾಡುವ ಮೂಲಕ ಎಲ್ಲರೂ ಸುಲಭದಲ್ಲಿ ಹಣ ಮಾಡುವ ಹೊಸ ವಿಧಾನವನ್ನು ಕಾಂಗ್ರೆಸ್(ಐ) ಜಾರಿಗೆ ತಂದಿತು.

ಜನಗಳ ಅತೃಪ್ತಿ ಮರೆಮಾಡಿಸಲು ಮುಖ್ಯಮಂತ್ರಿ ಬದಲಾವಣೆ

ಇದರಿಂದೆಲ್ಲಾ ಕಾಂಗ್ರೆಸ್(ಐ) ಸರಕಾರದ ಮೇಲೆ ಜನಸಾಮಾನ್ಯರಿಗೂ, ಎಲ್ಲಾ ವಿಭಾಗಗಳ ಜನತೆಗೂ ಅತೃಪ್ತಿ ಬೆಳೆಯುತ್ತಾ ಹೋದಂತೆ ಕಾಂಗ್ರೆಸ್(ಐ) ತಂತ್ರಬದ್ಧವಾಗಿ ಮುಖ್ಯಮಂತ್ರಿ ವಿರೇಂದ್ರಪಾಟೀಲ್‌ರನ್ನೂ ಅಧಿಕಾರದಿಂದ ಕೆಳಗೆ ಇಳಿಸಿತು - ಕಾಂಗ್ರೆಸ್ ಹೈಕಮಾಂಡಿನ ಹೇಳಿಕೆಯ ಆಧಾರದಲ್ಲಿ ಮತ್ತು ಬಿಜೆಪಿ ಜತೆ ಸೇರಿ ಕಾಂಗ್ರೆಸ್(ಐ) ಪಕ್ಷದ ಕೆಲವು ಪ್ರಮುಖ ಮುಖಂಡರೇ ರಾಜ್ಯದಲ್ಲಿ ಅಲ್ಲಲ್ಲಿ ಮತೀಯ ಗಲಭೆಗಳನ್ನು ಸಂಘಟಿಸುವ ಮೂಲಕ!

ಕಾಂಗ್ರೆಸ್(ಐ)ನ ಎರಡನೇ ಮುಖ್ಯಮಂತ್ರಿ ಬಂಗಾರಪ್ಪನವರು ಅಧಿಕಾರಕ್ಕೆ ಬಂದರು. ಬಂಗಾರಪ್ಪನವರು ಹಿಂದುಳಿದವರು ಆದಕಾರಣ ರಾಜ್ಯದಲ್ಲಿ ಎಲ್ಲಾ ಹಿಂದುಳಿದವರ ಏಳಿಗೆಗೆ ಅವರು ದುಡಿಯುವವರು ಎಂದು ಸಾರಲಾಯಿತು. ಆಶ್ರಯ, ವಿಶ್ವ ಆರಾಧನೆ ಇತ್ಯಾದಿ ಹತ್ತಾರು ಅಗ್ಗದ ಜನಪ್ರಿಯತೆ ಗಿಟ್ಟಿಸುವ ಸ್ಕೀಮುಗಳನ್ನು ಜನತೆಯ ಮುಂದಿಟ್ಟು, ಈ ಎಲ್ಲಾ ಬಾಬ್ತು ನೂರಾರು ಕೋಟಿಗಳನ್ನು ಖರ್ಚುಮಾಡಿ ಜನಸಾಮಾನ್ಯರ 'ವಸತಿ' ಮತ್ತು 'ಉದ್ಯೋಗ' ಪ್ರಶ್ನೆಗಳಿಗೆ ಸಾಮೂಹಿಕ ಪರಿಹಾರ ಕಂಡುಹಿಡಿಯಲಾಗುವುದು ಎಂದು ಸಾರಲಾಯಿತು. ಆದರೆ ಕೇವಲ ಒಂದೇ ವರ್ಷದಲ್ಲಿ ಈ ಎಲ್ಲಾ ಸ್ಕೀಮುಗಳ ಹೆಸರಿನಲ್ಲಿ ಸರ್ಕಾರದ ಖಜಾನೆಯ ಲೂಟಿ ನಡೆಯಿತು. ಜತೆಯಲ್ಲಿ ಸರ್ಕಾರಿ ಭೂಮಿ- ಅದು ಗ್ರಾಮಾಂತರದಲ್ಲಿ ಪೇಟೆಪಟ್ಟಣಗಳಲ್ಲಿರಲಿ- ಯನ್ನು ಬಡವರಿಗೆ ಹಂಚಲಾಗುವುದು ಎಂದು ಹೇಳಿ ಹಣವಂತವರಿಗೆ ಲಂಚದ ಮೊಬಲಗಿನ ಆಧಾರದ ಹಂಚಲಾಯಿತು. ವರ್ಷ ವರ್ಷ ಸಾಮೂಹಿಕವಾಗಿ ಟ್ರಾನ್ಸ್‌ಫರ್ ಮೂಲಕ ಕೋಟಿಗಟ್ಟಲೆ ಹಣವನ್ನು ಎನ್.ಜಿ.ಒ ಮತ್ತು ಆಫೀಸರ್‌ಗಳಿಂದ ವಸೂಲಿ ಮಾಡಲಾಯಿತು. ಭ್ರಷ್ಟಅಧಿಕಾರಿಗಳಿಗೆ ಭಡ್ತಿ ಕೊಡಲಾಯಿತು. ಪ್ರಾಮಾಣಿಕ ಆಫೀಸರ್‌ಗಳನ್ನೇ ಎಲ್ಲೆಲ್ಲಿ ಕಳುಹಿಸಲಾಯಿತು. ಸತಾಯಿಸಲಾಯಿತು ಕೂಡಾ. ಅದೇ ವೇಳೆ, ಬಂಗಾರಪ್ಪ ಸರಕಾರ "ಲಿಕ್ಕರ್‌ಲಾಬಿ"ಗೆ ಪ್ರತ್ಯಕ್ಷವಾಗಿ ಅನುಕೂಲತೆ ಒದಗಿಸಿಕೊಟ್ಟು ಅದರ ಹೇಳಿಕೆಗೆ ಅನುಸಾರವಾಗಿ ನಡೆಯುವ ಸರ್ಕಾರವೆಂಬ ಅಪಕೀರ್ತಿ ಪಡೆಯಿತು. ಕೋಟಿ ಎರಡು-ಎರಡುವರೆ ಕೋಟಿರೂಪಾಯಿಬೆಲೆಯ ಕಂಪ್ಯೂಟರ್‌ಗಳನ್ನು ಐದು-ಐದುವರೆ ಕೋಟಿ ರೂಪಾಯಿಕೊಟ್ಟು ಕ್ಲಾಸಿಕ್ ಕಂಪೆನಿಗೆ-ಸರ್ಕಾರಿ ಆಫೀಸುಗಳಿಗೆಲ್ಲಾ ಅವಶ್ಯಕತೆ ಇದ್ದಲ್ಲಿಯೂ, ಅನವಶ್ಯಕವಾಗಿರುವಲ್ಲಿಯೂ, ಕಂಪ್ಯೂಟರ್ ಜೋಡಿಸುವ ಕಾರ್ಯಕ್ರಮಕ್ಕೆ ಸಹಿ ಹಾಕಲಾಯಿತು.

ರಾಜ್ಯದಲ್ಲಿ ಈ ಭ್ರಷ್ಟಾಚಾರ ತೀರಾ ಕೆಟ್ಟ ವಾತಾವರಣವನ್ನು ಸೃಷ್ಟಿಸಿತು. ಕಾಂಗ್ರೆ ಸರ್ಕಾರದ ಮೇಲೆ ಜನತೆಯ ಕೋಪ ಏರುತ್ತಾ ಹೋಯಿತು.

ಇನ್ನೊಬ್ಬ ಮುಖ್ಯಮಂತ್ರಿಯ ಬದಲು ಮತ್ತೊಬ್ಬ ಮುಖ್ಯಮಂತ್ರಿ

ಈ ಪರಿಸ್ಥಿತಿಯನ್ನು ನೋಡಿ ಕಾಂಗ್ರೆ ತನ್ನ "ಬಹಿರಂಗತಂತ್ರ" ಕ್ಕನುಸಾರವಾಗಿ ಭಿನ್ನತೆಯ ನಾಟಕವಾಡಿ ಬಂಗಾರಪ್ಪನವರ ಸ್ಥಾನದಲ್ಲಿ ವೀರಪ್ಪಮೊಯಿಲಿಯವರನ್ನು ಹೊಸ ಮುಖ್ಯಮಂತ್ರಿಯನ್ನಾಗಿ ಮಾಡಿತು.

ವೀರಪ್ಪಮೊಯಿಲಿಯವರ ಸರಕಾರ ಅಧಿಕಾರಕ್ಕೆ ಬಂದಾಗ ನಮ್ಮ ಪಕ್ಷವೂ ಪರಿಸ್ಥಿತಿಯನ್ನು ವಿಶ್ಲೇಷಣೆ ಮಾಡಿ "ಕೇವಲ ಮುಖ್ಯಮಂತ್ರಿಗಳನ್ನು ಬದಲಾಯಿಸಿದರೆ ಪರಿಸ್ಥಿತಿಯಲ್ಲಿ ಏನೂ ಬದಲಾವಣೆಯಾಗುವುದಿಲ್ಲ ಆಡಳಿತ ಸುಧಾರಿಸುವುದಿಲ್ಲ"ವೆಂದು ಹೇಳಿಕೆ ಕೊಟ್ಟಿತು.... ಈಗ ಆ ಹೇಳಿಕೆ ಅಕ್ಷರಶಃ ನಿಜವಾಗಿದೆ.

ಕರ್ನಾಟಕ ಸರ್ಕಾರ ವೀರಪ್ಪಮೊಯಿಲಿರವರ ನೇತೃತ್ವದಲ್ಲಿ ನಡೆಯುತ್ತಿರುವಾಗಲೂ ಅಷ್ಟೇ ಕುಸಿಯುತ್ತಿದೆ. ಇಂದು ಹೋಗುತ್ತದೇ ನಾಳೆ ಹೋಗುತ್ತದೆ ಎಂಬ ರೀತಿಯಲ್ಲಿ ಕಾಂಗ್ರೆಸ್(ಐ) ಪಕ್ಷದೊಳಗೆ ಹಾಗೂ ಕಾಂಗ್ರೆಸ್(ಐ) ಮಂತ್ರಿ ಮಂಡಳದ ಒಳಗೆ ತೀವ್ರ ಭಿನ್ನತೆ, ಬಿಕ್ಕಟ್ಟು ಎದ್ದುಬಂದಿದೆ. ಎಲ್ಲಾ ವಿರೋಧಪಕ್ಷಗಳು "ರಾಜ್ಯದ ಬೊಕ್ಕಸ ಖಾಲಿಯಾಗಿದೆ, ಎಲ್ಲಾ ಜನಪರ ಅಭಿವೃದ್ಧಿ ಕಾರ್ಯಕ್ರಮಗಳು ಸ್ಥಗಿತವಾಗಿವೆ" ಎಂದು ಹೇಳಿದುದನ್ನು "ಸರಿ...... ಸರಕಾರದ ಬೊಕ್ಕಸ ಖಾಲಿ ... ಜನ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸರ್ಕಾರದಲ್ಲಿ ಹಣವೇ ಇಲ್ಲ" ವೆಂದು ಕಾಂಗ್ರೆಸ್ಸಿನ ಮಂಡಳದ ಹಿರಿಯ ಸೀನಿಯರ್ ಮಂತ್ರಿಗಳೇ- ಎಸ್.ಎಂ.ಕೃಷ್ಣ ರಾಜಶೇಖರ ಮೂರ್ತಿಯವರೇ ಹೇಳಿದ್ದಾರೆ? ಮಾತ್ರವಲ್ಲ ವೀರಪ್ಪಮೊಯಿಲಿಯವರ ಎಲ್ಲಾ ಹೇಳಿಕೆಗಳಿಗೆ ಸವಾಲು ಹಾಕುತ್ತಿದ್ದಾರೆ.

ಪಾಪ, ಮೊಯಿಲಿಯವರು 'ನಾನು ಯಾವುದೇ ಲಿಕ್ಕರ್‌ಲಾಬಿಗೆ ವಿಧೇಯನಾಗಿ ಕೆಲಸ ಮಾಡುತ್ತಿಲ್ಲ, ನಾನು ಸುಪ್ರೀಂಕೋರ್ಟ್ ನಿರ್ಧರಿಸಿದಂತೆ ವೃತ್ತಿಪರ ಕಾಲೇಜುಗಳಲ್ಲಿ ಕ್ಯಾಪಿಟೇಶನ್ ಫೀ ಪಿಡುಗನ್ನು ನಿಲ್ಲಿಸಿಯೇ ಬಿಡುತ್ತೇನೆ ಮತ್ತು ಚಿನ್ನಪ್ಪ ರೆಡ್ಡಿಯ ವರದಿಯನ್ನು ಜೂನ್ ತಿಂಗಳ ಒಳಗೆ ಜಾರಿಗೆ ತಂದೇ ತೀರುತ್ತೇನೆ' ಎಂದೆಲ್ಲಾ ಸಾರುತ್ತಾ ಬಂದವರು ಈಗ ಈ ಪ್ರತಿಯೊಂದು ವಿಷಯದಲ್ಲೂ ಸ್ಥಾಪಿತ ಹಿತಾಸಕ್ತಿಗಳ ಒತ್ತಡಕ್ಕೆ ಬಲಿಯಾಗಿ ತಮ್ಮ ನಿಲುವುಗಳಲ್ಲಿ ಸಡಿಲಿಕೆ - ರಿಯಾಯಿತಿಗಳನ್ನು ತರುತ್ತಲೇ ಇರುವಾಗ...... ಇದು ಸಾಲದು ರಾಜ್ಯದಲ್ಲಿ ಕಾಂಗ್ರೆ ಪಕ್ಷದ ಸರ್ಕಾರವು ಮುಂದುವರಿದುಕೊಂಡು ಹೋಗಬೇಕಾದರೆ ನೇರವಾಗಿ "ಎಲ್ಲಾ ಸ್ಥಾಪಿತ ಹಿತಾಸಕ್ತಿಗಳ" ಹಿತರಕ್ಷಣೆ ಮಾಡಲು ಕಾಂಗ್ರೆಸ್ (ಐ) ಪಕ್ಷ ಮತ್ತು ಸರ್ಕಾರ ಮುಂದಾಗಬೇಕು, ಇಲ್ಲವಾದರೆ ಈ ಹಿತಾಸಕ್ತಿಗಳು ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೇ ತರುವರು ಎಂಬ ಅಭಿಪ್ರಾಯದಂತೆ ಪುನಃ ತೀವ್ರತೆ, ಭಿನ್ನತೆ, ಪ್ರತಿಭಟನೆ ಕಾಂಗ್ರೆಸ್(ಐ) ಪಕ್ಷಮತ್ತು ಕಾಂಗ್ರೆಸ್ ಮಂತ್ರಿ ಮಂಡಳದಲ್ಲಿ ಭುಗಿಲೆದ್ದು ಬಂದಿದೆ.

ಎಸ್.ಎಂ.ಕೃಷ್ಣ, ರಾಜಶೇಖರಮೂರ್ತಿ ವಿರೇಂದ್ರಪಾಟೀಲರ ಮಗ ಎಂ.ಪಿ. ಜವಳಿ... .. ಮತ್ತಿತರರು.... ಬಂಗಾರಪ್ಪನವರ ಗುಂಪಿನ ಪ್ರತ್ಯಕ್ಷ ಬೆಂಬಲದಿಂದ ಪುನಃ ಮುಖ್ಯಮಂತ್ರಿಯನ್ನು ಬದಲಿಸಲು ಹೊರಟಿದ್ದಾರೆ.....

ಫಲವಾಗಿ, ರಾಜ್ಯದಲ್ಲಿ ಸರ್ಕಾರವೆಂಬುದೇ ಇಲ್ಲದಂತಾಗಿದೆ. ದಿನ ಬೆಳಗಾದರೆ ಈ ಭಿನ್ನಮತೀಯರ ಹೇಳಿಕೆಗಳು, ಸಭೆಗಳು, ಪಿತೂರಿಗಳು, ಮನವಿಗಳು... ಆಡಳಿತೆಯ ದೂಷಣೆ, ಖಜಾನೆಯ ಖಾಲಿ.... ಎಂಬ ಸುದ್ದಿಗಳೇ ಜನರ ಮುಂದೆ ಬರುತ್ತಿದೆ.... ಸರ್ಕಾರದ ಎಲ್ಲಾ ಜನಪರ ಕಾರ್ಯಕ್ರಮ ಸ್ಥಗಿತ... ಪುನಃ ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರ......

ಪುಟ 7ನೋಡಿ

ಲೀಗ್ ಭದ್ರಕೋಟೆಯಲ್ಲಿ - ಕೆಂಬಾವುಟ

ಕಳೆದ ಹದಿನಾಲ್ಕುವರ್ಷಗಳಿಂದ ತಮ್ಮಭದ್ರ ಕೋಟೆಯನ್ನಾಗಿರಿಸಿಕೊಂಡಿದ್ದ ಗುಲ್ಬರ್ಗಾ ನಗರದ ಮುಸ್ಲಿಮ್ ಚೌಕಿನಲ್ಲಿ ಜೂನ್ 24, 1993 ರಂದು ರಾತ್ರಿ ಇಡೀ ಹಲವಾರು ಕೆಂಬಾವುಟಗಳು ಹಾರಾಡಿದವು. ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದ ಕಾಲದಿಂದಲೂ, ಅನಂತರ ರಜಾಕರ ದಬ್ಬಾಳಿಕೆಯ ವಿರುದ್ಧ, ಭಾರತದಲ್ಲಿ ಹೈದರಾಬಾದ್ ಸಂಸ್ಥಾನದ ವಿಲೀನಕ್ಕಾಗಿ ನಡೆದ ಚಳುವಳಿ ಸಮಯದಲ್ಲೂ, ಭೂಮಾಲಕರ ವಿರುದ್ಧ ರೈತರು ನಡೆಸಿದ ಸಶಸ್ತ್ರ ಹೋರಾಟದ ಚರಿತ್ರಾರ್ಹ ತೆಲಂಗಾಣ ಚಳುವಳಿಯ ಕಾಲಘಟ್ಟದಲ್ಲೂ ಅಂದೂ ಹೈದರಾಬಾದ್ ಸಂಸ್ಥಾನ ಒಂದು ಭಾಗವಾಗಿದ್ದ ಗುಲ್ಬರ್ಗಾ ನಗರದಲ್ಲಿ ಕಮ್ಯುನಿಸ್ಟ್ ಪಕ್ಷ ಮುಸ್ಲಿಮ್ ಜನರ ಮಧ್ಯೆ ಜನಪ್ರಿಯವಾಗಿತ್ತು. ಮುಸ್ಲಿಮ್ ಲೀಗ್ ಆ ಜನರ ಮಧ್ಯೆ ಹೆಚ್ಚಿನ ಪ್ರಭಾವ ಬೀರಿದ್ದಿಲ್ಲ. ನಗರ ಸಭೆ ಚುನಾವಣೆಗಳಲ್ಲಿ ಕಮ್ಯುನಿಸ್ಟ್- ಸೋಶಲಿಸ್ಟ್ ಗುಂಪು ದೊಡ್ಡ ಸಂಖ್ಯೆಯಲ್ಲಿ ಗೆದ್ದು ಬರುತ್ತಿತ್ತು. ಅದರ ಮುಸ್ಲಿಂ ಸದಸ್ಯರ ಸಂಖ್ಯೆಯೂ ಹೆಚ್ಚಾಗಿಯೇ ಇರುತ್ತಿತ್ತು.

ಹಲವಾರು ವರ್ಷ ಬಲಹೀನವಾಗಿದ್ದ ಮುಸ್ಲಿಂ ಲೀಗ್ ತುರ್ತು ಪರಿಸ್ಥಿತಿ ಸಮಯದಲ್ಲಿ ತನ್ನ ಸಂಘಟನೆಯನ್ನು ಭದ್ರಗೊಳಿಸಲು ಪ್ರಾರಂಭಿಸಿತು. ಕೆಲವು ಕಡೆ ಅದು ತಳವೂರಿ ನಿಂತಿತು. ಕೇರಳದಲ್ಲಿ ಮುಸ್ಲಿಂ ಲೀಗಿನ ಜೊತೆಯಲ್ಲಿ ಕಾಂಗ್ರೆಸ್ ಹೊಂದಾಣಿಕೆ ಕರ್ನಾಟಕದಲ್ಲಿಯೂ ಮುಸ್ಲಿಂ ಲೀಗಿನ ಚಟುವಟಿಕೆಗಳಿಗೆ ಹೆಚ್ಚಿನ ಕುಮ್ಮಕ್ಕು ನೀಡಿದಂತಾಯಿತು. ಆ ಕಾರಣದಿಂದಾಗಿಯೇ ಗುಲ್ಬರ್ಗಾದಲ್ಲಿ ಶೇ. 30 ರಷ್ಟಿರುವ ಮುಸ್ಲಿಂ ಜನಸಂಖ್ಯೆಯಲ್ಲಿ ಹೆಚ್ಚಿನವರು ಲೀಗಿನ ತ್ತವಾಲಿದರು. ಕಾಂಗ್ರೆಸ್, ಜನತಾದಳ, ಕಮ್ಯುನಿಸ್ಟ್ ಪಕ್ಷಗಳಲ್ಲಿ ಪ್ರಭಾವಿತ ಮುಸ್ಲಿಂ ಮುಖಂಡರಿದ್ದರೂ ಕೂಡ ಮುಸಲ್ಮಾನರ ಬೆಂಬಲ ಮಾತ್ರ ಅವರಿಗಿರಲಿಲ್ಲ. ಹೀಗಾಗಿ ಕಳೆದ 14 ವರ್ಷಗಳಿಂದ ಲೀಗ್ ಬಿಟ್ಟು ಬೇರೆ ಯಾವ ಪಕ್ಷಕ್ಕೂ ಆ ಪ್ರದೇಶದಲ್ಲಿ ಸಭೆ ನಡೆಸಲಿಕ್ಕೂ ಅವಕಾಶ ಮಾಡಿಕೊಡುತ್ತಿರಲಿಲ್ಲ. ಕೆಲವು ವರ್ಷಗಳ ಹಿಂದೆ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಅಲ್ಲಿ ಸಭೆ ನಡೆಸಲು ಪ್ರಯತ್ನ ನಡೆಸಿದಾಗ, ಧ್ವನಿವರ್ಧಕವನ್ನು ಕಿತ್ತುಕೊಂಡು ಹೋಗಲಾಗಿತ್ತು. ನಗರಸಭೆ ಚುನಾವಣೆಗಳಲ್ಲಿ ಎರಡೂ ಸಲ ಸಿಪಿಐ(ಎಂ) ಸದಸ್ಯರು ಸೋಲಬೇಕಾಗಿ ಬಂತು. ಆದರೆ ಸಿ.ಪಿ.ಐ(ಎಂ) ಕಾರ್ಯಕ ... ಬೆಲೆಯೇರಿಕೆ, ನಿರು ... ಣೆಗಳು ದುಡಿಯುವ, ಮಧ್ಯಮ ವರ್ಗದ ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದಿಲ್ಲೆಂದು ತಿಳಿದೇ ಸಿಪಿಐ(ಎಂ) ಕಾರ್ಯಕರ್ತರು ಮುಸ್ಲಿಂ ಪ್ರದೇಶದಲ್ಲಿ ಸಂಪರ್ಕ ಮುಂದುವರಿಸಿಕೊಂಡೇ ಕಾರ್ಯಪ್ರವೃತ್ತರಾದರು. ಜನತಾದಳದಲ್ಲಿಯ ಮುಖಂಡರೂ ಧೈರ್ಯದಿಂದ ಜನಸಂಪರ್ಕ ಬೆಳೆಸಿದರು.

ಹೋದ ವರ್ಷ ಡಿಸೆಂಬರ್ 6ರ ಅಯೋಧ್ಯೆ ಘಟನೆ ಆನಂತರ ಮತೀಯ ಗಲಭೆಗಳು, ಆ ಸಮಯದಲ್ಲಿ ಬಿ.ಜೆ.ಪಿ. ಸಂಘಪರಿವಾರದ ವಿರುದ್ಧ, ಅಲ್ಪ ಮತಸ್ಥರ ರಕ್ಷಣೆಗಾಗಿ ಸಿಪಿಐ(ಎಂ) ಪಕ್ಷ ಕೈಗೊಂಡ ಕಾರ್ಯಕ್ರಮ, ಮುಸಲ್ಮಾನರಲ್ಲಿ ಸಿಪಿಐ(ಎಂ), ಜನತಾ ಪಕ್ಷಗಳ ಕುರಿತು ಒಳ್ಳೆಯ ಅಭಿಪ್ರಾಯ ಮೂಡಿಬರುವಂತಾಗಲು ಸಾಧ್ಯವಾಯಿತು. ಆ ಕಾರಣದಿಂದಲೇ ಪಿ.ಬಿ. ಸದಸ್ಯ ಸೀತಾರಾಂ ಯೆಚೂರಿಯವರು ದಿನಾಂಕ 24 ರಂದು ಗುಲ್ಬರ್ಗಕ್ಕೆ ಬಂದಾಗ ಸಿಪಿಐ(ಎಂ) ಮತ್ತು ಜನತಾದಳ ಜಂಟಿಯಾಗಿಯೇ ಮುಸ್ಲಿಂ ಲೀಗಿನ ಭದ್ರಕೋಟೆಯೊಳಗೆ ನುಗ್ಗಿ, ಇಂದಿನ ದೇಶದ ಪರಿಸ್ಥಿತಿ, ಐಕ್ಯತೆ-ಸಮಗ್ರತೆಗೆ ಉಂಟಾಗಿರುವ ಗಂಡಾಂತರ, ಬಿಜೆಪಿ, ಸಂಘಪರಿವಾರದಿಂದ ಉಂಟಾಗಬಹುದಾದ ಅಪಾಯ, ಹಿಂದೂ-ಮುಸ್ಲಿಂ ಪಂಥವಾದಿಗಳ ವಿರುದ್ಧ ನಡೆಸಬೇಕಾದ ಹೋರಾಟದ ಸ್ವರೂಪಗಳನ್ನು ಮುಸ್ಲಿಂ ಜನರ ಮಧ್ಯೆ ಪ್ರಚಾರ ಮಾಡುವ ನಿರ್ಧಾರ ಕೈಗೊಂಡಿದ್ದು, ಅದನ್ನು ಯಶಸ್ವಿಗೊಳಿಸಲು ಸಾಧ್ಯವಾಗಿದೆ. ದಿನಾಂಕ ಜೂನ್ 24,1993 ರಂದು ರಾತ್ರಿ ಹತ್ತು ಗಂಟೆಗೆಯಿಂದ ಹನ್ನೊಂದು ಮೂವತ್ತರವರೆಗೆ ಒಂದು ಸಾವಿರಕ್ಕೂ ಮೇಲ್ಪಟ್ಟು ನೆರೆದಿದ್ದ ಮುಸ್ಲಿಂ ಸಮುದಾಯದ ಮುಂದೆ ಮುಸ್ಲಿಂ ಚೌಕಿನಲ್ಲಿ ಸೀತಾರಾಮ್ ಯೆಚೂರಿಯವರು ತಮ್ಮ ಸರಳ ಹಿಂದಿ ಭಾಷಣ ಮಾಡಿ ಹೊಸ ವಿಚಾರಧಾರೆಯ ಸುರಳಿಯನ್ನು ಬಿಚ್ಚಿ ಅಲ್ಲಿ ನೆರೆದಿದ್ದ ಬಡ-ಮಧ್ಯಮ ವರ್ಗದ ಹಾಗೆಯೇ ಹಿರಿಯ ಮುಸ್ಲಿಂ ಬಾಂಧವರಲ್ಲಿ ಹೊಸ ವಿಚಾರಗಳನ್ನು ತಿಳಿದುಕೊಳ್ಳಬೇಕೆಂಬ ಆಸ್ಥೆ ಹುಟ್ಟಿಸಿದರು. ಒಂದೂವರೆ ಗಂಟೆ ಕಾಲ ಭಾಷಣ ಮಾಡಿ ಮುಗಿಸಿದಾಗ, ಇನ್ನು ಹೆಚ್ಚಿನ ವಿಚಾರಗಳನ್ನು ಯೆಚೂರಿಯವರಿಂದ ಕೇಳಬೇಕೆಂಬ ಆಸೆ ಸಭಿಕರಲ್ಲಿತ್ತೆಂಬುದನ್ನು ಅವರ ಮುಖಗಳಲ್ಲಿ ...

ವರದಿ : ಕಾಂ. ಎನ್.ಕೆ. ಉಪಾಧ್ಯಾಯ

"ಎಡರಂಗ - ರಾಷ್ಟ್ರೀಯ ರಂಗಗಳಿಗೆ ಬೆಂಬಲ ನೀಡಿ" ಮುಸ್ಲಿಮರಿಗೆ ಯೆಚೂರಿ ಕರೆ

ಸುಭದ್ರವಾದ, ಜಾತ್ಯಾತೀತವಾದ, ಸಮೃದ್ಧ ಭಾರತ ರಾಷ್ಟ್ರವನ್ನು ಕಟ್ಟಬೇಕೆಂಬ ಮಹಾ ಉದ್ದೇಶದಿಂದ ಹಿಂದೂ-ಮುಸ್ಲಿಂ, ಸಿಖ್, ಇಸಾಯಿ ಜನರೆಲ್ಲ ಐಕ್ಯತೆಯ ಹೋರಾಟ ನಡೆಸಿ ಸ್ವಾತಂತ್ರ್ಯ ಪಡೆದಿದ್ದೇವೆ. ಆದರೆ ಮತೀಯ ಶಕ್ತಿಗಳು, ಹಿಂದುತ್ವ ಪ್ರತಿಪಾದನೆ ಮಾಡುವವರು, ಆರ್ಯವಂಶದ ಸಂಸ್ಕೃತಿಯನ್ನು ಎತ್ತಿಹಿಡಿಯುವವರೆಂದು ಹೇಳುತ್ತಿರುವವರು ಬಿಜೆಪಿ ಆರ್.ಎಸ್.ಎಸ್., ವಿ.ಹೆಚ್.ಪಿ. ಯವರೆಲ್ಲ ಭಾರತದ ಐಕ್ಯತೆಗೆ ಸಮಗ್ರತೆಗೆ ಅಪಾಯತಂದೊಡ್ಡಿದ್ದಾರೆ. ಸ್ವಾತಂತ್ರ್ಯ ಹೋರಾಟ ಕಾಲದ ಐಕ್ಯತೆ- ಜಾತ್ಯಾತೀತತೆಯನ್ನು ಕಾಪಾಡಿ, ಸಮಗ್ರ ಭಾರತ ಒಂದಾಗಿಯೇ ಉಳಿಯುವಂತೆ ಮಾಡುವುದು ಇಂದಿನ ನಮ್ಮ ಕರ್ತವ್ಯವೆಂದು ಸೀತಾರಾಮ್ ಯೆಚೂರಿಯವರು ನೆನಪಿಸಿಕೊಟ್ಟರು. 1992ರ ಎ.ಐ.ಸಿ. ಸಿ.ಯ ತಿರುಪತಿ ಸಮಾವೇಶದಲ್ಲಿ ಬಾಬ್ರಿಮಸೀದಿಯನ್ನು ನಾಶಗೊಳಿಸಲು ಬಿಡುವುದಿಲ್ಲೆಂದು ಘೋಷಿಸಿದ ಕಾಂಗ್ರೆ ಅಧ್ಯಕ್ಷ ಹಾಗೂ ಪ್ರಧಾನ ಮಂತ್ರಿ ನರಸಿಂಹರಾವ್ ಅವರು ಡಿ. 6 ರಂದು ಬಾಬ್ರಿ ಮಸೀದಿಯನ್ನು ಆರ್.ಎಸ್.ಎಸ್. ಸಂಘಪರಿವಾರ ನೆಲಸಮಗೊಳಿಸುತ್ತಿದ್ದಾಗ, ಹತ್ತು ಕಿ.ಮೀ ದೂರದಲ್ಲಿರುವ ಸೈನಿಕರಿದ್ದರೂ ಕೂಡ, ಬಾಬ್ರಿ ಮಸೀದಿಯನ್ನು ರಕ್ಷಿಸಲು ನರಸಿಂಹರಾವ್ ಯಾವ ಕ್ರಮವನ್ನು ಕೈಗೊಳ್ಳದೆ ತಮ್ಮ ಅಸಾಮರ್ಥ್ಯವನ್ನು ಪ್ರದರ್ಶಿಸಿದ್ದು ಮಾತ್ರವಲ್ಲ, ಬಾಬ್ರಿ ಮಸೀದಿ ಕೆಡವಿದ್ದಲ್ಲಿ ಸದ್ಯ ರಾಮಲಲ್ಲಾ ಪೂಜೆ ನಡೆಯುತ್ತಿದ್ದು, ಅಲ್ಲಿಯೇ ರಾಮಮಂದಿರ ನಿರ್ಮಿಸಲಾಗುವುದೆಂಬ ಘೋಷಣೆಯನ್ನು ಚಂದ್ರಸ್ವಾಮಿ ಮೂಲಕ ಮಾಡಿಸಿ, ಹಿಂದೂ ಮತಗಳಿಕೆಯ ತಂತ್ರ ಹೂಡಿ ಅಲ್ಪಮತಸ್ಥರಿಗೆ ದ್ರೋಹ ಬಗೆಯುತ್ತಿದ್ದಾರೆಂದು ಆರೋಪಿಸಿದರು.

ನರಸಿಂಹರಾಯರ ಆಡಳಿತೆಯಲ್ಲಿ ಅವರು ಅನುಸರಿಸುತ್ತಿರುವ ಐಎಂಎಫ್ ನಿರ್ದೇಶಿತ ಆರ್ಥಿಕ ಧೋರಣೆಯಿಂದಾಗಿ ದೈನಂದಿನ ಬಳಕೆಯ ವಸ್ತು ... ದಾಗಿ ಕಾರ್ಖಾನೆಗಳು ಮುಚ್ಚಲ್ಪಟ್ಟು ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿ ಬಡ-ಮಧ್ಯಮ ವರ್ಗದ ಜೀವನ ಎಷ್ಟು ದಾರುಣವಾಗುತ್ತಿದೆಂದು ವಿವರಿಸಿದರು.

ನರಸಿಂಹರಾಯರು ಅಲ್ಪಸಂಖ್ಯಾತರನ್ನು ಕಡೆಗಣಿಸುತ್ತಿದ್ದಾರೆ. ಹಿಂದೂ ಮತೀಯವಾದಿಗಳ ಪರಧೋರಣೆ ಅನುಸರಿಸುತ್ತಿದ್ದಾರೆ. ಅದರಿಂದಾಗಿ ಭಾರತವನ್ನು ಛಿದ್ರಗೋಳಿಸಬೇಕು, ದುರ್ಬಲಗೊಳಿಸಬೇಕು, ತಮ್ಮ ಹಿಡಿತವನ್ನು ಬಿಗಿಗೊಳಿಸಬೇಕೆಂಬ ಸಾಮ್ರಾಜ್ಯಶಾಹಿಗಳ ಕುತಂತ್ರಕ್ಕೆ ಬೆಂಬಲ ನೀಡುತ್ತಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದ ದಿನಗಳಲ್ಲಿ ನಾವು ಅನುಸರಿಸುತ್ತಿದ್ದ ಧೋರಣೆಗೆ ನರಸಿಂಹರಾಯರ ಈಗಿನ ಧೋರಣೆ ತದ್ವಿರುದ್ಧವಾಗಿದೆ. ದೇಶಕ್ಕೆ, ದೇಶದ ಸಮಗ್ರತೆಗೆ ಅಪಾಯವನ್ನುಂಟು ಮಾಡುತ್ತದೆ. ಕೇಂದ್ರ ಸರಕಾರದ ಆರ್ಥಿಕ- ಕೈಗಾರಿಕಾ ನೀತಿಗಳ ವಿರುದ್ಧ ಹಾಗೆಯೇ ಅವರು ಅನುಸರಿಸುತ್ತಿರುವ ಜನ ವಿರೋಧಿ ಕ್ರಮಗಳ ವಿರುದ್ಧ ಐಕ್ಯ ಹೋರಾಟಕ್ಕೆ ಮುಂದಾಗಬೇಕೆಂದು ಕರೆ ನೀಡುತ್ತಾ ಸೀತಾರಾಮ್ ಯೆಚೂರಿಯವರು ಬಿಜೆಪಿ ಸಂಘಪರಿವಾರ, ಆರ್.ಎಸ್.ಎಸ್., ವಿಹೆಚ್.ಪಿ.ಗಳಂಥ ಮತೀಯ ಶಕ್ತಿಗಳ ವಿರುದ್ಧ, ಕೇಂದ್ರ ಸರಕಾರದ ನೀತಿಗಳ ವಿರುದ್ಧ ಎಡರಂಗ ಮತ್ತು ಜನತಾದಳ, ರಾಷ್ಟ್ರೀಯ ರಂಗಗಳು ಒಟ್ಟಾಗಿ ಐಕ್ಯತೆಯಿಂದ ಯಾವ ರೀತಿಯ ಹೋರಾಡುತ್ತಾ ಬಂದಿವೆಯೆಂಬುದನ್ನು ವಿವರಿಸಿ, ಅವರ ಹೋರಾಟಗಳಿಗೆ ಬೆಂಬಲ ನೀಡಬೇಕೆಂದು ವಿನಂತಿಸಿದರು.

ಜನತಾದಳದ ರಾಜ್ಯ ಉಪಾಧ್ಯಕ್ಷ ಮಹಮ್ಮದ್ ಹನೀಫ್ ಅವರು ಬಿಜೆಪಿ, ಆರ್.ಎಸ್.ಎಸ್.ಗಳಂಥ ಮತೀಯ ಶಕ್ತಿಗಳ ವಿರುದ್ಧ ನಿರಂತರ ಹೋರಾಡಿ ಮುಸ್ಲಿಮ್ ಮತ್ತಿತರ ಅಲ್ಪ ಭಾಷಿಕರ ರಕ್ಷಣೆಗಾಗಿ ಹೋರಾಡುವವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮಾತ್ರ. ಈ ಪಕ್ಷ ಮಾತ್ರ ಕಷ್ಟ ಕಾಲದಲ್ಲಿ ನಮ್ಮ ರಕ್ಷಣೆಗೆ ಬೆನ್ನೆಲುಬಾಗಿ ನಿಂತಿದೆ ಎಂದು ಹೇಳಿ, ಜನತಾದಳ, ಕಮ್ಯುನಿಸ್ಟ್ ಪಕ್ಷಗಳಿಗೆ ಬೆಂಬಲ ನೀಡಬೇಕೆಂದು ಹೇಳಿದರು.

ನರಸಿಂಹರಾವ್ ಮುಂದಿರುವ ಗೌರವಾನ್ವಿತ ದಾರಿ ಒಂದೇ

-- ಕಾಂ. ಸುರ್ಜಿತ್

ಸ್ವತಂತ್ರ ಭಾರತದಲ್ಲಿ ಬೆಳಕಿಗೆ ಬಂದ ಅತೀ ದೊಡ್ಡ ಹಗರಣ ಅದರಲ್ಲಿನ ಮುಖ್ಯ ಆಪಾದಿತ ಹರ್ಷದ್ ಮೆಹ್ತಾ ಆಘಾತಕಾರಿ ಹೇಳಿಕೆಯಿಂದ ಒಂದು ನಾಟಕೀಯ ತಿರುವು ಪಡೆದಿದೆ. ಸ್ವತಃ 5000 ಕೋಟಿ ರೂ ನುಂಗಿ ಹಾಕಿದ ಕ್ರಿಮಿನಲ್ ಪ್ರಧಾನ ಮಂತ್ರಿ ನರಸಿಂಹರಾಯರತ್ತ ಆಪಾದನೆಯ ಬೆರಳು ತೋರಿದ.

ಒಬ್ಬ ಕ್ರಿಮಿನಲ್‌ನ ಮುಖದಿಂದ ಇಂತಹ ಆಪಾದನೆ ಬಂದಿದ್ದರೂ ದೇಶ ಅದನ್ನು ನಂಬುವಂತೆ ಕಾಣುತ್ತಿದ್ದರೆ ಅದರಲ್ಲಿ ಆಶ್ಚರ್ಯವೆನಿಸದು. ವಿರೋಧ ಪಕ್ಷಗಳ ಸದಸ್ಯರು ಒತ್ತಿ-ಒತ್ತಿ ಕೇಳಿದಾಗ ಈ ಹಗರಣದಲ್ಲಿರುವವರು ಯಾರೂ ತಪ್ಪಿಸಿಕೊಳ್ಳಲು ಬಿಡುವುದಿಲ್ಲ ಎಂದು ನರಸಿಂಹರಾಯರು ಆಶ್ವಾಸನೇ ನೀಡಿದ್ದರೂ ಅವರ ನೇರ ಉಸ್ತುವಾರಿಯಲ್ಲೇ ಇರುವ ತನಿಖಾ ಸಂಸ್ಥೆಗಳ ವರ್ತನೆ. ಜಂಟಿ ಸಂಸದೀಯ ಸಮಿತಿಯೇ ಸಿಬಿಐ ಹಾರಿಕೆಯ ಉತ್ತರ ನೀಡಿದೆ ಎಂದು ಆಪಾದಿಸಿದ್ದು, ತನಿಖೆಯ ಆರಂಭದಲ್ಲೇ ಹಿರಿಯ ಸಿಬಿಐ ಜಂಟಿ ನಿರ್ದೇಶಕ ಮಾಧವನ್‌ರನ್ನು ತೆಗೆದುಹಾಕಿದ್ದು ಸತ್ಯವನ್ನು ಬುಡಮಟ್ಟ ಶೋಧಿಸುವ ಪ್ರಯತ್ನ ನಿಜವಾಗಿಯೂ ನಡೆಯುತ್ತಿದೆಯೇ ಎಂಬ ಬಗ್ಗೆ ಸಂದೇಹ ಮೂಡಿಸಿದ್ದವು. ಹರ್ಷದ್ ಮೆಹ್ತಾರ ವಂಚನೆಗಳ ಹಿಂದೆ ರಾಜಕೀಯ ಆಶ್ರಯದಾತರ ಕೈಯಿಲ್ಲದೆ ಅದು ಸಾಧ್ಯವಿರಲಿಲ್ಲ ಎಂಬ ಬಗ್ಗೆ ಮೊದಲಿಂದಲೂ ಸಂದೇಹವೇ ಇರಲಿಲ್ಲ. ಆದರೆ ಆತನ ರಾಜಕೀಯ ಪೋಷಕ ಯಾರು, ಆತನ ಸಂಬಳಕ್ಕೆ ಕೈಚಾಚಿದವರಾರು ಎಂದು ದೇಶದ ಜನತೆ ತಿಳಿಯ ಬಯಸಿತ್ತು. ಇಂತಹ ವಂಚನೆಯ ಅವಕಾಶ ಪಡೆಯಲು ಮೆಹ್ತಾ ಪ್ರಧಾನಮಂತ್ರಿಗಳದ್ದು ಮತ್ತು ಇತರ ಹಲವರದ್ದೂ ಕೈಬೆಚ್ಚಗೆ ಮಾಡಿದ್ದಾನೆ ಎಂದಿದ್ದಾನೆ.

ಸ್ಮರಣ ಶಕ್ತಿ ಅಷ್ಟೊಂದು ಕುಂದಿದೆಯೇ?

ಪ್ರಧಾನಮಂತ್ರಿಗಳು ಎಂದೂ ಹರ್ಷದ್ ಮೆಹ್ತಾನನ್ನು ಭೇಟಿಯಾಗಿಲ್ಲ ಎಂದು ಆತನ ಪತ್ರಿಕಾ ಸಮ್ಮೇಳನದ ದಿನವೇ, ಸ್ವಲ್ಪ ಮೊದಲು ಕಾಂಗ್ರೆಸ್(ಐ) ವಕ್ತಾರ ಗಾಡ್ಗೀಲ್ ಸಾರಿದರು. ಆದರೆ ಹರ್ಷದ್ ಮೆಹ್ತಾ ಆಪಾದನೆಯ ನಂತರ ನರಸಿಂಹರಾಯರು ಹರ್ಷದ್ ಮೆಹ್ತಾನನ್ನು ಭೇಟಿಯಾದ ನೆನಪು ತನಗಿಲ್ಲ ಎಂದರು. ಹರ್ಷದ್ ಮೆಹ್ತಾ ಪ್ರಸ್ತಾಪಿಸಿದ ಸುನಿಲ್ ಮಿತ್ತಲ್ ಕೂಡಾ ಹರ್ಷದ್ ಮೆಹ್ತಾನೊಂದಿಗೆ ಪ್ರಧಾನಮಂತ್ರಿಗಳನ್ನು ಭೇಟಿಯಾದನೆನಪು ತನಗಿಲ್ಲ ಎಂದರು. ಹರ್ಷದ್ ಮೆಹ್ತಾರ ಮಾತನ್ನು ನಂಬುವುದಾದರೆ ಈ ಭೇಟಿ 40 ನಿಮಿಷ ನಡೆಯಿತು. ವಿದೇಶೀ ಪ್ರತಿಷ್ಠರಿಗೆ ಬಿಟ್ಟು ಬೇರೆ ಯಾರಿಗೂ ಪ್ರಧಾನಮಂತ್ರಿಯೊಂದಿಗೆ ಇಷ್ಟು ದೀರ್ಘವಾದ ಭೇಟಿಗೆ ಅವಕಾಶ ನೀಡಲಾಗುವುದಿಲ್ಲ. ಇಂತಹ ದೀರ್ಘ ಭೇಟಿಯ ಬಗ್ಗೆ ನೆನಪೇ ಆಗುತ್ತಿಲ್ಲ ಎನ್ನುವಷ್ಟು ಖಂಡಿತಾ ಪ್ರಧಾನಮಂತ್ರಿಗಳ ಸ್ಮರಣ ಶಕ್ತಿ ಕುಂದಿರಲಿಕ್ಕಿಲ್ಲ.

ಈ ಆಪಾದನೆ ಹೊರಬಿದ್ದ ಕೂಡಲೇ "ಮುಖಂಡರಲ್ಲಿ ನಂಬಿಕೆ ವ್ಯಕ್ತಪಡಿಸುವ" ಕಸರತ್ತುಗಳು ಹೇಳಿಕೆಗಳು ರಭಸದಿಂದ ಆರಂಭವಾಗಿಯೇ ಬಿಟ್ಟವು. ಆದರೆ ಈ ಐಕ್ಯತೆಯ ಹಿಂದಿರುವುದು ಚುನಾವಣೆಗಳನ್ನು ಎದುರಿಸುವ ಭಯ ಹಾಗೂ ಹಲವಾರು ಪ್ರಶ್ನೆಗಳಿಗೆ ಉತ್ತರ ನೀಡುವಲ್ಲಿ ಕಾಂಗ್ರೆಸ್ಸಿಗರ ಅಸಾಮರ್ಥ್ಯ. ರಾವ್‌ರವರ ನೇತೃತ್ವದಲ್ಲಿ ಉತ್ತರ ಪ್ರದೇಶ, ಮಧ್ಯಪ್ರದೇಶ, ಹಿಮಾಚಲ ಪ್ರದೇಶ, ರಾಜಸ್ತಾನಗಳಲ್ಲಿ ಚುನಾವಣೆಗಳನ್ನು ಎದುರಿಸುವುದು ಸಾಧ್ಯವಿಲ್ಲ. ರಾವ್ ಅಧಿಕಾರದಲ್ಲಿ ಇರುವವರೆಗೆ ಜನಗಳ ಹಲವಾರು ಪ್ರಶ್ನೆಗಳಿಗೆ ಉತ್ತರ ಕೊಡಲು ತಮಗೆ ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಕಾಂಗ್ರೆಸ್ಸಿಗರು ಬರುತ್ತಾರೆ. ಕಾಂಗ್ರೆಸ್ ಸಂಸದೀಯ ಪಕ್ಷದ ಸಭೆಯಲ್ಲಿ ಕಾಂಗ್ರೆಸ್ ಎಂ.ಪಿ. ರಾಮಚಂದ್ರ ರಥ್ ರವರು ರಾವ್‌ರತ್ತ ತಿರುಗಿ "ನಾವು ದೇಶಕ್ಕೆ ಉತ್ತರ ನೀಡಬೇಕಾಗಿದೆ" ಎನ್ನುತ್ತಾ ತಾನು "ಈ ಸದನದ 90 ಶೇಕಡಾ ಮಂದಿಯ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದೇನೆ" ಎಂದರಂತೆ. ಅವರ ಸಂಕೇತ ಆ ಸಭೆಯಲ್ಲಿದ್ದ ಸುಮಾರು 300 ಕಾಂಗ್ರೆಸ್ಸಿಗರತ್ತ ಇತ್ತು ಎಂಬುದು ಸ್ಪಷ್ಟ. "ಬಿಜೆಪಿಯನ್ನು ಕಳ್ಳನೆಂದೂ ಪತ್ರಿಕೆಗಳನ್ನೂ ರ‍್ಯಾಸ್ಕಲ್‌ಗಳೆಂದೂ ಕರೆದು ನಾವು ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿಲ್ಲ. ಪ್ರಶ್ನೆಗಳನ್ನು ಎದುರಿಸಲೇಬೇಕು" ಎಂದು ರಥ್ ಹೇಳಿದರಂತೆ.

'ಕಾಣಿಕೆ'ನೀಡಿ ಪ್ರಯೋಜನ ಗಿಟ್ಟಿಸುವ ರೂಢಿ

ಹರ್ಷದ್ ಮೆಹ್ತಾ ಆಪಾದನೆಗಳು ಬಿಜೆಪಿಯ ಮನಸ್ಸಿನ ಕೂಸು ಎಂದು ಆಪಾದಿಸಿ ಕಾಂಗ್ರೆಸ್ಸಿಗರು ಬಿಜೆಪಿಗೆ ಸಲ್ಲದ ಬೆಲೆ ನೀಡುತ್ತಿದ್ದಾರೆ. ಬಿಜೆಪಿಯ ಕುಮ್ಮಕ್ಕಿನಿಂದ ಆತನ ಈ ಆಪಾದನೆ ಮಾಡಿದ್ದಾನೋ ಇಲ್ಲವೋ ಎಂಬುದು ಸಂಪೂರ್ಣ ಬೇರೆ ಪ್ರಶ್ನೆ. ಇಲ್ಲಿರುವ ಮುಖ್ಯ ಪ್ರಶ್ನೆ ರಾವ್ ಮತ್ತಿತರರು ಕೈ ಬೆಚ್ಚಗೆ ಮಾಡಿಸ್ಕೊಂಡಿದ್ದಾರೋ ಇಲ್ಲವೋ ಎಂಬುದು.

ದೇಶವನ್ನು ಹಲವು ಬಾರಿ ಹಗರಣಗಳು ಅಲುಗಾಡಿಸಿವೆ. ರಾವ್‌ರವರ ಎರಡು ವರ್ಷಗಳಲ್ಲೇ ಇದು ಮೂರನೇ ದೊಡ್ಡ ಹಗರಣ. ಉಳಿದೆಡೆರೆಂದರೆ ಎ.ಬಿ.ಬಿ. ರೈಲು ಇಂಜಿನ್ ವ್ಯವಹಾರ ಮತ್ತು ಗೋಲ್ಡ್ ಸ್ಟಾರ್ ಹಗರಣ. ರಾಜೀವ್ ಗಾಂಧಿ ಕಾಲದಲ್ಲಿ ಬೋಫೋರ್ಸ್ ಹಗರಣ ಉಚ್ಚ ಸ್ಥಾನಗಳಲ್ಲಿ ಭ್ರಷ್ಟಚಾರಕ್ಕೆ ಇನ್ನೊಂದು ಹೆಸರಾಗಿತು. ಕಾಂಗ್ರೆಸ್(ಐ)ನ ತಂತ್ರ, ಕಸರತ್ತುಗಳಿಂದಾಗಿ ಹಗರಣದಲ್ಲಿ ಪಾಲ್ಗೊಂಡವರ ಹೆಸರು ಹೊರಬರಲೇ ಇಲ್ಲ. ಆದರೆ ಇದರಿಂದಾಗಿ ಹಾಗೂ ಇತರ ಕಾರಣಗಳಿಂದಾಗಿ 1989 ರಲ್ಲಿ ರಾಜೀವ್‌ಗಾಂಧಿ ನೇತೃತ್ವದ ಕಾಂಗ್ರೆಸ್ ನೆಲಕಚ್ಚಿತು. ಪತ್ರ ಸಾಗಿಸುವ ಕೆಲಸ ಮಾಡಿದ ಮಾಧವಸಿಂಗ್ ಸೋಳಂಕಿ ಮಂತ್ರಿ ಪದವಿ ಕಳಕೊಂಡರು. ಆ ಹಗರಣ ಕೆಂಡ ಆಗುವಷ್ಟರಲ್ಲೇ ಹರ್ಷದ್ ಮೆಹ್ತಾನ ಹೇಳಿಕೆಗಳು ದೇಶವನ್ನು ನಡುಗಿಸಿದವು. ರಾವ್ ಅವರ ನಂದ್ಯಾಲ್ ಚುನಾವಣೆಗೆ 'ಕಾಣಿಕೆ'ಯಾಗಿ ಅದನ್ನು ನೀಡಿದ್ದಂತೆ. ಚುನಾವಣೆಗಳಲ್ಲಿ ನೀರಿನಂತೆ ಖರ್ಚುಮಾಡುವ ಅಪಾರ ಹಣದ ಮೂಲಗಳ ಬಗ್ಗೆ ಬಹಳಷ್ಟು ಟೀಕೆಗಳು ಹೊಸದೇನಲ್ಲ. ಬ್ರೀಫ್‌ಕೇಸ್‌ಗಳಲ್ಲಿ, ಗೋಣಿಗಳಲ್ಲಿ ಕಳ್ಳಸಾಗಾಣಿಕೆದಾರರಿಂದ ಹಿಡಿದು ದೊಡ್ಡ ಕೈಗಾರಿಕೋದ್ಯಮಿಗಳವರೆಗೆ ಇಂತಹ 'ಕಾಣಿಕೆ' ನೀಡುವುದು ಅದಕ್ಕೆ ಪ್ರತಿಯಾಗಿ "ವಿಶೇಷ ಆತಿಥ್ಯ"ಗಳಿಸುವುದು ರೂಢಿಯಾಗಿಬಿಟ್ಟಿದೆ. ಕೆಲವು ಉದ್ಯಮಿಗಳು ಅದ್ಭುತ ರೀತಿಯಲ್ಲಿ ಬಹಳ ಬೇಗನೇ ಉನ್ನತಿಗೇರಿ ರಾಜಕೀಯ ಪಕ್ಷಗಳ ಆಂತರಿಕ ವ್ಯವಹಾರಗಳಲ್ಲಿ ಕೈಹಾಕುವುದು ಕೂಡಾ ರೂಢಿಯಾಗಿಬಿಟ್ಟಿದೆ. ರಾಜಕೀಯ ಪಕ್ಷಗಳ ಬಲಾಬಲಕ್ಕೆ ಅನುಗುಣವಾಗಿ

ಪಶ್ಚಿಮ ಬಂಗಾಳದಲ್ಲಿ ತೀವ್ರಗೊಂಡ ವರ್ಗ ಸಂಘರ್ಷ

ಕಾಂ. ಸುನಿಲ್ ಮೈತ್ರಾ

● ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್-ಬಿಜೆಪಿ ಪರಸ್ಪರ ಕೈಮಿಲಾಯಿಸಿ ಕೂಡಾ ಗ್ರಾಮ ಪಂಚಾಯತುಗಳ ಮಟ್ಟದಲ್ಲಿ ಎಡರಂಗದ ಅರ್ಧದಷ್ಟು, ಪಂಚಾಯತು ಸಮಿತಿಗಳಲ್ಲಿ ಮೂರನೇ ಒಂದರಷ್ಟು ಹಾಗೂ ಜಿಲ್ಲಾ ಪರಿಷತ್ತುಗಳಲ್ಲಿ ಎಂಟನೇ ಒಂದರಷ್ಟು ಮಾತ್ರ ಸೀಟುಗಳನ್ನು ಗೆದ್ದರೂ ಕಾಂಗ್ರೆಸ್(ಐ) -ಬಿಜೆಪಿ ಪಶ್ಚಿಮಬಂಗಾಳದಲ್ಲೂ ಮುನ್ನಡೆ ಸಾಧಿಸಿವೆ, ಸಿಪಿಐ(ಎಂ) ಗೂಂಡಾಗಿರಿಗಿಳಿದಿವೆ ಎಂದೆಲ್ಲಾ ಸಾರಲಾಗುತ್ತಿದೆ ಏಕೆ? ಪಂಚಾಯತು ಚುನಾವಣೆಗಳ ನಂತರದ ಹಿಂಸಾಚಾರಕ್ಕೆ 30 ಕ್ಕೂ ಹೆಚ್ಚು ಸಿಪಿಐ(ಎಂ) ಕಾರ್ಯಕರ್ತರೇ ಬಲಿಯಾದರೂ ಏಕೆ ಈ ಅಪಪ್ರಚಾರ? ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಸುನಿಲ್‌ಮೈತ್ರಾ ಇದನ್ನು ಪರಿಶೀಲಿಸುತ್ತಾ ಇದು ಪಶ್ಚಿಮ ಬಂಗಾಳದ ಗ್ರಾಮಾಂತರದಲ್ಲಿ ವರ್ಗಸಮರ ತೀವ್ರಗೊಂಡುದರ ಒಂದು ಸ್ವರೂಪವಲ್ಲದೆ ಮತ್ತೇನು ಎಂದು ಕೇಳುತ್ತಾರೆ. ● ● ●

ಕೆಲವು ಕಳ್ಳ ಹೆಜ್ಜೆಗಳು, ಸ್ವಲ್ಪ ಕಸರತ್ತು, ಇನ್ನೂ ಸ್ವಲ್ಪ ಕುತಂತ್ರ- ಕೊನೆಗೆ ಒಂದು ದೊಡ್ಡ ಜಗಿತ- ಪಶ್ಚಿಮಬಂಗಾಳದ ಪಂಚಾಯತು ಚುನಾವಣೆಗಳಲ್ಲಿ ಕಾಂಗ್ರೆಸ್(ಐ) ಮತ್ತು ಬಿಜೆಪಿ ನಡುವೆ ಅಲಿಖಿತ ಮಿತ್ರತ್ವ ನಡೆದ ರೀತಿಯದು. ಆದರೆ ಅದರ ಫಲ ಮಾತ್ರ ಯಾವ ರೀತಿಯಲ್ಲೂ 'ಭಾರೀ' ಎನ್ನುವಂತಿಲ್ಲ. ಕೇವಲ ಕಲಕತ್ತೆಯ ಕೆಲ ಪತ್ರಿಕೆಗಳಷ್ಟೇ ಪಶ್ಚಿಮ ಬಂಗಾಳದ ಪಂಚಾಯುತು ರಂಗದಲ್ಲಿ ಕಾಂಗ್ರೆಸ್(ಐ) -ಬಿಜೆಪಿಗಳ ಭಂಡ ಮುನ್ನಡೆಯೆದುರು ಎಡರಂಗ ಸಂಪೂರ್ಣ ಹಿಂದೆ ಸರಿಯುತ್ತಿದೆ ಎಂಬ ಅಬ್ಬರ ಸೃಷ್ಟಿಸಿವೆಯಷ್ಟೆ.

ಮೂರು ಹಂತದ ಪಂಚಾಯುತು ಚುನಾವಣೆಗಳ ಫಲಿತಾಂಶಗಳತ್ತ ಒಂದು ಕಣ್ಣೋಟ ಬೀರಿದರೆ ಸಾಕು. ಇದು ಅರ್ಥವಾಗುತ್ತದೆ. (ಕೋಷ್ಟಕ ನೋಡಿ) ಕಾಂಗ್ರೆಸ್(ಐ) ಬಿಜೆಪಿ ಒಟ್ಟಾಗಿ ನಿಂತರೂ ಎಡರಂಗಕ್ಕೆ ಪಂಚಾಯುತು ಮಟ್ಟದಲ್ಲಿ ಎರಡು ಪಟ್ಟು, ಪಂಚಾಯುತ್ ಸಮಿತಿ ಮಟ್ಟದಲ್ಲಿ ಮೂರು ಪಟ್ಟಿಗಿಂತಲೂ ಹೆಚ್ಚು, ಜಿಲಾ ಪರಿಷತ್ ಮಟ್ಟದಲ್ಲಿ ಎಂಟುಪಟ್ಟು ಸ್ಥಾನಗಳು ದೊರಕಿವೆ.

ಆದರೂ ಏಕೆ ಈ ಕೂಗಾಟ? - ಸಿಪಿಐ(ಎಂ)ನ ರಕ್ತ ಹೀರುವ ಕಾತುರ? ಸತತ ಅಪಪ್ರಚಾರ? ಪಂಚಾಯುತು ಚುನಾವಣೆಗಳ ಪ್ರಕ್ರಿಯೆ ಆರಂಭವಾದಂದಿನಿಂದ 26 ಸಿಪಿಐ(ಎಂ) ಕಾರ್ಯಕರ್ತರು ವಿರೋಧಿಗಳಿಂದ ಕೊಲೆಯಾಗಿದ್ದಾರೆ. ಆದರೆ ಸಿಪಿಐ(ಎಂ) ಗಲಭೆಯೆಬ್ಬಿಸುತ್ತಿದೆ, ರಕ್ತ ಪಿಪಾಸುವಾಗಿದೆ ಎಂದೆಲ್ಲಾ ಕಲ್ಕತ್ತೆಯ ಪತ್ರಿಕೆಗಳ ಪ್ರಚಾರ- ಇರಲಿ ಪತ್ರಿಕಾ ಸ್ವಾತಂತ್ರ್ಯವನ್ನು ಅವರು ಏತಕ್ಕಾಗಿ ಬಳಸುತ್ತಾರೆ ಎಂದು ಇದರಿಂದ ತಿಳಿಯುತ್ತದೆ. ಅದೃಷ್ಟವಶಾತ್ ತಮ್ಮ ವಿಶ್ವಾಸಾರ್ಹತೆ ಉಳಿಸಿಕೊಳ್ಳಲೋ ಏನೋ ರಾಷ್ಟ್ರೀಯ ಪತ್ರಿಕೆಗಳು ಪಂಚಾಯುತು ಚುನಾವಣೆಗಳ ವಸ್ತುನಿಷ್ಟ ಪರಿಶೀಲನೆ ನಡೆಸಿವೆ.

ಆತಂಕಕಾರಿ ಸಂಗತಿ

ಇದರರ್ಥ ಬಿಜೆಪಿ ಮುನ್ನಡೆ ಸಾಧಿಸಿಯೇ ಇಲ್ಲ ಎಂದು ನಾವು ತಳ್ಳಿಹಾಕುತ್ತೇವೆ ಎಂದಲ್ಲ. ವ್ಯಾಪಕ ಕೋಮು ಹಿಂಸಾಚಾರದ ಹಿನ್ನೆಲೆಯಲ್ಲಿ ನಡೆದ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ ಒಂದೇ ಒಂದು ಸೀಟು ಪಡೆಯದಿದ್ದರೂ ಶೇಕಡ ಹನ್ನೆರಡರಷ್ಟು ಮತ ಗಳಿಸಿತ್ತು. ಆದರೂ ಈ ಬಾರಿ ಇನ್ನೂ ಆತಂಕದ ಸಂಗತಿಯೆಂದರೆ ಗ್ರಾಮ ಪಂಚಾಯುತು, ಪಂಚಾಯುತು ಸಮಿತಿಗಳ ಮಟ್ಟದಲ್ಲಿ ಅದು ಕಾಲೂರಲು ಸಾಧ್ಯವಾಗುತ್ತಿರುವುದು. ಬಿಜೆಪಿಯ ಲಾಭ ಬಿಜೆಪಿ-ಕಾಂಗ್ರೆ ಮಿತ್ರತ್ವದ ಫಲ. ಎಲ್ಲಕ್ಕಿಂತ ಆತಂಕಕಾರಿ ಸಂಗತಿಯೆಂದರೆ ಕಾಂಗ್ರೆಸ್(ಐ) ಹೈಕಮಾಂಡಿನ ವಕ್ತಾರರು ಇಂತಹ ಒಂದು ಮೈತ್ರಿ ಅಪೇಕ್ಷಣೀಯ ಎಂದಿರುವುದು ಅದನ್ನು ಸಮರ್ಥಿಸಿಕೊಂಡಿರುವುದು.

ಕಾವಿಪಡೆಗಳಲ್ಲಿ ಬಾಬ್ರಿಮಸೀದಿ ಪ್ರಶ್ನೆ ಪರಿಹಾರಕ್ಕೆ ಮೂರುತಿಂಗಳ ಅವಕಾಶ ಕೊಡಿ ಎಂದು ಹೇಳಿದಂದನಿಂದ ಹಿಡಿದು, ಬಾಬ್ರಿಮಸೀದಿ ಧ್ವಂಸಮಾಡುವ ಸಂಘ ಪರಿವಾರದ ಪಿತೂರಿಯನ್ನು ಮೊದಲೇ ತಡೆಯಲು ನಿರಾಕರಣೆ, ಬಾಬ್ರಿಮಸೀದಿ ಧ್ವಂಸಮಾಡುತ್ತಿದ್ದಾಗ ದಿವ್ಯಮೌನ ಹಾಗೂ ನಂತರ ಆರ್.ಎಸ್.ಎಸ್. ಇತ್ಯಾದಿಗಳ ಮೇಲೆ ನಿಷೇಧವನ್ನು ಅರೆಮನಸ್ಸಿನಿಂದ ಸಮರ್ಥಿಸಿಕೊಂಡ ರೀತಿಯವರೆಗೆ ನರಸಿಂಹರಾಯರ ವರ್ತನೆಗಳನ್ನು ನೋಡಿದರೆ ಕಾವಿಪಡೆಗಳ 'ಹಿಂದುತ್ವ'ದ ವಿಷಯದಲ್ಲಿ ಅವುಗಳೊಂದಿಗೆ ಸ್ಪರ್ಧೆಗಿಳಿಯುವುದೇ ನರಸಿಂಹರಾಯರ ತಂತ್ರ ಎಂದು ಯಾರಿಗೂ ಸಂಶಯವುಳಿಯುವುದಿಲ್ಲ.

ಆದ್ದರಿಂದ ಮುಂದೊಮ್ಮೆ ಅವರ ಪಕ್ಷ ಸೂಕ್ತ ಅವಕಾಶ ಸಿಕ್ಕರೆ ಬುಡಮಟ್ಟದಲ್ಲಿ ಬಿಜೆಪಿಯೊಂದಿಗೆ ಹೊಂದಾಣಿಕೆಗೂ ಇಳಿಯುತ್ತದೆ ಎಂದು ಯಾರಾದರೂ ನಿರೀಕ್ಷಿಸದ ಸಂಗತಿಯೇನಲ್ಲ.

ಇಂತಹ ಒಂದು ಪ್ರಯೋಗಕ್ಕೆ ಕಾಂಗ್ರೆಸ್ ಆರಿಸಿಕೊಂಡ ರಾಜ್ಯ ಪಶ್ಚಿಮಬಂಗಾಳ. ಅದಕ್ಕೆ ಕಾರಣವಿಲ್ಲದಿಲ್ಲ. ಕಾಂಗ್ರೆಸ್ ಒಂದು 'ಬೂರ್ಜ್ವಾ-ಭೂಮಾಲಕ ಪಕ್ಷ', ಇಲ್ಲಿಯ ಪ್ರಭುತ್ವ ಹಾಗೂ ಸರಕಾರ 'ಬೂರ್ಜ್ವಾವರ್ಗದ ನೇತೃತ್ವದ ಬೂರ್ಜ್ವಾ-ಭೂಮಾಲಕ ಸರಕಾರ' ಎಂದು ಸಿಪಿಐ(ಎಂ) ಹೇಳುತ್ತದೆ. ಆದರೆ ಇಂತಹ ಪ್ರಭುತ್ವದ ಚೌಕಟ್ಟಿನೊಳಗೂ ಅದರ ಮುನ್ನಡೆಗೆ ಹೆಜ್ಜೆ-ಹೆಜ್ಜೆಗೂ ಅಡ್ಡಿಯುಂಟುಮಾಡುವ ಮುಖ್ಯ ಸಂಗತಿ ಯಾವುದು? ಈ ಬಗ್ಗೆ ಸಿಪಿಐ(ಎಂ) ಕಾರ್ಯಕ್ರಮ ಸ್ಪಷ್ಟವಾಗಿ ಹೇಳಿದೆ.-

"ಬೂರ್ಜ್ವಾ-ಭೂಮಾಲಕ ಸರಕಾರದ ಸಂಪೂರ್ಣ ವಿಫಲತೆ ಅತ್ಯಂತ ನಗ್ನವಾಗಿ ಕಂಡುಬಂದಿರುವುದು ಕರ್ಷಕ ಪ್ರಶ್ನೆಯಲ್ಲಿ. ನಮ್ಮ ದೇಶದ ಭೂ ಸಂಬಂಧಗಳ ಮೇಲಿನ ಊಳಿಗಮಾನ್ಯ, ಅರೆ-ಊಳಿಗಮಾನ್ಯ ಬಂಧನಗಳನ್ನು ಮುರಿದು ರೈತರನ್ನು ಶತಮಾನಗಳ ದಾಸ್ಯದಿಂದ ವಿಮೋಚನೆ ಮಾಡುವ ಬದಲು ಊಳಿಗಮಾನ್ಯ ಭೂಮಾಲಕರನ್ನು ಬಂಡವಾಳಶಾಹಿ ಭೂಮಾಲಕರನ್ನಾಗಿ ಪರಿರ್ತಿಸುವುದು ಮತ್ತು ಶ್ರೀಮಂತ ರೈತರ ಒಂದು ಸ್ತರವನ್ನು ಬೆಳೆಸುವುದೇ ಆ ಕೃಷಿ ನೀತಿಗಳ ಗುರಿ, ದಿಕ್ಕು ಎಂಬ ಬಗ್ಗೆ ಸುಮಾರು ಎರಡು ದಶಕಗಳ ಕಾಂಗ್ರೆಸ್ ಆಳ್ವಿಕೆಯ ನಂತರ ಏನೊಂದೂ ಸಂದೇಹ ಉಳಿದಿಲ್ಲ. ಬಂಡವಾಳಶಾಹಿ ಅಭಿವೃದ್ಧಿಯ ಅಗತ್ಯವನ್ನು ಪೂರೈಸಲು ಅಗತ್ಯವಾದ ಕೃಷಿ ಉತ್ಪನ್ನಗಳ ಹೆಚ್ಚುವರಿಯನ್ನು ಪಡೆಯಲು ಅವರು ಭೂಮಾಲಕ, ಶ್ರೀಮಂತ ರೈತರ ಮೇಲೆ ಅವಲಂಬಿಸಬಯಸುತ್ತಾರೆ. ಈ ವಿಭಾಗಗಳನ್ನು ಗ್ರಾಮಾಂತರದಲ್ಲಿ ಆಳುವ ವರ್ಗದ ಪ್ರಮುಖ ರಾಜಕೀಯ ನೆಲೆಯನ್ನಾಗಿಸಬಯಸುತ್ತಾರೆ." (ಪರಿಚ್ಛೇದ 34)

ಪಶ್ಚಿಮಬಂಗಾಳದಲ್ಲಿ ಸಿಪಿಐ(ಎಂ)ನಿಂದಾಗಿ ಕಾಂಗ್ರೆಸ್ ಸಂಪೂರ್ಣ ಲೆಕ್ಕಾಚಾರ ಹಾಕಿ ತಯಾರಿಸಿದ ಈ ಯೋಜನೆ ಠುಸ್ಸಾಯಿತು.

1964 ರಲ್ಲಿ ಸಿಪಿಐ(ಎಂ) ರಚನೆಯಾಗಿ ಅದರ ಕಾರ್ಯಕ್ರಮ ಅಂಗೀಕಾರವಾದ ಮೇಲೆ 1960 ರ ದಶಕದ ಮಧ್ಯಭಾಗದಲ್ಲಿ ಪಶ್ಚಿಮಬಂಗಾಳದಲ್ಲಿ ಕರ್ಷಕ ಆಂದೋಲನ ಭಾರೀ ರಭಸ ಪಡೆಯಿತು. 1967 ಹಾಗೂ 1968 ರ ಸಂಯುಕ್ತರಂಗ ಸರಕಾರಗಳು ಅದಕ್ಕೆ ಪ್ರೋತ್ಸಾಹ ನೀಡಿದವು. ಅಲೆಅಲೆಯಾಗೆದ್ದ ರೈತ ಆಂದೋಲನದ ತೀವ್ರತೆಯಿಂದ ಅಜೊಯ್ ಮುಖರ್ಜಿ ನೇತೃತ್ವದ ಬಾಂಗ್ಲಾ ಕಾಂಗ್ರೆಸ್ ಭಯಗ್ರಸ್ತವಾಯಿತು. ಏಕೆಂದರೆ ಅಜೊಯ್ ಮುಖರ್ಜಿಯವರ ದೃಷ್ಟಿಕೋಣ ವಿಚಾರ, ನಂಬಿಕೆ ಎಲ್ಲಾ ಒಬ್ಬ ಪಕ್ಕಾ ಕಾಂಗ್ರೆಸ್ಸಿಗನದ್ದೇ. ಆದ್ದರಿಂದ ಈ ಸರಕಾರಗಳನ್ನು ವಿಸರ್ಜಿಸಲಾಯಿತು. ಆದರೇನು, ರೈತರು ಸಾಕಷ್ಟು ಸಂಘಟಿತರಾಗಿದ್ದರು. ಸಮರ ಮುಂದುವರೆಯಿತು.

ರೈತಾಪಿ ವರ್ಗದ ಪ್ರತ್ಯುತ್ತರ

ಅದೊಂದು ಕರ್ಷಕ ಕ್ರಾಂತಿಯೇನೂ ಆಗಿರಲಿಲ್ಲ. ಆದರೆ ಕರ್ಷಕ ಸುಧಾರಣೆಗಳಿಗಾಗಿ ಒಂದು ಸಮರಶೀಲ ಆಂದೋಲನವಾಗಿತ್ತು. ಅದರ ಪ್ರಮುಖ ಪ್ರಶ್ನೆ ಕಾನೂನುಗಳು ಹಾಕಿದ ಮಿತಿಗಿಂತ ಹೆಚ್ಚೆದ್ದ ಭೂಮಿಯನ್ನು ಭೂಹೀನ ಕೃಷಿ ಕಾರ್ಮಿಕರು ಹಾಗೂ ಬಡ ರೈತರಲ್ಲಿ ಹಂಚುವುದು. ಅತ್ತ ಸ್ವಾತಂತ್ರ್ಯಾ ನಂತರ ಹುಟ್ಟಿಕೊಂಡ ಹೆಚ್ಚುವರಿ ಜಮೀನನ್ನು ಬೇನಾಮಿಯಾಗಿ ಭೋಗಿಸುತ್ತಿದ್ದ ಹೊಸ ಜಮೀಂದಾರಿ (ಜೋತೆದಾರ್) ವಿಭಾಗ ಕೂಡಾ ಅವನ್ನು ರೈತರು ವಶಪಡಿಸಿಕೊಳ್ಳಲು ಬಿಡಲೇಬಾರದು ಎಂದು ದೃಢ ನಿರ್ಧಾರ ಮಾಡಿತ್ತು. ಪರಿಣಾಮವಾಗಿ ಒಂದು ತೀವ್ರ ಹೋರಾಟ ನಡೆಯಿತು. ಹಲವು ಜೀವಗಳು ಹೋದವು. ಭೂಮಾಲಕರ, ಜಮೀಂದಾರರ ಬಾಡಿಗೆ ಗೂಂಡಾಗಳು ಬಂದೂಕುಗಳನ್ನು ಬಳಸಿದರು. ಬುಡಕಟ್ಟು ರೈತರು ಬಿಲ್ಲು-ಬಾಣಗಳಿಂದ ಪ್ರತ್ಯುತ್ತರ ನೀಡಿದರೆ, ಇತರ ರೈತ ವಿಭಾಗಗಳು ತಮ್ಮ ಕೈಗೆ ಏನು ಸಿಕ್ಕಿತೋ ಅದರಿಂದಲೇ ಉತ್ತರ ನೀಡಿದರು. ಹೀಗೆ ಜೋತೆದಾರರು ಕಾನೂನು ಬಾಹಿರವಾಗಿ ಆಕ್ರಮಿಸಿಕೊಂಡಿದ್ದ ಸಾವಿರಾರು ಎಕ್ರೆ ಜಮೀನನ್ನು ರೈತರು ವಶಪಡಿಸಿಕೊಂಡರು. ಉತ್ತು-ಬಿತ್ತು ಬೇಸಾಯ ಮಾಡಿದರು.

1972-77ರ ಸಿದ್ಧಾರ್ಥಶಂಕರ್ ರಾಯ್ ನೇತೃತ್ವದ ಅರೆಫ್ಯಾಸಿಸ್ಟ್ ಭಯೋತ್ಪಾದಕ ಆಡಳಿತಕ್ಕೂ ಅಭೂತಪೂರ್ವ ದಮನ ನಡೆಸಿಯೂ ರೈತರು ವಶಪಡಿಸಿಕೊಂಡಿದ್ದ ಜಮೀನನ್ನು ಕಿತ್ತುಕೊಳ್ಳಲಾಗಲಿಲ್ಲ.

ಪಂಚಾಯತು ರಾಜ್ಯ ಬಂದ ಹಿನ್ನೆಲೆ

ನಂತರ ಬಂತು 1977 ರಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರ. ಮಂತ್ರಿಮಂಡಳದ ರಚನೆಯಾದ ಒಂದು ವರ್ಷದಲ್ಲಿ ರೈತಾಪಿ ವರ್ಗದ

ಕೋಷ್ಟಕ

	ಗ್ರಾಮ ಪಂಚಾಯುತುಗಳಲ್ಲಿ	ಪಂಚಾ… ಸಮಿತಿಗ…
ಒಟ್ಟು ಸ್ಥಾನಗಳು	61011	9453
ಫಲಿತಾಂಶ ಬಂದ ಸ್ಥಾನಗಳು	60836	9387
ಎಡರಂಗ	39019	3811
ಕಾಂಗ್ರೆಸ್(ಐ)	16280	2130
ಬಿಜೆಪಿ	2369	123

ರಾವ್ ರಾಜೀನಾಮೆಗೆ ಸಹಜವಾಗಿಯೇ ಒತ್ತಾಯ ಬಂದಿದೆ. ಅವರ ಪಕ್ಷದ ಜನ ಬಗ್ಗೆ ಏನೇ 'ವಿಶ್ವಾಸ' ವ್ಯಕ್ತಪಡಿಸಿದರೂ ರಾವ್ ಮುಂದಿರುವ ಗೌರವಾನ್ವಿತ ದಾರಿ ಒಂದೇ. ನಾಮೆ ನೀಡಿ ತಮ್ಮನ್ನು ದೋಷಮುಕ್ತಗೊಳಿಸಿಕೊಳ್ಳುವುದು. ಆದರೆ ಅಧಿಕಾರದಲ್ಲೇ ದರೆ ಅವರು ಕೈದೆಬ್ಬಗೆ ಮಾಡಿಸಿಕೊಂಡಿದ್ದಾರೆಂಬ ಜನಗಳ ನಂಬಿಕೆ ಬಲಗೊಳಿಸುತ್ತದೆ.

ಗಳು ತಮ್ಮ 'ರಾಜಕೀಯ ವಿಧೇಯತೆ' ಲಿಸಿಕೊಳ್ಳುತ್ತಾರೆ!

ಚಾರಗಳಲ್ಲಿ ಸಿಲುಕಿಬಿದ್ದ ಅಪರಾಧಿಗಳನ್ನು ತನ್ನಹೊಣೆ ಎಂಬಂತೆ ಕಾಂಗ್ರೆಸ್ (ಐ) . ನ್ಯಾಯಾಧೀಶ ರಾಮಸ್ವಾಮಿಯವರ ದೋಷಾರೋಪಣೆ ಸಂದರ್ಭದಲ್ಲಿ ಅತ್ಯಂತ ತನ ಪ್ರದರ್ಶಿಸಿದ ಅದು ಅದಕ್ಕೆ ಮೊದಲು ಹಗರಣದ ಬಗ್ಗೆ ತನಿಖೆ ನಡೆಸಿದ ಜಂಟಿ ಸಮಿತಿಯ ಕೆಲಸ ಮೊದಲಿಂದಲೂ ವಿವಾ ಟ್ಟಿಸಿತ್ತು. ಒಟ್ಟಾರೆಯಾಗಿ ಕಾಂಗ್ರೆಸ್(ಐ) ಸಂಸ್ಥೆಗಳ ಬಗ್ಗೆ ಜನಗಳ ವಿಶ್ವಾಸವೇ ಹಾರಿ ತೆ ಮಾಡಿದೆ.

ದೀಯ ಸಮಿತಿಯ ಹೊಣೆ

ನ್ನೆಲೆಯಲ್ಲಿ ಶೇರು ಹಗರಣದ ತನಿಖೆ ವ ಜಂಟಿ ಸಂಸದೀಯ ಸಮಿತಿಯ ಮೇಲೆ ಣೆಯಿದೆ. ಈ ಸಮಿತಿಯ ಎಲ್ಲಾ ಸದ ದಿನ ಸಭೆಯಲ್ಲಿ ತಾವು ಈ ಹಗರಣದಲ್ಲಿ ಎಂಬ ಸಂಶಯಗಳನ್ನೆಲ್ಲಾ ನಿವಾರಿಸುವಂ ಕೈಗೊಳ್ಳಬೇಕು. ಅದು ಸತತವಾಗಿ ತನಿಖೆ ಂದಿನ ಸಂಸತ್ತಿನ ಅಧಿವೇಶನದಲ್ಲಿ ವರದಿ ಕು. ತಮ್ಮೊಳಗಿನ ಕರಿಗಾಲುಗಳನ್ನು, ಸಂಸ ುತಿಗೆ ಅವರ ಹೆಸರು ಸೂಚಿಸಿದವರನ್ನು ೇಕು. ಹರ್ಷದ್ ಮೆಹ್ತಾ ಪ್ರಧಾನ ಮಂತ್ರಿ ಹ್ತಾ ಹೆಸರಿಸಿದ ಇತರರನ್ನು ವಿಚಾರಣೆಗೆ .

ಈ ಹಗರಣದಿಂದ ತೀರಾ ಕೋಪೋದ್ರಿಕ್ತ

ವಾಗಿದೆ. ಆದ್ದರಿಂದ ನರಸಿಂಹರಾವ್ ರಾಜೀನಾಮೆಗೆ ಸಹಜವಾಗಿಯೇ ಒತ್ತಾಯ ಬಂದಿದೆ. ಅವರ ಪಕ್ಷದ ಜನ ಅವರ ಬಗ್ಗೆ ಏನೇ 'ವಿಶ್ವಾಸ' ವ್ಯಕ್ತಪಡಿಸಿದರೂ ರಾವ್ ಮುಂದಿರುವ ಗೌರವಾನ್ವಿತ ದಾರಿ ಒಂದೇ. ರಾಜೀನಾಮೆ ನೀಡಿ ತಮ್ಮನ್ನು ದೋಷಮುಕ್ತಗೊಳಿಸಿಕೊಳ್ಳುವುದು. ಆದರೆ ಅಧಿಕಾರದಲ್ಲೇ ಉಳಿದರೆ ಅವರು ಕೈದೆಬ್ಬಗೆ ಮಾಡಿಸಿಕೊಂಡಿದ್ದಾರೆಂಬ ಜನಗಳ ನಂಬಿಕೆ ಬಲಗೊಳಿಸುತ್ತದೆ. ಅಷ್ಟೇ ಅಲ್ಲ ಹರ್ಷದ್ ಮೆಹ್ತಾ ಕಳೆದ ಫೆಬ್ರುವರಿಯಲ್ಲೇ ಅಫಿಡ್‌ವಿಟ್ ಸಲ್ಲಿಸಿದ್ದರೂ ತಾನೇಕೆ ಮೌನವಾಗುಳಿದೆ ಎಂಬ ಬಗ್ಗೆಯೂ ರಾವ್ ಉತ್ತರ ನೀಡಬೇಕಾಗಿದೆ. ಸಿಬಿಐ ತನ್ನ ತನಿಖೆಯಲ್ಲಿ ವಿಳಂಬ ಮಾಡಲು ಜಂಟಿ ಸಂಸದೀಯ ಸಮಿತಿಯ ಪ್ರಶ್ನೆಗಳಿಗೆ ಹಾರಿಕೆಯ ಉತ್ತರಗಳನ್ನು ನೀಡಲು ಕಾರಣಗಳೇನು ಎಂದು ಉತ್ತರಿಸಬೇಕಾಗಿದೆ. ಕಾಂಗ್ರೆಸ್(ಐ) ಭ್ರಷ್ಟರನ್ನು ಆಪಾದಿತರನ್ನು ಈಗಲೂ ರಕ್ಷಿಸಲು ಯತ್ನಿಸಿದರೆ ಅದರ ಫಲವುಣ್ಣ ಬೇಕಾಗುತ್ತದೆ.


ಹರ್ಷದ್ ಕ್ರಿಮಿನಲ್ ಪಾತ್ರದ ಬಗ್ಗೆ ಸಂಶಯವೇ ಅಲ್ಲ. ಅದೇ ರೀತಿ ಈ ಸಾರ್ವಜನಿಕ ಹಣದ ಲೂಟಿಯಲ್ಲಿ ರಾಜಕೀಯ ನೆರವು ಶಾಮಿಲು ಇದೆಯೆಂಬುದರಲ್ಲೂ ಸಂಶಯವಿಲ್ಲ. ಹರ್ಷದ್ ಮೆಹ್ತಾನಿಗೆ ಯಾವುದೇ ಕ್ಷಮೆ ಸಾಧ್ಯವಿಲ್ಲ. ಅದೇ ರೀತಿಯಲ್ಲಿ ಆತನನ್ನು ಈ ಚಟುವಟಿಕೆಗಳನ್ನು ಪೋಷಿಸಿದವರಿಗೂ ಯಾವುದೇ ಕ್ಷಮೆಗೆ ಅವಕಾಶವೇ ಇಲ್ಲ. ನರಸಿಂಹರಾವ್ ಪ್ರಧಾನಮಂತ್ರಿಯ ಸ್ಥಾನದಲ್ಲಿರುವವರೆಗೆ ಈ ಬಗ್ಗೆ ತನಿಖೆಯಲ್ಲಿ ಯಾರಿಗೂ ನಂಬಿಕೆ ಬರುವುದಿಲ್ಲ. ಅವರು ಕೆಳಗಿಳಿಯಲೇಬೇಕು ಆದರೆ ಇಳಿಯುತ್ತಾರೆಯೇ?

ಅಂಗೈ ತೋರಿದರೆ ಮುಂಗೈಯನ್ನೇ ನುಂಗುವ ವಿದೇಶೀ ಕಂಪೆನಿಗಳಿಗೆ ಮುಕ್ತ ಪ್ರವೇಶ

ಜಾಗತಿಕವಾಗಿ ಬಡರಾಷ್ಟ್ರಗಳ ಶೋಷಣೆಗೆ ಹೆಸರಾದ ಬಹುರಾಷ್ಟ್ರೀಯ ಕಂಪೆನಿಗಳಿಗೆ ಭಾರತದೊಳಗೆ ಈಗ ಮುಕ್ತ ಪ್ರವೇಶ. ಕೇಂದ್ರ ಸರ್ಕಾರ, ಕೋಕಾ ಕೋಲಾ, ಪೆಪ್ಸಿ ಫುಡ್ಸ್, ಪ್ಯೂಗೊ ಜಿ. ಕ್ಯಾಪಿಟಲ್ಸ್ ಮತ್ತು ಮೋರ್ಗಾನ್ ಸ್ಟಾನ್ಲೆಗಳ ಪ್ರವೇಶವನ್ನು ಅನುಮೋದಿಸಿದೆ.

ಹೊಸ ಆರ್ಥಿಕ ನೀತಿಗಳಗನುಗುಣವಾಗಿ ವಿದೇಶೀ ಬಂಡವಾಳವನ್ನು ದೇಶದೊಳಗೆ ಆಹ್ವಾನಿಸುತ್ತಿರುವ ಸರ್ಕಾರ ಈ ಬಂಡವಾಳಿಗರು ಬಂದು ದೇಶದಲ್ಲಿ ಆಚರಣೆಗೆ ತೊಡಗುವಲ್ಲಿದ್ದ ಅಡೆತಡೆಗಳನ್ನು ಸಂಪೂರ್ಣ ತೆಗೆದಿದೆ. ಅಂಗೈ ಕೊಟ್ಟರೆ ಮುಂಗೈಯನ್ನೇ ನುಂಗಿ ಹಾಕುವ ಚಾಲಾಕುತನವುಳ್ಳ ಈ ಕಂಪೆನಿಗಳು ಭಾರತವನ್ನು ಕೊಳ್ಳೆ ಹೊಡೆಯಲಿವೆ. ಅವು ಎಂತಹ ನೀಚತನಕ್ಕಿಳಿದರೂ ಅವುಗಳನ್ನು ಹತೋಟಿಯಲ್ಲಿಡುವ ತಾಕತ್ತು ನಮ್ಮ ಸರ್ಕಾರಕ್ಕಿರುವುದಿಲ್ಲ.

ಈ ಕೊಳ್ಳೆಯಲ್ಲಿ ತನಗೆ ಹೆಚ್ಚು ತನಗೆ ಹೆಚ್ಚು ಪಾಲು ಬೇಕೆಂದು ಈ ಕಂಪನಿಗಳು ಆರ್ಥಿಕ ಯುದ್ಧಗಳನ್ನೂ ಪ್ರಾರಂಭಿಸುತ್ತವೆ. ನಮ್ಮಲ್ಲಿನ ಚಿಕ್ಕಪುಟ್ಟ ಬಂಡವಾಳದ ಕಂಪನಿಗಳನ್ನು ನುಂಗಿ ಹಾಕುತ್ತವೆ. ಇವುಗಳ ನಡುವೆ ನಮ್ಮ ದೇಶದ ಬಡತನ, ನೋವು ಹೆಚ್ಚುತ್ತಲೇ ಹೋಗುತ್ತವೆ.



ನರಸಿಂಹರಾವ್ ಸರಕಾರದ 25ನೇ ತಿಂಗಳಲ್ಲಿ

ಭಾರತಕ್ಕೆ ಸಾಲ ನೀಡುವವರಿಗೆ ವಿಶ್ವಬ್ಯಾಂಕು ಹುಕುಂ

ಈಗ ಭಾರತಕ್ಕೆ ಸಾಲ ನೀಡುವವರಿಗೂ ವಿಶ್ವಬ್ಯಾಂಕ್ ನಿರ್ದೇಶನ ನೀಡುತ್ತದೆ. ಭಾರತ ಈಗ ವಿಶ್ವಬ್ಯಾಂಕ್‌ನ ಪಾಲನೆಯಲ್ಲಿರುವ ದೇಶ. ಎಯ್ಡ್ ಇಂಡಿಯಾ ಕನ್ಸೋರ್ಟಿಯಮ್‌ನ ಜುಲೈ ಒಂದರ ಸಭೆಯಲ್ಲಿ ಪಾಲುಗೊಳ್ಳುವ ಸಂಸ್ಥೆಗಳಿಗೆ ವಿಶ್ವಬ್ಯಾಂಕ್ ಭಾರತಕ್ಕೆ ನೀಡುವ ಸಾಲದ ಮೊತ್ತವನ್ನು ಕಳೆದ ವರ್ಷದ ಮಟ್ಟವಾದ 7.2. ಬಿಲಿಯ ಡಾಲರುಗಳ ಮಟ್ಟದಲ್ಲೇ ಇಡಿ ಎಂಬ ನಿರ್ದೇಶನ ನೀಡಿದೆ.

ಇದರಲ್ಲಿ ಐನೂರು ಮಿಲಿಯ ಡಾಲರುಗಳಷ್ಟು ಶೀಘ್ರ ವಿತರಿಸುವ ಭಾಗ. ಅಸಾಧಾರಣ ಅವಶ್ಯಕತೆ 1.8 ಬಿಲಿಯ ಡಾಲರುಗಳಷ್ಟು ಇದರಲ್ಲಿ 1.3. ಬಿಲಿಯ ಡಾಲರುಗಳಷ್ಟು ವಿಶ್ವಬ್ಯಾಂಕ್ ಮತ್ತು ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕುಗಳಿಂದ ವಿವಿಧ ಯೋಜನೆಗಳ ನೆರವಿನ ರೂಪದಲ್ಲಿ ಬರಲಿದೆ.

ವಿಶ್ವಬ್ಯಾಂಕ್‌ನ ಪಾಲನೆಯಲ್ಲಿ ಭಾರತ ಸುಖವಾಗಿರಬಹುದು ಅಲ್ಲವೇ?!!

ಇಕ್ಕಳದಲ್ಲಿ ಸಿಕ್ಕಿರುವ ಎಬಿಬಿ

ಏಶಿಯಾ ಬ್ರೌನ್ ಬೋವೆರಿ (ಎಬಿಬಿ) ಎಂಬ ಸ್ವಿಟ್ಜರ್‌ಲ್ಯಾಂಡಿನ ಬಹುರಾಷ್ಟ್ರೀಯ ಕಂಪನಿ ನಮ್ಮ ಭಾರತ ರೈಲ್ವೆ ನಿಗಮದೊಡನೆ ವ್ಯವಹಾರ ಕುದುರಿಸಿ ವಿವಾದಕ್ಕೊಳಗಾದುದು ನೆನಪಿದೆಯಷ್ಟೇ. ಈ ಹಗರಣದ ಕಂಪನಿ ಈಗ ಇಕ್ಕಳದಲ್ಲಿ ಸಿಕ್ಕಿಕೊಂಡಿದೆ.

ಭಾರತದ ಒರಿಸ್ಸಾದಲ್ಲಿರುವ ಇಂಡಿಯನ್ ಚಾರ್ಜ್ ಕ್ರೋಮ್ ಲಿಮಿಟೆಡ್ (ಐಸಿಸಿಎಲ್)ನೊಂದಿಗೆ ಒಂದು ವಿದ್ಯುತ್ ಘಟಕ ಸ್ಥಾಪಿಸುವಲ್ಲಿ ಈ ಎಬಿಬಿ ಇತರ ಕಂಪನಿಗಳೊಡನೆ ಪಾಲುಗೊಂಡಿತ್ತು. ಅದು ಹೇಳಿರುವ ಸಾಮರ್ಥ್ಯದಲ್ಲಿ ಕೆಲಸ ಮಾಡುತ್ತಿಲ್ಲವೆಂದು ಕೋರ್ಟಿಗೆ ಹೋಗಿದೆ. ಎಬಿಬಿ ಭಾರತದ ನ್ಯಾಯಾಲಯಗಳಿಗೆ ತನ್ನನ್ನು ಎಳೆಯಲು ಸಾಧ್ಯವಿಲ್ಲ ಎಂದು ವಾದಿಸಿತ್ತು. ಆದರೆ ಒರಿಸ್ಸಾದ ಕೆಳ ನ್ಯಾಯಾಲಯ ಇದು ಸಾಧ್ಯ ಎಂದು ತೀರ್ಪಿತ್ತಿತ್ತು.

ಇದೀಗ ಒರಿಸ್ಸಾ ಉಚ್ಚ ನ್ಯಾಯಾಲಯ ಈ ಕೆಳಕೋರ್ಟಿನ ತೀರ್ಪನ್ನು ಎತ್ತಿ ಹಿಡಿದಿದೆ. ಎಬಿಬಿ ಈಗ ವಿಚಾರಣೆಗೆ ಒಳಪಡಬೇಕು.

ಆದರೆ ರೈಲ್ವೆಯೊಡನೆ ನಡೆಸಿದ ಹಗರಣದ ವಿಷಯ? ತಪ್ಪಿಸಿಕೊಳ್ಳಲು ಎಬಿಬಿ ಸತತವಾಗಿ ದಾರಿ ಹುಡುಕುತ್ತಿದೆಯೇ?

ಶೇರು ಮಾರುಕಟ್ಟೆಯ ಹರಾಜು

ಶೇರು ಮಾರುಕಟ್ಟೆಯಲ್ಲಿ ಶೇರುಗಳ ದರ ವಿಪರೀತ ಇಳಿದಿದೆ. ಒಂದು ಕಾಲದಲ್ಲಿ ಹರ್ಷದ್ ಮೆಹ್ತ ನಂತ ದಲ್ಲಾಳಿಗಳ ಜೂಜಿನಿಂದಾಗಿ ವಿಪರೀತ ಏರಿದ್ದ ದರಗಳು ಈಗ ಅಂತವರಿಲ್ಲದೆ ನರಳುತ್ತಿದೆ. ಜನಸಾಮಾನ್ಯರಲ್ಲಿ ಹಲವರು ಈ ಶೇರುಗಳಲ್ಲಿ ಹಣತೊಡಗಿಸಿ ಕಳೆದುಕೊಂಡಿದ್ದಾರೆ. ಶೇರು ಹಗರಣ ಹೊರಬಂದ ನಂತರ ಶೇರಿನ ದರಗಳು ಮೊದಲಿನ ದರದಲ್ಲಿ ಏರಲೇ ಇಲ್ಲ.

ನರಸಿಂಹರಾಯರು ಹರ್ಷದ್ ಮೆಹ್ತನಿಂದ ಒಂದು ಕೋಟಿ ರೂಪಾಯಿಗಳನ್ನು ಪಡೆದಿದ್ದರೆಂದು ಮೆಹ್ತ ಆಪಾದಿಂದ ಮೇಲೆ ಮತ್ತೆ ಶೇರು ದರಗಳು ಇಳಿಯತೊಡಗಿವೆ. ಈ ಇಳಿತವನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳಿಂದ ಏನೂ ಪ್ರಯೋಜನವಾಗಿಲ್ಲ. ಈಗೀಗಂತೂ ಶೇರು ಮಾರುಕಟ್ಟೆ ಜೂಜಿನ ಕಟ್ಟೆ ಎಂಬುದು ಜನ ಸಾಮಾನ್ಯರಿಗೆಲ್ಲ ಮನದಟ್ಟಾದಂತಿದೆ. ಹೊಸ ಆರ್ಥಿಕ ನೀತಿಗಳ ಗರ್ಭದಲ್ಲಿ ಇನ್ನೆಷ್ಟು ಇಂತಹ ಜೂಜುಗಳು ಅಡಗಿವೆಯೋ ಯಾರಿಗೆ ಗೊತ್ತು?

ಹೆಚ್ಚುವರಿ ಜಮೀನನ್ನು ಹಂಚುವ ಹೆಸರು ತಯಾರಿಸಲಾಯಿತು. ಭೂ ಸುಧಾ ನಿಗೆ ಎರಡು ತಿದ್ದುಪಡಿಗಳನ್ನು ತರಲಾ ಂದ ರಾಜ್ಯಸರಕಾರ ಹಣ್ಣಿನ ತೋಟಗಳು ದ್ದ ಮೀನುಗಾರಿಕೆಯನ್ನು ವಹಿಸಿಕೊಳ್ಳಲು ತು. ಅದರೊಂದಿಗೆ ಭಾಗ ಪಾಲುದಾರ ಗಾರ್ದಾರರ) ಹೆಸರುಗಳನ್ನು ದಾಖಲು ದೊಡ್ಡ ಆಂದೋಲನ ಆರಂಭಗೊಂಡಿತು. ರನ್ನು ಒಕ್ಕಲೆಬ್ಬಿಸುವುದನ್ನು ನಿಷೇಧಿಸುವ ನವನ್ನು ರಚಿಸಲಾಯಿತು.

ನ್ನೆಲೆಯಲ್ಲಿ ಪಂಚಾಯತು ರಾಜ್ಯ ಬಂತು. ದ ವರ್ಗಹೋರಾಟ, ಎಡರಂಗ ಸರ ಯ ಹಸ್ತದ ನೆರವಿನಿಂದ ಪಶ್ಚಿಮಬಂಗಾಳ ರ್ಣ ಭೂಸಂಬಂಧಗಳ ಸ್ವರೂಪವನ್ನೇ ಭೂಮಾಲಕರ, ಜೋತೆದಾರರ, ಲೇವಾ ಆರ್ಥಿಕ ಬೆನ್ನೆಲುಬನ್ನೇ ಮುರಿದು ಯಿತು. ಆಗಲೇ ಪಂಚಾಯತುಗಳು ಸರಿ ಯಲ್ಲಿ, ಸಿಪಿಐ(ಎಂ) ಕಂಡರಿಸಿದ ರೀತಿ ನಿರ್ವಹಿಸಲು ಸಾಧ್ಯವಾಯಿತು. ಪಶ್ಚಿ ದಲ್ಲಿ ಪಂಚಾಯತುಗಳ ಸಾಧನೆಗಳನ್ನು ಜಗತ್ತೇ ಒಪ್ಪಿಕೊಳ್ಳುತ್ತಿದೆ.

ಅದೇ ವೇಳೆಗೆ ಹೆಚ್ಚುವರಿ ಜಮೀನು ಭೂಮಾಲಕರು, ಜೋತೆದಾರರು ಸುಮ್ಮನೇ ಲು, ಓಂದೆ ಸರಿಯಲು ಸಿದ್ಧರಿರಲಿಲ್ಲ. ಭೂಮಾಲಕ ಪ್ರಭುತ್ವ ವ್ಯವಸ್ಥೆಯ ಚೌಕ ಒಂದು ಪ್ರಾಂತ್ಯದ ಗ್ರಾಮಾಂತರ ನನ್ನು 'ಕಿತ್ತುಕೊಂಡವರಿಂದ ಕಿತ್ತುಕೊಳ್ಳಲಾ ದೊಂದು ಅಸಂಬದ್ಧ ಪರಿಸ್ಥಿತಿಯಲ್ಲವೇ'? ಈ ರೀತಿಯ ಮುನ್ನಡೆಯನ್ನು ಪಟ್ಟಭದ್ರ ತೆಪ್ಪಗೇ ಕೂತು ನೋಡುತ್ತವೆ ಎಂದು ು ಮುಗ್ಧತನದ ಪರಮಾವಧಿ. ಅವರು ಳೆ ಓಂದಕ್ಕೆ ಹೊಡೆಯುತ್ತಾರೆ. ಒಮ್ಮೆ ವಿಫ ತ್ತೆ- ಹೊಡೆಯುತ್ತಾರೆ. ಮತ್ತೆ-ಮತ್ತೆ ಹೊಡೆಯುತ್ತಾರೆ. ಹಾಗೆ ಹೊಡೆದಾಗ ಅದನ್ನು ಎದುರಿಸಬೇಕು ಎಂಬುದು ಸ್ಪಷ್ಟವಾಗಿತ್ತು..

ಜಿಲ್ಲಾ ಪರಿಷತ್ತುಗಳಲ್ಲಿ
656
625
552
66
0

ಮರಳಿ ಗಿಟ್ಟಿಸಲು ಪಟ್ಟಭದ್ರರ ಪ್ರಯತ್ನ

1993 ರ ಪಂಚಾಯತು ಚುನಾವಣೆಗಳನ್ನು ಅವರು ಇದಕ್ಕೆ ಒಂದು ಉತ್ತಮ ಅವಕಾಶ ಎಂದು ಆರಿಸಿಕೊಂಡರು. ಬಿಜೆಪಿಯ ಬಲವನ್ನು ವಿಪರೀತ ಉತ್ಪ್ರೇಕ್ಷಿಸಲಾಯಿತು. ಎಡರಂಗ 16 ವರ್ಷ ಅಧಿಕಾರದಲ್ಲಿದ್ದುದರಿಂದ ಆ ಬಗ್ಗೆ ಕೆಲವರಲ್ಲಿ ಅಧಿಕಾರಸ್ಥರ ವಿರುದ್ಧ ಇರಬಹುದಾದ ಸಾಮಾನ್ಯ ಭಾವನೆ ಬೆಳೆದಿದ್ದರೆ ಆಶ್ಚರ್ಯವಿಲ್ಲ. 1977 ರ ಮೊದಲಿನ ಗ್ರಾಮೀಣ ಜೀವನದ ಕಹಿ ಅನುಭವವಿಲ್ಲದ ಭೂ ಸುಧಾರಣೆಯ ಪ್ರಗತಿ, ಮನೆ ನಿವೇಶನ, ಶಿಕ್ಷಣ, ರಸ್ತೆಗಳು, ನೀರಾವರಿ ಮತ್ತಿತರ ಸೌಲಭ್ಯಗಳಲ್ಲಾದ ಸುಧಾರಣೆಗಳು ಹೇಗೆ ಸಾಧ್ಯವಾಯಿತು ಎಂಬುದರ ಅರಿವಿಲ್ಲದ ಯುವಜನರು ಹಾಗೂ ಇಂತಹ ಶಕ್ತಿಗಳನ್ನೆಲ್ಲಾ ಒಟ್ಟಿಗೆ ತಂದರೆ ಎಡರಂಗವನ್ನು ಎದುರಿಸಬಹುದು ಎಂದು ವರ್ಗ ಶತ್ರುಗಳು ಭಾವಿಸಿದರು. ಈ ಮೂಲಕ ತಮ್ಮ ಕೆಲವಾದರೂ ವರ್ಗಹಿತಗಳಿಗೆ ಅನುಕೂಲವಾದ ಫಲಿತಾಂಶವನ್ನು ಗಮನಾರ್ಹ ಪ್ರಮಾಣದಲ್ಲಿ ಈಡೇರಿಸಿಕೊಳ್ಳಬಹುದು ಎಂದು ಅವರು ಭಾವಿಸಿದರು. ಪಂಚಾಯತು ಚುನಾವಣೆಗಳಲ್ಲಿ ಅವರ ಹತಾಶಕ್ರಮಗಳು, ಇಡೀ ಗ್ರಾಮಾಂತರ ಉರಿಯುವಂತೆ ಮಾಡುವ ಪ್ರಯತ್ನಗಳಿಗೆ ಕಾರಣವನ್ನು ಇಲ್ಲಿ ಕಾಣಬಹುದು. ಚುನಾವಣೆಗಳಲ್ಲಿ ಮಣ್ಣು ಮುಕ್ಕಿದ ನಂತರ ತಮ್ಮ ಮತ- ಭೇದಗಳನ್ನು ಮರೆತು ಬಂಗಾಳ ಬಂದ್‌ಗೆ ಕರೆ ನೀಡಿದರು. ಈಗ ಕಲ್ಕತ್ತೆಯಲ್ಲಿ ಮೊತ್ತಮೊದಲಬಾರಿಗೆ, ಕಲ್ಕತ್ತೆಯಲ್ಲಷ್ಟೇ ಏಕೆ ಇಡೀ ಬಂಗಾಳದ ರಸ್ತೆಗಳಲ್ಲಿ ಎಲ್ಲಾ ಪಟ್ಟಭದ್ರ ಹಿತಾಸಕ್ತಿಗಳು, ಕೋಮುವಾದಿ, ಅರೆ- ಕೋಮುವಾದಿ, ಖೋಟಾ ಜಾತ್ಯತೀತರು ಇತ್ಯಾದಿಗಳು ಎಲ್ಲರೂ ತಾವು ಕಳಕೊಂಡದ್ದನ್ನು ಮತ್ತೆ ಪಡೆಯಲು ಒಟ್ಟಾಗಿ ಪ್ರಯತ್ನಿಸುವುದನ್ನು ನಾವು ಕಾಣಲಿದ್ದೇವೆ. ಇವೆಲ್ಲದರ ಕೇಂದ್ರ ಬಿಂದು, ಸಾರಸರ್ವಸ್ವ ಎಂದರೆ ಭೂಮಿ. ಆದರೆ ಪಟ್ಟಭದ್ರ ಹಿತಾಸಕ್ತಿಗಳ ಇಂತಹ ಸಮರಕರೆಗಳ ಬಗ್ಗೆ ಭಯ ಪಡಬೇಕಾಗಿಲ್ಲ. ಆ ಕರೆಗಳನ್ನು ನಿಷ್ಕರುಣೆಯಿಂದ, ಹಿಂದೆ ಮುಂದೆ ನೋಡದೆ ಎದುರಿಸಬೇಕು. ಅವರ ಧಾಳಿಯನ್ನು ಎದುರಿಸಲೇಬೇಕು, ಎದುರಿಸಲು ಸಾಧ್ಯ.

ಬಂಗಾಳದ ಗ್ರಾಮಾಂತರದಲ್ಲೀಗ ವರ್ಗವೈಷಮ್ಯ ತೀಕ್ಷ್ಣಗೊಳ್ಳುತ್ತಿದೆ. ಈಗ ನಡೆಯುತ್ತಿರುವುದು ವರ್ಗ ಸಮರದ ಒಂದು ತೀವ್ರಗೊಂಡ ಸ್ವರೂಪ. ಇಲ್ಲಿ ರಾಜಿ ಮಾಡಿಕೊಳ್ಳುವ, ಹಿಂದಕ್ಕೆ ಸರಿಯುವ ಪ್ರಶ್ನೆಯೇ ಇಲ್ಲ. ವರ್ಗ ಲೂಟಿಕೋರರೊಡನೆ ಹಣಾಹಣಿಗೆ ಸಿದ್ಧರಾಗಬೇಕು. ಅವರ ಧಾಳಿಗಳನ್ನು ಹಿಮ್ಮೆಟ್ಟಿಸಬೇಕು.

ಭಾರತೀಯ ಸ್ಟೇಟ್ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮನೆಗೆ

-- ಜಿ.ಎಸ್.ಮಣಿ

ದೇಶದ ಸರ್ಕಾರಿ ವಲಯದ ಅತ್ಯಂತ ದೊಡ್ಡ ಬ್ಯಾಂಕ್ ಆಗಿರುವ ಭಾರತೀಯ ಸ್ಟೇಟ್ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರಾದ ವಿ. ಮಹದೇವನ್‌ರನ್ನು ಸರ್ಕಾರ ಅಮಾನತ್ತುಗೊಳಿಸಿ ಮನೆಗೆ ಕಳುಹಿಸಿದೆ. ಅವರಿಗೆ ಇನ್ನು ಕೇವಲ ಐದು ದಿನಗಳ ಸೇವಾವಧಿ ಉಳಿದಿತ್ತು. ಹಗರಣದ ವಿವರಗಳು ಹೊರಬಂದ ಎಷ್ಟೋ ದಿನಗಳನಂತರ ಈ ಕ್ರಮ ಕೈಗೊಂಡಿದೆ.

ಶೇರು ಹಗರಣದ ವಿಚಾರಣೆ ಮಾಡುತ್ತಿರುವ ಜಂಟಿ ಸಂಸದೀಯ ಸಮಿತಿಯ ವರದಿಯ ಕರಡಿನಲ್ಲಿ ಭಾರತೀಯ ಸ್ಟೇಟ್ ಬ್ಯಾಂಕನ್ನು ತೀವ್ರವಾಗಿ ಟೀಕಿಸಲಾಗಿತ್ತಾದ್ದರಿಂದ ಸರ್ಕಾರ ಈ ಕ್ರಮ ಕೈಗೊಂಡಿದೆ. ಸರ್ಕಾರ ತನ್ನ ಮುಖವುಳಿಸಿಕೊಳ್ಳಲು ಕೈಗೊಂಡಿರುವ ಕ್ರಮ ಇದೆಂದು ಸ್ಪಷ್ಟವಾಗಿ ತೋರುತ್ತದೆ.

ಕೇಂದ್ರ ಸರ್ಕಾರದ ಎಂಟು ಮಂತ್ರಿಗಳನ್ನು ಅದರಲ್ಲೂ ಮುಖ್ಯವಾಗಿ ಹಣಕಾಸು ಮಂತ್ರಿಗಳು ಮತ್ತು ಅವರ ಮಂತ್ರಾಲಯವನ್ನು ಈ ಕರಡಿನಲ್ಲಿ ಟೀಕಿಸಲಾಗಿತ್ತು. ಸರ್ಕಾರ ಇವರ ಮೇಲೆ ಏನು ಕ್ರಮ ಕೈಗೊಂಡಿದೆ?

ಸತ್ಯ ಮರೆಮಾಚುವ ಸಿಬಿಐ ಪ್ರಯತ್ನ

ಶೇರು ಹಗರಣದ ತನಿಖೆ ನಡೆಸುತ್ತಿರುವ ಸಿಬಿಐಗೆ ಪ್ರಧಾನಿ ನರಸಿಂಹರಾಯರಿಗೆ ಮೆಹ್ತ ಹಣ ನೀಡಿದ್ದ ಬಗ್ಗೆ ಮಾಹಿತಿಯಿತ್ತು. ಆದರೂ ಅದು ಈ ವಿಷಯವನ್ನು ತೀವ್ರವಾಗಿ ವಿಚಾರಿಸಿ ನಿಜವನ್ನು ತಿಳಿಯುವ ಪ್ರಯತ್ನ ಮಾಡದೆ ವಿಷಯವನ್ನೇ ಮುಚ್ಚಿ ಹಾಕಲು ಪ್ರಯತ್ನಿಸಿತು.

ಪ್ರಧಾನಿಯ ನೇರ ಹತೋಟಿಯಲ್ಲಿರುವ ದೇಶದ ಈ ಅತ್ಯುನ್ನತ ವಿಚಾರಣಾ ಸಂಸ್ಥೆ ಇಂದು ತನಗೆ ತಾನು ಕಳಂಕ ತಂದುಕೊಂಡಿದೆ. ಪ್ರಾಮಾಣಿಕ ಅಧಿಕಾರಿ ಮಾಧವನ್‌ರ ಪ್ರಾಮಾಣಿಕ ಪ್ರಯತ್ನಗಳಿಗೆ ತಡೆ ಯೊಡ್ಡಿದ ಈ ಸಂಸ್ಥೆ ಇಂದು ನಿಷ್ಪಕ್ಷಪಾತ ಸಂಸ್ಥೆಯಾಗಿ ಉಳಿದಿಲ್ಲ. ಇನ್ನು ಮುಂದೆ ಸಿಬಿಐ ತನಿಖೆಗೆ ಆಗ್ರಹ ಪಡಿಸುವವರು ಏನು ಮಾಡಬೇಕೋ?

ಹರ್ಷದ್ ಮೆಹ್ತನ ಹೊಸ ಬಾಂಬು

ತಾನು ಪ್ರಧಾನಿಯವರಿಗೆ ಒಂದು ಕೋಟಿ ರೂಪಾಯಿಗಳನ್ನು ನೀಡಿದ್ದನ್ನು ಸಿದ್ಧಗೊಳಿಸಲು ಮೆಹ್ತ ಹೊಸ ಪುರಾವೆಗಳನ್ನು ನೀಡಿದ್ದಾನೆ. ಹರ್ಷದ್ ಮೆಹ್ತ ಮತ್ತು ಪ್ರಧಾನಿ ನಡುವೆ ಮಧ್ಯವರ್ತಿಯಾಗಿ ಕಾರ್ಯ ನಿರ್ವಹಿಸಿದ್ದ ಸುನಿಲ್ ಮಿತ್ತಲ್ ಜೊತೆಗೆ ಫೋನಿನಲ್ಲಿ ನಡೆಸಿದ್ದ ಸಂಭಾಷಣೆಯ ಧ್ವನಿ ಮುದ್ರಿಕೆಯನ್ನು ಮೆಹ್ತ ಪತ್ರಿಕಾ ಗೋಷ್ಠಿಯಲ್ಲಿ ಪ್ರದರ್ಶಿಸಿದ್ದಾನೆ. ಇದಲ್ಲದೆ ಸೂಟ್ ಕೇಸಿನಲ್ಲಿ 67 ಲಕ್ಷ ರೂಪಾಯಿಗಳನ್ನು ಹೇಗೆ ಓಡಿಸಲು ಸಾಧ್ಯ ಎಂಬುದನ್ನು ಆತ

ಶೇರು ಹಗರಣ

ತೋರಿಸಿದ್ದಾನೆ. ಈ ಪುರಾವೆಗಳಿಂದಾಗಿ ಪ್ರಧಾನಿಯ ಮೇಲಿನ ಸಂದೇಹ ಇನ್ನೂ ಗಾಢವಾಗುತ್ತ ನಡೆದಿದೆ.

ಜಂಟಿ ಸಂಸದೀಯ ಸಮಿತಿಯ ಮುಂದೆ ಹಾಜರಾಗಿ ಹೇಳಿಕೆ ನೀಡಿದ ಮೆಹ್ತ ನವಂಬರ್ ನಾಲ್ಕರಂದು ತಾನು ಇಳಿದುಕೊಂಡಿದ್ದ ಹೋಟೇಲಿನಿಂದ ಸುನಿಲ್ ಮಿತ್ತಲ್ ಮತ್ತು ಪ್ರಧಾನ ಮಂತ್ರಿಗಳ ಕಾರ್ಯಾಲಯವನ್ನು ಫೋನಿನ ಮೇಲೆ ಸಂಪರ್ಕರಿಸಿದ್ದ ಪುರಾವೆ ಒದಗಿಸಿದ್ದಾನೆ.

ಈ ನಡುವೆ ಪ್ರಧಾನ ಮಂತ್ರಿಗಳ ಪರವಾಗಿ ಹರ್ಷದ್ ಮೆಹ್ತನಿಗೆ ಹಣಕೊಟ್ಟು ಬಾಯಿ ಮುಚ್ಚಿಸುವ ಪ್ರಯತ್ನ, ವಿರೋಧ ಪಕ್ಷ (ಬಿಜೆಪಿ) ಅದಕ್ಕೂ ಹೆಚ್ಚಿನ ಅಮಿಷವೊಡ್ಡಿರುವ ಸಾಧ್ಯತೆ, ಇವುಗಳ ಹಿಂದೆ ದೊಡ್ಡ ದೊಡ್ಡ ಉದ್ಯಮಿಗಳ ಕೈವಾಡ ಇತ್ಯಾದಿಗಳ ಬಗೆಗೆ ಸುದ್ದಿ, ಊಹಾಪೋಹಗಳು ಬರತೊಡಗಿದೆ.

ಒಂದಂತೂ ನಿಜ. ಹರ್ಷದ್ ಮೆಹ್ತ ವಿಷಯವನ್ನು ಹೊರಹಾಕುವ ಮೊದಲೇ ಬಿಜೆಪಿಗೆ ವಿಷಯ ಪೂರ್ಣವಾಗಿ ಗೊತ್ತಿತ್ತು ಎಂಬುದು.

ಹಲವು ಪತ್ರಕರ್ತರಿಗೂ ಮೊದಲೇ ವಿವರ ಗೊತ್ತಿತ್ತು ಎನ್ನಲಾಗುತ್ತಿದೆ. ಹರ್ಷದ್ ಮೆಹ್ತನೇ ಈ ವಿಷಯವನ್ನು ಅಲ್ಲಗಳೆಯಬಹುದೆಂಬ ಭಯದಿಂದ ಅವರು ಬರೆಯುವ ಧೈರ್ಯ ತೋರಲಿಲ್ಲವೆಂಬುದು ಒಂದು ವಾದ.

ಆದರೆ ಈ ವಿಷಯದಲ್ಲಿ ಯಾರನ್ನು ನಂಬುವುದು? ಯಾರನ್ನು ಬಿಡುವುದು?!

'ಲೆಕ್ಕ ತಪಾಸಕರ ಮೇಲೆ ಕ್ರಮ ಅಗತ್ಯ' ಸಂಸದೀಯ ಸಮಿತಿ

ಬ್ಯಾಂಕುಗಳ ಮತ್ತು ಅವುಗಳ ವಿವಿಧ ಅಂಗಸಂಸ್ಥೆಗಳ ಲೆಕ್ಕ ತಪಾಸಕರುಗಳು ನೀತಿ ಬಾಹಿರವಾಗಿ ದೃಢೀಕರಣ ಪತ್ರ ನೀಡಿರುವ ಕಡೆ ಅವರ ಮೇಲೆ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಇಂಡಿಯನ್ ಇನ್ಸಿಟ್ಯೂಟ್ ಆಫ್ ಚಾರ್ಟೆಡ್ ಅಕೌಂಟೆಂಟ್ಸ್ ಕ್ರಮ ಕೈಗೊಳ್ಳಬೇಕು ಎಂದು ಸಂಸದೀಯ ಸಮಿತಿ ಹೇಳಿದೆ.

ಲೆಕ್ಕ ತಪಾಸಕರು ಈ ಸಂಸ್ಥೆಗಳ ಜೊತೆ ಶಾಮೀಲಾದದ್ದರಿಂದಲೇ ಹಗರಣದ ವಿವರಗಳು ಹೊರಬರಲಿಲ್ಲವೆಂದು ಅದು ಹೇಳಿದೆ.

ಇದಕ್ಕೆ ಉದಾಹರಣೆಯಾಗಿ ಅದು ಫೇರ್‌ಗ್ರೂತ್‌ನ ಲೆಕ್ಕ ತಪಾಸಣೆಯನ್ನು ನೀಡಿದೆ. ಲೆಕ್ಕ ತಪಾಸಕ ಶ್ರೀ ಬನ್ಸಿ ಮೆಹ್ತ ಫೇರ್‌ಗ್ರೋತ್ ಫೈನಾನ್ಷಿಯಲ್ ಸರ್ವಿಸಸ್ ಲಿಮಿಟೆಡ್‌ನ 5000 ಶೇರುಗಳನ್ನು 21.5.91 ರಂದು ಕೊಂಡಿದ್ದಾರೆ. ಹೀಗೆ ಲೆಕ್ಕ ತಪಾಸಣೆ ನಡೆಸುತ್ತಿರುವ ಸಂಸ್ಥೆಯ ಶೇರುಗಳನ್ನೇ ಲೆಕ್ಕ ತಪಾಸಕ ಕೊಳ್ಳುವುದು ಅನೀತಿಯುತ ಎಂದಿದೆ. ಅದು ಕ್ಯಾನ್‌ಫಿನಾ ಸಂಸ್ಥೆಯ ಲೆಕ್ಕ ತಪಾಸಣೆಯಲ್ಲೂ ಇಂತಹುದೇ ವ್ಯವಹಾರಗಳು ನಡೆದಿದ್ದು ಅಲ್ಲಿನ ಅಕ್ರಮಗಳು ಇರುವುದೆಂದು ಹೇಳಿದೆ.



ತಿತ್ತು ಎಂದು ಸಿಪಿಐ(ಎಂ) ಪತ್ರಿಕೆ 'ಗಣಶಕ್ತಿ' ಹೇಳಿದೆ.

ಈ ಹೇಯ ಘಟನೆ ರಾಜ್ಯಾದ್ಯಂತ ಆಘಾತದ ಅಲೆಗಳನ್ನು ಅದರ ಜೆತೆಗೆ ಪ್ರತಿಭಟನೆಯ ಮಹಾಪೂರವನ್ನೇ ಸೃಷ್ಟಿಸಿದೆ. ಪ್ರತಿಭಟನಾ ಸಭೆಗಳು ಮತ್ತು ಮೆರವಣಿಗೆಗಳು ನಡೆದಿವೆ. ಸಿಪಿಐ(ಎಂ) ನೀಡಿದ ಕರೆ ಮೇರೆಗೆ 12 ತಾಸುಗಳ ಕಾಲ ಜಲಪೈಗುರಿ ಬಂದ್ ನಡೆಯಿತು. ಕಾರ್ಮಿಕರು ಫ್ಯಾಕ್ಟರಿಗಳಲ್ಲಿ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿದರು. ಎಸ್ಎಫ್ಐ ಮತ್ತು ಡಿವೈಎಫ್ಐ ಕಾರ್ಯಕರ್ತರು ಕಲ್ಕತ್ತಾದಲ್ಲಿ ಸಂಯು 7 ಮಂದಿಯನ್ನು ಬಂಧಿಸಲಾಗಿದೆ.

ಈ ಘಟನೆಯನ್ನು ಪ್ರತಿಭಟಿಸಿ ಮುರ್ಷಿದಾಬಾದ್ ಜಿಲ್ಲೆಯ ಲಾಲ್‌ಗೋಲಾದಲ್ಲಿ ಜೂನ್ 15ರಂದು ಬಂದ್ ನಡೆಸಲಾಯಿತು.

ಕುಲಗಚ್ಚೆಯಲ್ಲಿ ನಡೆದ ಪೂರ್ವಯೋಜಿತ ದಾಳಿಯ ನೇತೃತ್ವವನ್ನು ಮೊಯಾ ಗ್ರಾಮ ಪಂಚಾಯತ್‌ನ ಮುಖ್ಯಸ್ಥ ಅಬುಬಕರ್ ಸಿದ್ದಿಕ್(ಕಾಂಗ್ರೆ) ವಹಿಸಿದ್ದ. ಇತ್ತೀಚೆಗೆ ತಾನೆ ನಡೆದಿದ್ದ ಪಂಚಾಯತ್ ಚುನಾವಣೆಯಲ್ಲಿ ಈತನಿಗೆ ಕೇವಲ 19 ಮತಗಳ ಅಂತರದಿಂದ ಗೆದ್ದಿದ್ದ. ಕುಲಗಚ್ಚೆಯಲ್ಲಿ ಕಾಂಗ್ರೆನವರಲ್ಲದೆ ಬೇರೆ ಯಾರೂ ವಾಸಿಸಲು ಬಿಡುವು

1983ರ ಕಾನೂನಿಗೆ ತಿದ್ದುಪಡಿ ತರುವ ಬದಲು ಹೊಸ ಪಂಚಾಯತ್ ಕಾನೂನನ್ನು ತರಬೇಕು ಎಂದು ಸಚಿವ ಸಂಪುಟದ ಸಭೆಯ ಚರ್ಚೆಯ ವೇಳೆ ಒಮ್ಮತದ ಅಭಿಪ್ರಾಯ ಏರ್ಪಟ್ಟಿತು.

ಪೋಲೀಸ್ ದೌರ್ಜನ್ಯ ಪ್ರತಿಭಟಿಸಿ ಮೆರವಣಿಗೆಗಳು

ಕೇರಳದ ಕರುಣಾಕರನ್ ನೇತೃತ್ವದ ಸರಕಾರದಡಿಯಲ್ಲಿ ರಾಜ್ಯದಲ್ಲಿ 'ಪೋ

ಬಂದ್ : ಕೋಳಿಕ್ಕೋಡ್‌ನಲ್ಲಿ ಡಿವೈಎಫ್ಐ ಮೇಲೆ ನಡೆದ ದೌರ್ಜನ್ಯವನ್ನು ಪ್ರತಿಭಟಿಸಿ 17ರಂದು ಎಲ್‌ಡಿಎಫ್ ಸಮಿತಿಗಳ ಕರೆ ಮೇರೆಗೆ ಕಾಸರಗೋಡು, ಕಣ್ಣೂರು ಮತ್ತು ಕೋಳಿಕ್ಕೋಡ್‌ಗಳಲ್ಲಿ ಶಾಂತಿಯು ಬಂದ್ ನಡೆಯಿತು.

ಕಣ್ಣೂರು ಜಿಲ್ಲೆಯಲ್ಲಿ ನಡೆಯು ರುವ ಪೋಲೀಸ್ ದೌರ್ಜನ್ಯವನ್ನು ಪ್ರತಿಭ ಸಲಿಕ್ಕಾಗಿ ಜೂನ್ 16ರಂದು ಕೋಳಿಕೋ ಡ್‌ನಲ್ಲಿ ಕಾರ್ಯಕ್ರಮವನ್ನು ಆಯೋಜಿ ಲಾಗಿತ್ತು.

ಕ್ರೂರ ಲಾಠಿ ಪ್ರಹಾರ : ತಿರು ನಂತಪುರದಿಂದ 15 ಕಿ.ಮಿ. ದೂರದ

ಪಶ್ಚಿಮ ಬಂಗಾಳದಲ್ಲೊಂದು ಹತ್ಯಾಕಾಂಡ : ಹತಾಶ ಕಾಂಗ್ರೆನ ಹೇಯತನ

ಪಶ್ಚಿಮ ಬಂಗಾಳದ ಜಲಪೈಗುರಿ ಜಿಲ್ಲೆಯ ಬನರ್ಹಟ್ ಪ್ರದೇಶದ ರೆಡ್ ಬ್ಯಾಂಕ್ ಟೀ ಗಾರ್ಡನ್ ಕರಾಳ ಘಟನೆಯೊಂದನ್ನು ಮೂಕವಾಗಿ ಎದುರಿಸಿತು. ಅದು ಜೂನ್ 15ರ ದಿನ. ಸಿಐಟಿಯುಗೆ ಸೇರಿದ 12 ಮಂದಿ ಕಾರ್ಯಕರ್ತರು ಘೋರ ರೀತಿಯಲ್ಲಿ ಸಾಮೂಹಿಕವಾಗಿ ಹತರಾದರು.

ಇಂಟಕ್, ಎನ್‌ಎಲ್‌ಸಿಸಿ ಮತ್ತು ಜಾರ್ಖಂಡ್ ಪಕ್ಷದ ಶಸ್ತ್ರಧಾರಿ ದುಷ್ಕರ್ಮಿಗಳು 12 ಅಮೂಲ್ಯ ಜೀವಗಳನ್ನು ಬಲಿ ತೆಗೆದುಕೊಂಡಿದ್ದಾರೆ. ಅಮಾನುಷ ಘಟನೆ ನಡೆದದ್ದು ಹೀಗೆ:

ಜೂನ್ 15ರ ಬೆಳಿಗ್ಗೆ ಮಹಿಳಾ ಕಾರ್ಮಿಕರ ಮೇಲೆ ನಡೆದ ದೌರ್ಜನ್ಯವನ್ನು ಪ್ರತಿಭಟಿಸಲಿಕ್ಕಾಗಿ ಸಿಐಟಿಯು ಸಂಯೋಜಿತ ಚಾ ಬಗಾನ್ ಮಜ್ದೂರ್ ಸಂಘದ ಕಾರ್ಯಕರ್ತರು ಸಂಜೆ 6.30ರ ಹೊತ್ತಿಗೆ ಸಭೆ ಸೇರಿದ್ದರು. ಆಗ ಸಮಾಜ ವಿರೋಧಿಗಳು ಸಭೆಯಲ್ಲಿ ಪಾಲ್ಗೊಂಡವರ ಮೇಲೆ ಬಾಂಬ್‌ಗಳನ್ನು ಎಸೆದು ಬಾಣಗಳನ್ನು ಪ್ರಯೋಗಿಸಿದರು. ಪ್ರಾಣಭಯದಿಂದ ಜನರು ಓಡತೊಡಗಿದಾಗ ದುಷ್ಕರ್ಮಿಗಳು ಅವರನ್ನು ಸುತ್ತುವರಿದರು.

ಅಲ್ಲಿ ಆರಂಭವಾಯಿತು ಹತ್ಯಾಕಾಂಡ. ಗೂಂಡಾಗಳ ಕೈಯಲ್ಲಿದ್ದ ಆಯುಧಗಳು ಮುಗ್ಧ ಜನರ ಮೇಲೆ ಹರಿದಾಡತೊಡಗಿದವು. ಅನೇಕ ಜನರ ರುಂಡಗಳನ್ನು ಉರುಳಿಸಲಾಯಿತು. ಚಹಾ ತೋಟದಲ್ಲಿ ರಕ್ತದ ಹೊಳೆ ಹರಿಯಿತು. ಸಿಟು ಕಾರ್ಮಿಕ ಸಂಗಾತಿಗಳ ಹತ್ಯೆಯಿಂದಾಗಿ ಹರಿದ ನೆತ್ತರಿನಿಂದ ಕೆಂಪಾಯಿತು ಎಲ್ಲಾ ಕೆಂಪಾಯಿತು...... ಹಸಿರು ತೋಟದಲ್ಲಿ ಎಲ್ಲೆಲ್ಲೂ ಕೆಂಪನೆ ಛಾಯೆ..........

ಜಲಿಯನ್‌ವಾಲಾಬಾಗ್ ಹತ್ಯಾಕಾಂಡಕ್ಕೆ ಸಮ! : ಕಾಂಗ್ರೆ ಕೃಪಾಪೋಷಿತ ವಿದ್ರೋಹಿಗಳು ನಡೆಸಿದ ಈ ಹತ್ಯಾಕಾಂಡ 1919ರಲ್ಲಿ ನಡೆದ ಜಲಿಯನ್‌ವಾಲಾಬಾಗ್ ಹತ್ಯಾಕಾಂಡವನ್ನು ನೆನಪಿಸುವಂತೆ ವಾಗಿ ಬೃಹತ್ ರ‍್ಯಾಲಿ ನಡೆಸಿ ದುಷ್ಕೃತ್ಯವನ್ನು ಖಂಡಿಸಿದರು.

ಪ್ರಥಮ ಮಾಹಿತಿ ವರದಿ(ಎಫ್ಐಆರ್)ಯಲ್ಲಿ ನಮೂದಿಸಲಾದ ನೂರು ಜನರ ಪೈಕಿ 17 ಜನರನ್ನು ಬಂಧಿಸಿಲಾಗಿದೆ. ತನಿಖೆ ಪ್ರಗತಿಯಲ್ಲಿದ್ದು ದುಷ್ಕರ್ಮಿಗಳ ಪತ್ತೆಗೆ ದಾಳಿ ಮುಂದುವರಿಯುತ್ತಿದೆ ಎಂದು ಮುಖ್ಯಮಂತ್ರಿ ಜ್ಯೋತಿ ಬಸು ರಾಜ್ಯ ವಿಧಾನಸಭೆಗೆ ತಿಳಿಸಿದ್ದಾರೆ.

ಈ ನಡುವೆ, ಜೂನ್ 15ರ ಅಮಾನುಷ ಕೃತ್ಯ ಎರಡು ಬಣಗಳ ನಡುವಿನ ಘರ್ಷಣೆಯ ಪರಿಣಾಮ ಎಂದು ಚಿತ್ರಿಸಲು ಕಾಂಗ್ರೆಸ್(ಐ) ಸ್ಥಳೀಯ ಪತ್ರಿಕೆಗಳು ಮತ್ತು ದೂರದರ್ಶನ ಪ್ರಯತ್ನಿಸುತ್ತಿವೆ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಶೈಲೇನ್ ದಾಸ್ ಗುಪ್ತಾ ಇದನ್ನು ಸುಳ್ಳಿನ ಕಂತೆ ಎಂದು ಹೇಳಿದ್ದಾರೆ. ಮೃತ ದೇಹಗಳ ಮೇಲೆ ಘರ್ಷಣೆ ನಡೆದ ಯಾವುದೇ ಕುರುಹುಗಳಿಲ್ಲ. ಗಾಯಗಳು ಏಕಮುಖವಾಗಿವೆ ಎಂದು ಅವರು ಹೇಳಿಕೆಯೊಂದರಲ್ಲಿ ವಿವರಿಸಿದ್ದಾರೆ.

ಹತಾಶ ಕಾಂಗ್ರೆನ ಹೇಯ ತಂತ್ರ :

ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್(ಐ) ಪಕ್ಷದ ಬುಡ ಅಲ್ಲಾಡುತ್ತಿದೆ. ಹತಾಶೆ ಅದನ್ನು ಆವರಿಸಿಕೊಂಡಿದೆ. ಅದರ ಪರಿಣಾಮವೇ ಸಿಪಿಐ(ಎಂ) ಮೇಲಿನ ಆಕ್ರಮಣ. ಮೇಲೆ ಪ್ರಸ್ತಾಪಿಸಿದ್ದು ಒಂದು ದೊಡ್ಡ ಪ್ರಕರಣ. ಆಕ್ರಮಣ-ಹಲ್ಲೆಗಳ ಅನೇಕ ಘಟನೆಗಳು ರಾಜ್ಯದ ವಿವಿಧ ಭಾಗಗಳಲ್ಲಿ ನಡೆದಿವೆ. ಅಂಥ ಇನ್ನೊಂದು ವರದಿ ಇಲ್ಲಿದೆ:

ಕುಲಗಚ್ಚೆ ಗ್ರಾಮದಲ್ಲಿ ಕಾಂಗ್ರೆ ದುಷ್ಕರ್ಮಿಗಳು ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಬಾಂಬ್‌ಗಳನ್ನು ಎಸೆದು ಗುಂಡುಗಳನ್ನು ಹಾರಿಸಿದರು. ಈ ಘಟನೆಯಲ್ಲಿ ನಾಲ್ಕು ಮಂದಿ ಗಾಯಗೊಂಡರು. ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದ್ದು ಇಬ್ಬರು ಮೃತಪಟ್ಟರು. ಈ ಸಂಬಂಧದಲ್ಲಿ ಕಾಂಗ್ರೆನ ದಿಲ್ಲ ಎಂದು ಈತ ಘೋಷಿಸಿದ್ದಾನೆ! ಇದೇ ಕುಲಗಚ್ಚೆ ಗ್ರಾಮದ ಜನರು ಚುನಾವಣೆಯಲ್ಲಿ ಈತತನ್ನು ಪೂರ್ಣವಾಗಿ ತಿರಸ್ಕರಿಸಿದ್ದರು.

'ಛಾತ್ರಾ ಸಂಗ್ರಾಮ್'ಗೆ 28 ವಸಂತಗಳು

ಎಸ್ಎಫ್ಐ ಪಶ್ಚಿಮ ಬಂಗಾಳ ರಾಜ್ಯ ಸಮಿತಿ ಮುಖಪತ್ರಿಕೆ 'ಛಾತ್ರ ಸಂಗ್ರಾಮ್'ಗೆ ಜೂನ್ 15ರಂದು 28 ವರ್ಷ ತುಂಬಿತು. ಈ ಶುಭ ಸಂದರ್ಭದಲ್ಲಿ ಜೂನ್ 16ರಂದು 'ಪ್ರಸಕ್ತ ಜಗತ್ತಿನಲ್ಲಿ ಸಮಾಜವಾದಕ್ಕಾಗಿ ಹೋರಾಟ' ಎಂಬ ವಿಚಾರ ಸಂಕಿರಣದಲ್ಲಿ ಸಾವಿರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಎಸ್ಎಫ್ಐ ಸ್ಥಾಪಕ ನಾಯಕ ಬಿಮನ್ ಬಸು, 'ಗಣಶಕ್ತಿ' ಸಂಪಾದಕ ಅನಿಲ್ ಬಿಸ್ವಾಸ್, ಎಸ್ಎಫ್ಐ ರಾಜ್ಯ ಕಾರ್ಯದರ್ಶಿ ಹಾಗೂ 'ಛಾತ್ರಾ ಸಂಗ್ರಾಮ್' ಸಂಪಾದಕ ಸಬೀರ್ ಚೌಧರಿ ಮತ್ತು ಎಸ್ಎಫ್ಐ ರಾಜ್ಯಾಧ್ಯಕ್ಷ ಕಪಿಲ್ ಘೋಷ್ ಮಾತನಾಡಿದರು.

'ಛಾತ್ರಾ ಸಂಗ್ರಾಮ್' 1965ರ ಜೂನ್ 15ರಂದು ಪ್ರಕಟಣೆಯನ್ನು ಆರಂಭಿಸಿತ್ತು.

ಹೊಸ ಪಂಚಾಯತ್ ಮಸೂದೆಗೆ ತ್ರಿಪುರಾ ನಿರ್ಧಾರ

ರಾಜ್ಯಕ್ಕಾಗಿ ಹೊಸ ಪಂಚಾಯತ್ ಮಸೂದೆಯೊಂದನ್ನು ಅಂಗೀಕರಿಸಲು ತ್ರಿಪುರಾದ ಎಡರಂಗ ಸಚಿವ ಸಂಪುಟ ನಿರ್ಧರಿಸಿದೆ.

ತ್ರಿಪುರಾ ಪಂಚಾಯತ್‌ಗಳ ಕಾನೂನು (1983) ಅಸ್ತಿತ್ವದಲ್ಲಿದ್ದು ಅವುಗಳ ನಿಯಮಗಳು ಹಾಗೂ 1992ರ 72ನೇ ಸಂವಿಧಾನ ತಿದ್ದುಪಡಿ ಕಾಯಿದೆಯ ಕೆಲವು ನಿಯಮಗಳ ನಡುವೆ ಹೊಂದಾಣಿಕೆ ಆಗುವುದಿಲ್ಲ. ಅವುಗಳನ್ನು ಸರಿಪಡಿಸಲು ಉದ್ದೇಶಿಸಲಾಗಿದೆ.

ಲೀಸ್ ರಾಜ್ಯ' ಸ್ಥಾಪನೆಯಾದಂತೆ ಕಾಣುತ್ತಿದೆ. ಪೋಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಮಿತಿ ಮೀರಿದ ದೌರ್ಜನ್ಯ ಮತ್ತು ದುಷ್ಕರ್ಮಿಗಳ ಜತೆ ಪೋಲೀಸರು ಶಾಮೀಲಾಗಿರುವ ಹಲವು ಪ್ರಕರಣಗಳು 'ಐಕ್ಯರಂಗ'ದ ಹಿಂದಿನ ಕೆಲ ಸಂಚಿಕೆಗಳಲ್ಲಿ ವರದಿಯಾಗಿದೆ.

ಮಣ ಮಾಡಿದರು.

ಎಸ್ಎಫ್ಐ ಕೇಂದ್ರ ಸಮಿತಿ ಪ್ರಧಾನ ಕಾರ್ಯದರ್ಶಿ ನವದೆಹಲಿಯಲ್ಲಿ ಹೇಳಿಕೆಯೊಂದನ್ನು ನೀಡಿ ಈ ಪೋಲೀಸ್ ದೌರ್ಜನ್ಯವನ್ನು ಖಂಡಿಸಿದ್ದಾರೆ.

ಡಿವೈಎಫ್ಐ ಕರ್ನಾಟಕ ರಾಜ್ಯ ಸಮಿತಿಯು ಈ ಪೋಲೀಸ್ ದೌರ್ಜನ್ಯವನ್ನು ಖಂಡಿಸಿದೆ. ರಾಜ್ಯ ಕಾರ್ಯದರ್ಶಿ ಎಸ್.ವೈ. ಗುರುಶಾಂತ್ ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿ ಪೋಲೀಸರ ದಬ್ಬಾಳಿಕೆಯನ್ನು ಕೂಡಲೇ ತಡೆಯುವಂತೆ ಕೇರಳ ರಾಜ್ಯಕ್ಕೆ ಆಗ್ರಹಪಡಿಸಿದ್ದಾರೆ.

ಜೂನ್ 16ರಂದು ಕೋಳಿಕ್ಕೋಡ್‌ನಲ್ಲಿ ಡಿವೈಎಫ್ಐ ಕಾರ್ಯಕರ್ತರ ಮೇಲೆ ನಡೆದ ಪೋಲೀಸ್ ದಬ್ಬಾಳಿಕೆಯನ್ನು ಪ್ರತಿಭಟಿಸಿ ರಾಜ್ಯಾದ್ಯಂತ ಡಿವೈಎಫ್ಐ ಘಟಕಗಳು ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಕಚೇರಿಗಳ ಮುಂದೆ ಪ್ರದರ್ಶನಗಳನ್ನು ನಡೆಸಿದವು. ಅಮಾನವೀಯ ಆಕ್ರಮಣಗಳನ್ನು ನಡೆಸಿದ ಅಧಿಕಾರಿಗಳನ್ನು ವಜಾ ಮಾಡುವಂತೆ ಮತ್ತು ಪೋಲೀಸ್ ರಾಜ್ಯಕ್ಕೆ ಕೊನೆ ಹೇಳುವಂತೆ ಒತ್ತಾಯಿಸುವ ಮನವಿಯನ್ನು ಅವು ಅರ್ಪಿಸಿದವು.

16ರಂದು ಕೋಳಿಕ್ಕೋಡ್‌ನಲ್ಲಿ ಡಿಐಜಿ ಕಚೇರಿ ಮುಂದೆ ಸುಮಾರು 6000 ಮಂದಿ ಡಿವೈಎಫ್ಐ ಕಾರ್ಯಕರ್ತರು ಪ್ರದರ್ಶನ ನಡೆಸುತ್ತಿದ್ದರು. ಆಗ ಪೋಲೀಸರು ಅವರ ಮೇಲೆ ಆಕ್ರಮಣ ನಡೆಸಿದರು. ಡಿವೈಎಫ್ಐ ಸ್ವಯಂಸೇವಕರು ವಿದೇಶಿ ಸೈನಿಕರೋ ಎಂಬ ರೀತಿಯಲ್ಲಿತ್ತು ಪೋಲೀಸರ ಈ ಆಕ್ರಮಣ. ಸಂಸತ್ ಸದಸ್ಯರು ಮತ್ತು ಶಾಸಕರು ಕೂಡಾ ಪೋಲೀಸರ ದಬ್ಬಾಳಿಕೆಯಿಂದ ಹೊರತಾಗಿರಲಿಲ್ಲ. ಇಬ್ಬರು ಶಾಸಕರು ಮತ್ತು ಸುಮಾರು 200 ಕಾರ್ಯಕರ್ತರು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಾ ಇದ್ದಾರೆ.

ರುವ ಕರಿವಟ್ಟಂನಲ್ಲಿ ಹೊಸದಾಗಿ ಆರಂಭವಾಗಿರುವ ವಿಶ್ವವಿದ್ಯಾನಿಲಯ ಕಾಲೇಜ್‌ನ ಕಚೇರಿ ಬಳಿ ಧರಣಿ ನಡೆಸಲು ಜೂನ್ 22ರಂಧು ತಿರುವನಂತಪುರದಲ್ಲಿ ಸೇರಿದ್ದ ವಿದ್ಯಾರ್ಥಿಗಳ ಮೇಲೆ ಪೋಲೀಸರು ಕ್ರೂರವಾಗಿ ಲಾಠ ಪ್ರಹಾರ ಮಾಡಿದರು. ಇದನ್ನು ಪ್ರತಿಭಟಿಸಿ ಸಂಜೆ ನಡೆಸಿದ ವಿದ್ಯಾರ್ಥಿಗಳ ಮೆರವಣಿಗೆ ಮೇಲೆಯೂ ಪೋಲೀಸರು ಆ

ಬಂಡವಾಳವಾದಕ್ಕೆ ಅಂತಿಮ ಜಯ ಎಂಬುದು ಮೂರ್ಖತನ

ಬಂಡವಾಳವಾದ ತನ್ನ ಅಂತಿಮ ವಿಜಯವನ್ನು ಸಾಧಿಸಿದೆ ಎಂಬ ಅಭಿಪ್ರಾಯ ತೀರಾ ಮೂರ್ಖತನದ್ದು.

ಹೀಗೆಂದು ವಿಶ್ಲೇಷಿಸಿದವರು ಬೇರೆ ಯಾರೂ ಅಲ್ಲ. ಉಪರಾಷ್ಟ್ರಪತಿ ಕೆ.ಆರ್. ನಾರಾಯಣನ್.

ಖಾಸಗಿ ರಂಗ ಪೂರ್ಣವಾಗಿ ಮುಕ್ತವಾ ಗಿಲ್ಲ. ಅಲ್ಲದೆ ಜಗತ್ತಿನ ಯಾವ ಭಾಗದಲ್ಲೂ ಹಳೆಯ ಬಂಡವಾಳವಾದಕ್ಕೆ ಮರಳಲು ಆಗಿಲ್ಲ ಎಂದು ಅವರು ಹೇಳಿದರು.

ತಂತ್ರಜ್ಞಾನವು ಆರ್ಥಿಕತೆಯ ಸ್ವರೂಪವನ್ನು ನಿರ್ಧರಿಸುತ್ತದೆ ಎಂಬ ಮಾರ್ಕ್ಸ್‌ವಾದಿ ಸಿದ್ಧಾಂತ ತುಂಬಾ ಪ್ರಸ್ತುತವಾಗಿದೆ. ಆಲೋಚನೆಗಳ ವಿಸ್ತರಣೆ ಶೀಘ್ರ ಸಂಪರ್ಕ ಸಾಧನಗಳು, ಕಂಪ್ಯೂಟರ್ ಮೊದಲಾದವುಗಳ ಆರ್ಥಿಕತೆ ಅಗತ್ಯ ಬದಲಾವಣೆಗಳನ್ನು ಮಾಡಿಕೊಳ್ಳುವಂತೆ ಮಾಡುತ್ತವೆ. ಇತಿಹಾಸ ಮುಕ್ತಾಯವಾಗುವುದಿಲ್ಲ. ಆದ್ದರಿಂದ ಬಂಡವಾಳವಾದಕ್ಕೆ ಅಂತಿಮ ಜಯ ಸಿಕ್ಕಿದೆ ಎಂಬ ಮಾತನ್ನು ಒಪ್ಪಲು ಆಗುವುದಿಲ್ಲ ಎಂದು ಅವರು ನುಡಿದರು.

ಖ್ಯಾತ ಅರ್ಥಶಾಸ್ತ್ರಜ್ಞ ಡಾ.ಕೆ.ಎನ್. ರಾಜ್ ಅವರ 70ನೇ ಜನ್ಮ ದಿನ ಸಂದರ್ಭದಲ್ಲಿ ಅವರನ್ನು ಅಭಿನಂದಿಸಲು ತಿರುವನಂತಪುರದಲ್ಲಿ ಏರ್ಪಡಿಸಲಾಗಿದ್ದ ಒಂದು ಸ ಯಲ್ಲಿ ಉಪರಾಷ್ಟ್ರಪತಿಯವರು ಮಾತನಾಡುತ್ತಿದ್ದರು.



ಸಿಟು ಕಾರ್ಯಕರ್ತನ ಮೇಲೆ ಹಲ್ಲೆ ಖಂಡಿಸಿ ಪ್ರದರ್ಶನ

ಬೆಂಗಳೂರು: ಸಿಐಟಿಯು ಕರೆ ಮೇರೆಗೆ ಕಳೆದ ಒಂದು ವಾರಗಳಿಂದ ಅಸಂಘಟಿತ ಕಾರ್ಮಿಕರಿಗೆ 1,500 ರೂಗೆ ಒತ್ತಾಯಿಸಿ ಲೋಕಸಭಾ ಸದಸ್ಯರಿಗೆ ಅರ್ಪಿಸುವ ಮನವಿಗೆ ಸಹಿ ಸಂಗ್ರಹ ಚಳುವಳಿ ನಡೆಯುತ್ತಿದೆ. ಜೂನ್ 19ರಂದು ಶ್ರೀರಾಮಪುರದ ಒಕಳಿಪುರ ರಸ್ತೆಯಲ್ಲಿ 'ವೇರ್‌ವೆಲ್ ಗಾರ್ಮೆಂಟ್' ಬಳಿ ಸಹಿಸಂಗ್ರಹ ನಡೆಸುತ್ತಿದ್ದ ಶಶಿರಾಜ್ ಮೇಲೆ ಗಾರ್ಮೆಂಟ್ಸ್ ಪ್ರೊಡಕ್ಷನ್ ಮ್ಯಾನೇಜರ್ ಹಲ್ಲೆ ನಡೆಸಿದನ್ನು ಖಂಡಿಸಿ ಸುಮಾರು ನೂರಐವತ್ತಕ್ಕೂ ಹೆಚ್ಚು ಸಿಐ ಯು ಡಿ.ವೈ.ಎಫ್.ಐ. ಕಾರ್ಯಕರ್ತರು ವೇರ್‌ವೆಲ್ ಕಂಪನಿ ಮುಂದೆ ಪ್ರತಿಭಟನೆ ನಡೆಸಿ ಆತನ ಬಂಧನಕ್ಕೆ ಒ ಸಿದರು.

ಈ ಸಂದರ್ಭದಲ್ಲಿ ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಕಾಂ. ಕೆ.ಎಸ್. ಸುಬ್ರಮಣ್ಯರವರು ಮಾತನಾಡಿ ವೇರ್‌ವೆಲ್‌ನಲ್ಲಿ ಮಹಿಳಾ ಕಾರ್ಮಿಕರಿಗೆ ಕಿರುಕುಳ ನೀಡುತ್ತಿರುವುದನ್ನು ಖಂಡಿಸಿದರು.

ಡಿ.ವೈ.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಗೋಪಾಲ ಕೃಷ್ಣ ಮಾತನಾಡಿ ವೇರ್‌ವೆಲ್ ಪ್ರೊಡಕ್ಷನ್ ಮ್ಯಾನೇಜರ್ ಬಂಧನಕ್ಕೆ ಒತ್ತಾಯಿಸಿದರಲ್ಲದೆ ಈ ಕಾರ್ಖಾನೆಯ ಕಾರ್ಮಿಕರು ಶೋಷಣೆ ವಿರುದ್ಧ ಸಂಘಟಿತರಾಗಿ ಹೋರಾಟ ನಡೆಸಬೇಕೆಂದರು. ಮಿನರ್ವ ಹತ್ತಿ ಗಿರಣಿ ಕಾರ್ಮಿಕ ಸಂಘದ ಮುಖಂಡರಾದ ಪುಷ್ಪರಾಜ್, ವಿದಿಯಾ ಕಾರ್ಖಾನೆ ಮುಖಂಡರಾದ ನಂಜರಾಜ್, ಸಿಐಟಿಯು ಮುಖಂಡರಾದ ಕೋದಂಡರಾಮ್ ಅಸಂಘಟಿತ ಕಾರ್ಮಿಕರು ಅತಿಶೋಷಣೆಗೆ ಒಳಗಾಗಿದ್ದ ಕನಿಷ್ಠ ಸವಲತ್ತುಗಳಿಂದ ವಂಚಿತರಾಗಿದ್ದಾರೆಂದು ತಿಳಿಸಿದರು.

ಕುರುಗೋಡಿನಲ್ಲಿ ರೈತ ಸಂಘದಿಂದ ಭೂಮಿ ಹಂಚಿಕೆ

ಬಳ್ಳಾರಿ ತಾಲೂಕಿನ ಕುರುಗೋಡು ಹೋಬಳಿ ಮುಸ್ಟಗಟ್ಟೆ ಗ್ರಾಮಕ್ಕೆ ಸೇರಿದ ಭೂಮಿಯನ್ನು ಕರ್ನಾಟಕ ಪ್ರಾಂತ ರೈತ ಸಂಘ ಡಿ.ಎಸ್.ಎಸ್ ಹಾಗೂ ಡಾ. ಅಂಬೇಡ್ಕರ್ ಸಂಘ ಇವರ ನೇತೃತ್ವದಲ್ಲಿ ಭೂ ಹೀನ ಕೃಷಿ ಕಾರ್ಮಿಕರಿಗೆ ಸುಮಾರು 6 ಎಕರೆ ಹಂಚಲಾಯಿತು.

ಹೊಲದಲ್ಲಿ ನೆರದಿದ್ದ ರೈತರನ್ನುದ್ದೇಶಿಸಿ ಪ್ರಾಂತ ರೈತ ಸಂಘ ಜಿಲ್ಲಾ ಉಪಾಧ್ಯಕ್ಷರಾದ ವಿ.ಎಸ್. ಶಿವಶಂಕರ್ ರವರು ಭೂ ಸುಧಾರಣೆಗೆ ಸಂಪೂರ್ಣವಾಗಿ ಜಾರಿಯಾಗದೇ ಕಾದರೆ ಹೋರಾಟ ಮಾಡದೆ ಭೂ ಸುಧಾರಣೆ ಜಾರಿಗೆ ಬರುವುದಿಲ್ಲ ನಿಮ್ಮ ಹೋರಾಟದ ಮೇಲೆ ಭೂಮಿ ಹಂಚಿಕೆ ನಿಂತಿರುತ್ತದೆ. ನಮ್ಮ ದೇಶದಲ್ಲಿ ಸಾವಿರಾರು ಎಕರೆ ಖಾಲಿ ಇದ್ದರೂ ಕಾಂಗ್ರೆಸ್ ಸರ್ಕಾರ ಹಂಚುವುದಿಲ್ಲಾ ಏಕೆಂದರೆ ಭೂಮಾಲಕರು ಹಾಗೂ ಬಂಡವಾಳಶಾಹಿಗಳ ಹಿತಿತವಲ್ಲಿರುವುದರಿಂದ. ಪಶ್ಚಿಮ ಬಂಗಾಳದಲ್ಲಿ ಮಾತ್ರವೇ ಶೇ. 90 ರಷ್ಟು ಭೂಮಿ ಹಂಚಿಕೆಯಾಗಿದೆ. ಅಲ್ಲಿ ತೀವ್ರ ಹೋರಾಟದ ಫಲವಾಗಿ ಮತ್ತು ಕೃಷಿ ಕಾರ್ಮಿಕರ ಪರವಾದ ಸರ್ಕಾರ ಬಂದಿರುವುದರಿಂದ ರೈತರು ಹಾಗೂ ಕೂಲಿಕಾರ್ಮಿಕರು ಒಂದಾಗ ಬೇಕೆಂದು ವಿ.ಎಸ್. ಶಿವಶಂಕರ್ ರವರು ರೈತರಿಗೆ ಕರೆ ನೀಡಿದರು. ನಂತರ ಭೂ ಹೋರಾಟ ಸಮಿತಿಯನ್ನು ಪ್ರಾಂತ ರೈತ ಸಂಘದ ಜಿಲ್ಲಾ ಮುಖಂಡ ಕೆ. ಗಾದಿಲಿಂಗಪ್ಪ ಇವರ ಸಮ್ಮುಖದಲ್ಲಿ ರಚನೆ ಮಾಡಲಾಯಿತು.

ಸಿ.ಐ.ಟಿ.ಯು. ರಾಜ್ಯಮಂಡಳಿ ಸಭೆ ....

ಪುಟ 1ರಿಂದ

ರಂದು ಜೈಲ್‌ಭರೋ ಮತ್ತು ಸೆಪ್ಟೆಂಬರ್ 9,1993 ರಂದು ಭಾರತ್ ಬಂದ್ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಶಕ್ತಿಮೀರಿ ಪ್ರಯತ್ನಿಸಿ ಯಶಸ್ವಿಗೊಳಿಸುವಂತೆ ಸಿಐಟಿಯು ಒಟ್ಟಾಗಿ ಪಣತೊಟ್ಟದೆ.

3ನೇ ಸೌಲಭ್ಯವಾಗಿ ಪೆನ್ಶನ್ ಮತ್ತು ಇ.ಪಿ.ಎಸ್.ಬಿಲ್ ವಿರೋಧಿಸಿ ಹೋರಾಟ

ಪೆನ್‌ಶನ್‌ನ್ನು ಮೂರನೇ ಸೌಲಭ್ಯವೆಂದು ಜಾರಿಗೊಳಿಸಲು ಮತ್ತು ಈಗ ತರಬೇಕೆಂದಿರುವ ಎಂಪ್ಲಾಯಿಸ್ ಪೆನ್‌ಶನ್ ಸ್ಕೀಮ್‌ನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಲು ಸಹಿ ಸಂಗ್ರಹ, ಧರಣಿ ಸತ್ಯಾಗ್ರಹ ಮತ್ತು ಮತ ಪ್ರದರ್ಶನ ನಡೆಸಲು ಸಿಐಟಿಯು ಮಂಡಳಿ ಸಭೆ ತೀರ್ಮಾನಿಸಿತು.

ಇಪಿಎಸ್‌ನಲ್ಲಿ ಹಲವಾರು ನ್ಯೂನತೆಗಳಿದ್ದು ಮುಖ್ಯವಾಗಿ ಮಾಲಿಕರಿಂದ ನೌಕರರಿಗೆ ಬರಬೇಕಾಗಿರುವ ಪಿ.ಎಫ್ ನಿಧಿಯು ಬಾರದಂತಹ ಅಂಶಗಳಿವೆ ಎಂದು ಸಭೆ ಅಭಿಪ್ರಾಯ ಪಟ್ಟಿತು.

ಟಿ.ಎಸ್. ಅನಂತರಾಮ್ ವಜಾ

ಕಾರ್ಮಿಕರ ಹಿತಾಸಕ್ತಿಗೆ ವ್ಯತಿರಿಕ್ತವಾಗಿ ಮತ್ತು ಸಿಐಟಿಯು ನಿರ್ಣಯಗಳನ್ನು ಉಲ್ಲಂಘಿಸಿದ ಕಾರಣಗಳಿಂದ ಟಿ.ಎಸ್. ಅನಂತರಾಮ್‌ರವರನ್ನು ರಾಜ್ಯ ಸಿಐಟಿಯು ಮಂಡಳಿಯಿಂದ ವಜಾಗೊಳಿಸಲು ರಾಜ್ಯ ಮಂಡಳಿ ನಿರ್ಧರಿಸಿತು.

ಇರಾಕ್ ಮೇಲೆ ಅಮೇರಿಕಾ ಬಾಂಬ್‌ದಾಳಿಗೆ ಖಂಡನೆ

ಇತ್ತೀಚೆಗೆ ಅಮೇರಿಕೆಯು ಸಾಮ್ರಾಜ್ಯಶಾಹಿಯ ಯಾವುದೇ ಪ್ರಚೋದನೆಯಿಲ್ಲದೆ ಇರಾಕ್ ಮೇಲೆ ಹಾಠಾತ್ತನೆ ದಾಳಿ ನಡೆಸಿ ಸುಮಾರು ಐದು ಜನ ನಾಗರೀಕರು ಹತ್ಯೆಗೊಳಗಾದ ಘಟನೆಯನ್ನು ರಾಜ್ಯ ಸಿಐಟಿಯು ಮಂಡಳಿ ಖಂಡಿಸಿದೆ. ಇದಲ್ಲದೆ ಜಗತ್ತಿನ ಎಲ್ಲ ಶಾಂತಿಪ್ರಿಯರು ಅಮೇರಿಕಾದ ಉದ್ಧಟತನವನ್ನು ತೀವ್ರ ರೀತಿಯಲ್ಲಿ ಮತ್ತು ವ್ಯಾಪಕವಾಗಿ ಖಂಡಿಸಬೇಕೆಂದು ರಾಜ್ಯ ಮಂಡಳಿ ಕರೆ ನೀಡಿದೆ.

ಅಜರ್‌ಬೈಜಾನ್ : ಕೊನೆಗೂ ಕಮ್ಯುನಿಸ್ಟರೇ ಬೇಕಾಯಿತು

ಶರತ್ ಚಂದ್ರ

ಕೇವಲ ಒಂದು-ಎರಡು ವರ್ಷಗಳ ಹಿಂದೆ ಅಧ್ಯಕ್ಷೀಯ ಚುನಾವಣೆಯಲ್ಲಿ ಹಲವಾರು ಸೋವಿಯೆತ್ ಗಣರಾಜ್ಯಗಳಲ್ಲಿ ರಾಷ್ಟ್ರೀಯವಾದಿಗಳು ಕಮ್ಯುನಿಸ್ಟ್ ನಾಯಕರನ್ನು ಸೋಲಿಸಿದ್ದರು. ಆದರೆ ಈಗ ಹೆಚ್ಚಿನ ಕಡೆ ಈ ರಾಷ್ಟ್ರೀಯತಾವಾದಿಗಳು ತಾವು ಉಲ್ಬಣಿಸಿ ಸಮಸ್ಯೆಗಳನ್ನು ಪರಿಹರಿಸಲಾಗದೆ ಜನಪ್ರಿಯತೆ ಕಳೆದುಕೊಳ್ಳುತ್ತಿದ್ದಾರೆ. ಜನತೆ ಅವರ ಆಡಳಿತದಿಂದ ದೇಸತ್ತಿದ್ದಾರೆ. ಕಮ್ಯುನಿಸ್ಟ್ ಆಡಳಿತವನ್ನು ಪುನಃ ಬಯಸುತ್ತಿದ್ದಾರೆ. ಬೇರೆ ಗಣರಾಜ್ಯಗಳಲ್ಲಿ ಇದು ಕೇವಲ ಬಯಕೆಯ ಹಂತದಲ್ಲಿದ್ದರೆ, ಅಜರ್‌ಬೈಜಾನ್‌ನಲ್ಲಿ ಅದು ನಿಜವಾಗಿದೆ.

ಅಜರ್‌ಬೈಜಾನ್‌ನ ಪಾರ್ಲಿಮೆಂಟು ರಾಷ್ಟ್ರೀಯತಾವಾದಿ ಅಧ್ಯಕ್ಷ ಅಬುಲ್‌ಫಜ್ ಎಲ್ಸಿಬಿಯವರನ್ನು 33-3 ಮತಗಳಿಂದ ಅಧಿಕಾರದಿಂದ ಕೆಳಗಿಳಿಸಿದೆ. ಅಲ್ಲದೆ ಕಮ್ಯುನಿಸ್ಟ್ ನಾಯಕ ಗೈದರ್ ಅಲಿವ್‌ಗೆ ಎಲ್ಲಾ ಅಧ್ಯಕ್ಷೀಯ ಅಧಿಕಾರಗಳನ್ನು ವಹಿಸಿಕೊಡಲು ನಿರ್ಧರಿಸಿದೆ. ವಾರದ ಹಿಂದೆಯಷ್ಟೆ ಅವರನ್ನು ಪಾರ್ಲಿಮೆಂಟ್ ಅಧ್ಯಕ್ಷರಾಗಲು ಆಹ್ವಾನಿಸಲಾಗಿತ್ತು.

ಕಳೆದ ಹಲವು ತಿಂಗಳಲ್ಲಿ ಅಜರ್‌ಬೈಜಾನ್-ಹಾಗೂ ಅರ್ಮೇನಿಯಾಗಳ ನಡುವೆ ನಗಾರ್ನೊ ಕರಾಬಕ್ ಪ್ರದೇಶದ ಒಡನೆಗಿನ ವಿವಾದ ಸಶಸ್ತ್ರ ಹೋರಾಟಕ್ಕೆ ಎಡೆ ಕೊಟ್ಟಿದ್ದು, ಆರ್ಥಿಕ ಕುಸಿತಗಳಿಂದ ಜನ ಬೇಸತ್ತಿದ್ದರು. ಆಗಿನ ಅಧ್ಯಕ್ಷ ಎಲ್ಸಿಬಿಯವರ ಸರ್ಕಾರ ಜನರ ಯಾವುದೇ ಸಮಸ್ಯೆಗಳಿಗೆ ಗಮನ ಕೊಡದೆ ಪೂರ್ಣ ಅರಾಜಕತೆಗೆ ಎಡೆ ಕೊಟ್ಟಿತ್ತು. ಅಜರ್‌ಬೈಜಾನ್ ಸಶಸ್ತ್ರಪಡೆಗಳ ಒಂದು ವಿಭಾಗ ಅವರ ವಿರುದ್ಧ ಬಂಡೆದ್ದು ರಾಜಧಾನಿ ಬಾಕುವಿನ ಬಳಿಗೆ ಬರುತ್ತಿದ್ದಂತೆ ಅಧ್ಯಕ್ಷ ಎಲ್ಸಿಬಿ ಓಡಿಹೋಗಿದ್ದರು.

ಇಂಗ್ಲೆಂಡಿನಲ್ಲೊಬ್ಬ ಹರ್ಷದ್ ಮೆಹ್ತಾ!

ಕಾಕತಾಳೀಯವೆಂಬಂತೆ ಭಾರತದ ಹರ್ಷದ್ ಮೆಹ್ತಾ ಪ್ರಧಾನಿಗೆ ಒಂದು ಕೋಟಿ ರೂ. ವಂತಿಗೆ ಕೊಟ್ಟ ಹಗರಣದಂತಹುದೇ ಹಗರಣ ಬ್ರಿಟನ್‌ನಲ್ಲೂ ನಡೆದಿದೆ. ಅಸಿಲ್‌ನಾದಿರ್ ಎಂಬ ವಾಣಿಜ್ಯೋದ್ಯಮಿ ಆಳುವ ಪಕ್ಷಕ್ಕೆ ನಾಲ್ಕೂವರೆ ಲಕ್ಷ ಪೌಂಡ್ ವಂತಿಗೆ ಕೊಟ್ಟಿದ್ದಾನೆ ಎಂಬ ಆಪಾದನೆ ಪಾರ್ಲಿಮೆಂಟು ಹಾಗೂ ಇಡೀ ದೇಶವನ್ನು ಅಲ್ಲೋಲಕಲ್ಲೋಲಗೊಳಿಸಿದೆ. ನಾದಿರ್ ಆಳುವ ಕನ್ಸರ್ವೇಟಿವ್ ಪಕ್ಷಕ್ಕೆ ಮುಖ್ಯ ರಾಜಕೀಯ ವಂತಿಗೆ ಕೊಡುವ ಹಣವಂತರಲ್ಲಿ ಪ್ರಮುಖ ಎಂಬುದನ್ನು ಅಲ್ಲಗಳೆದಿಲ್ಲ. ವಿರೋಧಪಕ್ಷ ಲೇಬರ್‌ನ ಸದಸ್ಯರು ಹಾಗೂ ಪತ್ರಿಕೆಗಳು, ಈ ನಾದಿರ್ ಮೇಲೆ ಬಂದಿರುವ ಹಲವಾರು ಮೋಸ, ಕಳ್ಳತನದ ಆರ್ಥಿಕ ಅಪರಾಧದ ಆಪಾದನೆ ಇದ್ದಾಗ್ಯೂ ಇವುಗಳಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗಿದೆ ಎಂದು ಆಪಾದಿಸಿದ್ದಾರೆ. ಹಲವಾರು ಮಂತ್ರಿಗಳು, ನಾಯಕರು ಆತನ ಪರವಾಗಿ ಅಟಾರ್ನಿ ಜನರಲ್ ಮೇಲೆ ಒತ್ತಡ ಹಾಕಲು ಪ್ರಯತ್ನಿಸಿದ್ದಾರೆ ಎಂದೂ ಆಪಾದನೆ ಮಾಡಲಾಗಿದೆ.

ಹಲವಾರು ಕೇಸು ದಾಖಲಾಗಿದ್ದ ನಾದಿರ್ ಜಾಮೀನು ಮೇಲೆ ಬಿಡುಗಡೆಯಾಗಿದ್ದಾಗ, ಬ್ರಿಟನ್‌ನಿಂದ ಪರಾರಿಯಾಗಿ ತನ್ನ ಸ್ವಂತ ಊರಾದ ಸೈಪ್ರಸ್‌ನಲ್ಲಿ ವಾಸವಾಗಿದ್ದಾನೆ. ಅಲ್ಲಿಂದ ಆತ ಆಳುವ ಪಕ್ಷದ ಬಗ್ಗೆ ಇನ್ನಷ್ಟು ಆಸ್ಫೋಟಕಾರಿ ಗುಟ್ಟುಗಳನ್ನು ಬಯಲಿಗೆಳೆಯಬಲ್ಲೆ ಎಂದು ಹೇಳಿಕೆಯಿತ್ತಿದ್ದಾನೆ. ಇದು ಆಳುವ ಪಕ್ಷವನ್ನು ಇನ್ನಷ್ಟು ಇಕ್ಕಟ್ಟಿಗೆ ಸಿಲುಕಿಸಿದೆ.

ಕನ್ಸರ್ವೇಟಿವ್ ಪಕ್ಷದ ಪೂರ್ಣ ಲೆಕ್ಕಪತ್ರ ಬಹಿರಂಗಪಡಿಸಬೇಕೆಂಬ ಲೇಬರ್ ನಿರ್ಣಯದ ಚರ್ಚೆಯಲ್ಲಿ ಆಳುವ ಪಕ್ಷಕ್ಕೆ ಮುಖಭಂಗವಾಯಿತು. ಆಳುವ ಪಕ್ಷಕ್ಕೆ ಬಹುಮತದಿಂದಾಗಿ ನಿರ್ಣಯ ಪಾಸಾಗಲಿಲ್ಲ. ಆದರೆ ಈಗಾಗಲೇ ಒಬ್ಬ ಮಂತ್ರಿ ರಾಜಿನಾಮೆ ಕೊಡಬೇಕಾಗಿ ಬಂದಿದೆ. ನಾದಿರ್ ವಂತಿಕೆ ಕೊಟ್ಟಿದ್ದು ನಿಜವೆಂದು ಪುರಾವೆ ಸಿಕ್ಕಿದರೆ ಆ ಹಣವನ್ನು ವಾಪಸು ಕೊಡುವುದಾಗಿ ಪ್ರಧಾನಿ ಜಾನ್ ಮೇಜರ್ ಘೋಷಿಸಬೇಕಾಗಿ ಬಂದಿದೆ.

ದಕ್ಷಿಣ ಆಫ್ರಿಕಾ ಶಾಂತಿ ಸಭೆಗೆ ಬಿಳಿ ತೀವ್ರಗಾಮಿಗಳ ಧಾಳಿ

ದಕ್ಷಿಣ ಆಫ್ರಿಕಾದಿಂದ ವರ್ಣಭೇದವನ್ನು ತೊಡೆದು ಹಾಕುವ ಗಳಿಗೆ ಹತ್ತಿರಬರುತ್ತಿದ್ದಂತೆ, ಅದನ್ನು ಆಗಗೊಡದೆ ಇರಲು ಪ್ರತಿರೋಧವೂ ಹೆಚ್ಚೆಚ್ಚು ಹಿಂಸಾತ್ಮಕವಾಗುತ್ತಿದೆ. ವರ್ಣಭೇದ ರಹಿತ ಪ್ರಜಾಸತ್ತಾತ್ಮಕ ದಕ್ಷಿಣ ಆಫ್ರಿಕಾದ ಚುನಾವಣೆಗಳ ಬಗ್ಗೆ ಮಾತುಕತೆ ನಡೆಸಲು 26 ಪಕ್ಷಗಳು ಸೇರಿದ್ದ ಜಾಗತಿಕ ವಾಣಿಜ್ಯ ಕೇಂದ್ರ ಸಭಾಂಗಣಕ್ಕೆ ಬಿಳಿ ತೀವ್ರಗಾಮಿಗಳು ಸಶಸ್ತ್ರವಾಗಿ ನುಗ್ಗಿ ಗಲಭೆ ನಡೆಸಿದ ದಂಗುಬಡಿಸುವ ಸುದ್ದಿ ವರದಿಯಾಗಿದೆ. ನವ-ನಾಜಿ ರಾಜಕೀಯ ಚಳುವಳಿಯಾದ ಆಫ್ರಿಕಾನೇರ್ ಪ್ರತಿರೋಧ ಚಳುವಳಿ (Africaner Resistance Movement- AWB) ಯ ಸಶಸ್ತ್ರ ಸಮವಸ್ತ್ರಧಾರಿ ಸೈನಿಕರು ಪ್ರಬಲ (ಟ್ಯಾಂಕ್‌ನಂತಹ ಸಾಮಾನ್ಯವಾಗಿ ಪೊಲೀಸ್ ಸೈನ್ಯ ಬಳಸುವ) ವಾಹನಗಳನ್ನು ಬಳಸಿ ಸಭಾಂಗಣಕ್ಕೆ ನುಗ್ಗಿದರು. ಸಭೆ ಸೇರಿದ್ದ ಪ್ರತಿನಿಧಿಗಳ ಮೇಲೆ ಹಲ್ಲೆ ನಡೆಸಿದರು. ಸಭಾಂಗಣದಲ್ಲಿ ಘೋಷಣೆ ಕೂಗಿದರು. ಘೋಷಣೆಗಳನ್ನು ಬರೆದರು. ದಕ್ಷಿಣಾ ಆಫ್ರಿಕಾ ಪೋಲೀಸರು ಸುಮ್ಮನೆ ನೋಡುತ್ತಾ ನಿಂತಿದ್ದರು. ಇದೇ ರೀತಿಯ ಪ್ರತಿಭಟನೆ ಎ.ಎನ್.ಸಿ. ಅಥವಾ ಯಾವುದೇ ಕರಿಯ ಸಂಘಟನೆ ನಡೆಸಿದ್ದರೆ ಬಹುಶಃ ನರಮೇಧ ನಡೆಯುತ್ತಿತ್ತು. ರಕ್ತಪಾತ ನಡೆಯುತ್ತಿತ್ತು. ಸರ್ಕಾರ ಈ ಘಟನೆಯನ್ನು ಖಂಡಿಸಿದ್ದರೂ, ಅದು ಬಿಳಿಯ ಪ್ರತಿಗಾಮಿಗಳ ಬಗೆಗೆ ಮೆದು ನೀತಿ ತೋರಿಸುತ್ತಿದೆ ಎಂಬ ತೀವ್ರ ಆಪಾದನೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ.

ಎ.ಎನ್.ಸಿ. ಈ ಘಟನೆಯನ್ನು ತೀವ್ರವಾಗಿ ಖಂಡಿಸಿದೆ. ಸರ್ಕಾರ ಬಿಳಿ ಪ್ರತಿಗಾಮಿಗಳ ಹಿಂಸೆಯನ್ನು ನಿಯಂತ್ರಿಸದಿದ್ದರೆ ಇದೇ ರೀತಿ ಮೆದು ನೀತಿ ಅನುಸರಿಸಿದರೆ ಎಎನ್‌ಸಿ ಸಶಸ್ತ್ರ ವಿಭಾಗದ ಚಟುವಟಿಕೆ ಸ್ಥಗಿತಗೊಳಿಸಿದ ತನ್ನ ನೀತಿಯನ್ನು ಪುನರ್ವಿಮರ್ಶಿಸಬೇಕಾದೀತು ಎಂದು ಎಚ್ಚರಿಸಿದೆ.

ರಶ್ಯಾದ ಪ್ರಧಾನಿ ಅಮೇರಿಕ ಭೇಟಿ ರದ್ದು

ರಷ್ಯಾದ ಪ್ರಧಾನಿಯ ಅಮೇರಿಕ ಭೇಟಿ ರದ್ದಾಗಿದೆ. ಭಾರತಕ್ಕೆ ಕ್ರಯೊಜೆನಿಕ್ ಎಂಜಿನ್ ತಂತ್ರಜ್ಞಾನದ ಒಪ್ಪಂದ ರದ್ದುಗೊಳಿಸಬೇಕೆಂಬ ಒತ್ತಾಯವನ್ನು ರಷ್ಯ ನಿರಾಕರಿಸಿದ್ದು ಈ ಭೇಟಿಯ ರದ್ದಿಗೆ ಕಾರಣವೆಂದು ಹೇಳಲಾಗಿದೆ. ಆದರೆ ರಷ್ಯನ್ ಮೂಲಗಳು ಇದನ್ನು ನಿರಾಕರಿಸಿವೆ. ಭೇಟಿ ಮುಂದೂಡಲಾಗಿದೆ ರದ್ದಾಗಿಲ್ಲ ಎಂತಲೂ ಈ ಮೂಲಗಳು ಹೇಳಿವೆ. ಈ ಭೇಟಿ ಮುಖ್ಯವಾಗಿ ಜಗತ್ತಿನ ಬಾಹ್ಯಾಕಾಶ ತಂತ್ರಜ್ಞಾನದ ಮಾರುಕಟ್ಟೆಯಲ್ಲಿ ರಶ್ಯದ ಪಾಲಿನ ಬಗ್ಗೆ ಚರ್ಚಿಸುವ ಬಗ್ಗೆ ಇತ್ತು ಎನ್ನಲಾಗಿದೆ. ರಶ್ಯದ ಸಾರ್ವಭೌಮತೆ, ಸ್ವಾತಂತ್ರ್ಯಕ್ಕೆ ಎಂತಹ ಧಕ್ಕೆ ಒದಗಿದೆ ಎಂದು ಈ ಘಟನೆಯಿಂದ ತಿಳಿಯುತ್ತದೆ. ರಶ್ಯ ತನ್ನ ಬಾಹ್ಯಾಕಾಶ ತಂತ್ರಜ್ಞಾನದ ಬಲವನ್ನು ಬಳಸಲು ಸಾಧ್ಯವಾಗದೆ ಹೆಣಗುತ್ತಿದೆ.

ಈ ನಡುವೆ ಅಧ್ಯಕ್ಷ ಯೆಲ್ಟ್ಸಿನ್ ತನ್ನದೇ ಸಂವಿಧಾನ ಬರೆಸಲು ಕರೆದಿದ್ದ ಸಂವಿಧಾನ ಸಭೆ ತನ್ನ ಮೊದಲನೆಯ ಸಭೆ ಮುಗಿಸಿದೆ. ಈ ಸಭೆಯನ್ನು ರಾಷ್ಟ್ರೀಯತಾವಾದಿ- ಎಡಕೂಟಕ್ಕೆ ಸೇರಿದ ಪಾರ್ಲಿಮೆಂಟ್ ಸದಸ್ಯರು ಬಹಿಷ್ಕರಿಸಿದ್ದರು. ಈಗಿನ ಸಂವಿಧಾನ ಉಲ್ಲಂಘಿಸಿ, ಅತ್ಯಂತ ಸರ್ವಾಧಿಕಾರಿ ಸಂವಿಧಾನ ರಚಿಸುವ ಈ ಪ್ರಯತ್ನ ಅಧ್ಯಕ್ಷ ಯೆಲ್ಟ್ಸಿನ್ ಹಾಗೂ ಆತನ ಸಾಮ್ರಾಜ್ಯಶಾಹಿ ಬಾಸ್‌ಗಳ ಅಧಿಕಾರ ಉಳಿಸಿಕೊಳ್ಳುವ ಕೊನೆಯ ಪ್ರಯತ್ನ. ಸರ್ಕಾರದ ವಿರುದ್ಧ ಗರಿಗೆದರಿಕೊಳ್ಳುತ್ತಿರುವ ವಿರೋಧ ಪ್ರಬಲವಾಗುವ ಮೊದಲೇ ಬಂಡವಾಳಶಾಹಿಯನ್ನು ರಶ್ಯದ ಮೇಲೆ ಪೂರ್ಣ ಹೇರುವ ಪ್ರಯತ್ನ.

ನೈಜೀರಿಯಾ ಅಧ್ಯಕ್ಷೀಯ ಚುನಾವಣೆ ರದ್ದು

10 ವರ್ಷಗಳಿಂದ ಮಿಲಿಟರಿ ಆಡಳಿತದಲ್ಲಿರುವ ನೈಜೀರಿಯಾದಲ್ಲಿ ಪ್ರಜಾಪ್ರಭುತ್ವದತ್ತ ಚಲನೆ ಸ್ಥಗಿತಗೊಂಡಿದೆ. ಹಿಂದೆ ಮಿಲಿಟರಿ ಆಡಳಿತದಿಂದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದೇಶದಲ್ಲಿ ತರಲು ಮಿಲಿಟರಿ ಸರ್ಕಾರ ಹೊರಡಿಸಿದ್ದ ಸುಗ್ರೀವಾಜ್ಞೆಯನ್ನು ಹಿಂತೆಗೆದುಕೊಳ್ಳಲಾಗಿದೆ. ಇದರ ಪ್ರಕಾರ ಆಗಸ್ಟ್ 28ರ ಒಳಗೆ ಪ್ರಜಾಪ್ರಭುತ್ವ ಸರ್ಕಾರ ರಚಿತವಾಗಿ, ಮಿಲಿಟರಿ ಆಡಳಿತ ವಹಿಸಿಕೊಡಬೇಕಾಗಿತ್ತು. ಇತ್ತೀಚೆಗೆ ನಡೆದಿದ್ದ ಅಧ್ಯಕ್ಷೀಯ ಚುನಾವಣೆಗಳನ್ನೂ ರದ್ದುಗೊಳಿಸಿ, ಮಿಲಿಟರಿ ಆಡಳಿತಗಾರ ಜನರಲ್ ಇಬ್ರಾಹಿಂ ಬಾಬಾಂಗಿದಾ ಪ್ರಜಾಪ್ರಭುತ್ವ ಸ್ಥಾಪಿಸುವ ಆಶ್ವಾಸನೆ ಹಸಿಸುಳ್ಳು ಎಂದು ಸಿದ್ಧಪಡಿಸಿದ್ದಾನೆ.

ಇತ್ತೀಚೆಗೆ ನಡೆದ ಅಧ್ಯಕ್ಷೀಯ ಚುನಾವಣೆಗಳಲ್ಲಿ ಎಡ-ಮಧ್ಯ ಪಕ್ಷದ ಅಭ್ಯರ್ಥಿ ಬಲಪಂಥೀಯ ಪಕ್ಷದ ಅಭ್ಯರ್ಥಿಗಿಂತ ಸ್ಪಷ್ಟವಾಗಿ ಮುಂದಿದ್ದು, ಫಲಿತಾಂಶವನ್ನು ಸರ್ಕಾರದ ಆಜ್ಞೆಯ ಮೇಲೆ ತಡೆಹಿಡಿಯಲಾಗಿತ್ತು. ಇದಕ್ಕಿಂತ ಮೊದಲು ಈ ಎರಡೂ ಪಕ್ಷಗಳ ಆಂತರಿಕ ಚುನಾವಣೆಗಳ ಫಲಿತಾಂಶವನ್ನು ಇದೇ ರೀತಿ ರದ್ದುಮಾಡಲಾಗಿತ್ತು. ಆಮೇಲೆ ಎರಡೂ ಪಕ್ಷದ ಅಭ್ಯರ್ಥಿಗಳನ್ನೂ ಮಿಲಿಟರಿ ಸರ್ಕಾರವೇ ನೇಮಿಸಿತ್ತು! ಆದರೂ ಈ ಚುನಾವಣೆ ರದ್ದುಮಾಡಿರುವುದು ವಿಸ್ಮಯಕಾರಿಯಾಗಿದೆ. ಆಫ್ರಿಕಾದ ಅತ್ಯಂತ ಹೆಚ್ಚು ಜನಸಂಖ್ಯೆಯ ಈ ದೇಶದಲ್ಲಿ ಪ್ರಜಾಪ್ರಭುತ್ವದ ಆಸೆ ದೂರವೇ ಉಳಿದಂತಾಗಿದೆ.

ತುರ್ಕಿ ರಾಯಭಾರಿ ಕಛೇರಿಗಳ ಮೇಲೆ ಧಾಳಿ

ಪಶ್ಚಿಮ ಯುರೋಪಿನ ಹಲವಾರು ದೇಶಗಳಲ್ಲಿರುವ ತುರ್ಕಿ ರಾಯಭಾರಿ ಕಛೇರಿ, ಬ್ಯಾಂಕ್ ಹಾಗೂ ಪ್ರವಾಸ ಏಜಂಟ್‌ಗಳ ಆಫೀಸುಗಳ ಮೇಲೆ ಒಂದೇ ಸಮಯದಲ್ಲಿ ಸಶಸ್ತ್ರ ದಾಳಿ ನಡೆಸಿ ಹಲವಾರು ತುರ್ಕಿ ಸಿಬ್ಬಂದಿಗಳನ್ನು ವಶಕ್ಕೆ ತೆಗೆದುಕೊಳ್ಳಲಾಯಿತು. ಅವರನ್ನು ಬಿಡುಗಡೆ ಮಾಡಬೇಕಾದರೆ ಕುರ್ದಿಶ್ ಸ್ವಯಂ- ನಿರ್ಧಾರದ ಬಗ್ಗೆ ಹೋರಾಟ ನಡೆಸುತ್ತಿದ್ದವರ ಮೇಲೆ ತುರ್ಕಿ ಆಕ್ರಮಣ ದಮನ ನಿಲ್ಲಿಸಬೇಕು, ಕುರ್ದ್ ಜನತೆಗೆ ಸ್ವಯಂ-ನಿರ್ಧಾರದ ಹಕ್ಕು ನೀಡಬೇಕು, ಈ ಬಗ್ಗೆ ತುರ್ಕಿ ಸರ್ಕಾರದ ಮೇಲೆ ಒತ್ತಡ ಹೇರಬೇಕು - ಇದು ಈ ಧಾಳಿಗಳ ಉದ್ದೇಶವಾಗಿತ್ತು. ಆಯಾ ಸರ್ಕಾರಗಳ ಜತೆ ಈ ಬಗ್ಗೆ ಮಾತುಕತೆ ನಡೆಸುವ ಭರವಸೆಯ ಮೇಲೆ ಒತ್ತೆಯಾಳಾಗಿದ್ದ ತುರ್ಕಿ ಸಿಬ್ಬಂದಿಯನ್ನು ಕುರ್ದಿಶ್ ತೀವ್ರಗಾಮಿಗಳು ಬಿಡುಗಡೆ ಮಾಡಿದರು. ಜರ್ಮನಿ ಒಂದರಲ್ಲೇ ಇಂತಹ 13 ಆಕ್ರಮಣಗಳು ನಡೆದವು ಎನ್ನಲಾಗಿದೆ. ಇದಲ್ಲದೆ ಫ್ರಾನ್ಸ್, ಸ್ವಿಟ್ಜರ್‌ಲ್ಯಾಂಡ್ ಇತ್ಯಾದಿ ದೇಶಗಳಲ್ಲೂ ಇಂತಹ ಆಕ್ರಮಣಗಳು ನಡೆದವು.

ಪರ್ಯಾಯವನ್ನು ಕಟ್ಟೋಣ ....

ಪುಟ 3ರಿಂದ

ಇದಕ್ಕೆಲ್ಲಾ ಕಳಶಪ್ರಾಯವೆಂಬಂತೆ ಹರ್ಷದ್ ಮೆಹ್ತಾರ ಬಾಂಬು ನರಸಿಂಹರಾಯರು ರೂ 1 ಕೋಟಿ ಹಣವನ್ನು ಹರ್ಷದ್ ಮೆಹ್ತಾರಿಂದ 'ಡೋನೆಶನ್ ಪಡೆದಿದ್ದಾರೆ... ಆ ಮೂಲಕ ಹರ್ಷದ್ ಮೆಹ್ತಾರಂತವರಿಗೆ ದೇಶದ ಜನತೆಯನ್ನು ಹಾಗೂ ಬ್ಯಾಂಕುಗಳನ್ನು ಐದು ಸಾವಿರ ಕೋಟಿ ರೂಪಾಯಿ ಲೂಟಿ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ ಎಂಬ ಬಾಂಬಿನಿಂದಾಗಿ, ಕಾಂಗ್ರೆ ಮಂತ್ರಿಗಳೆಲ್ಲರೂ ನರಸಿಂಹರಾಯರಿಗೆ ತಾವು ವಿಧೇಯವೆಂದು ತೋರಿಸಲು ಹೊರಡುವಂತಾಗುತ್ತಿದೆ. ರಾಜ್ಯದ ಆಡಳಿತೆಯನ್ನು ನೋಡುವವರೇ ಇಲ್ಲದಂತಾಗಿದೆ...

ಮೂಲಭೂತವಾಗಿ ಭಿನ್ನವಲ್ಲದ ಬಿಜೆಪಿಯ ಆರ್ಭಟ

ಈ ಸಂದರ್ಭದಲ್ಲಿ ಅಯೋಧ್ಯೆಯ ಹೆಸರಿನಲ್ಲಿ ರಾಜಕೀಯ ಮಾಡಿ, ಮತೀಯ ಗಲಬೆಗಳನ್ನು ಯೋಜನಾಬದ್ಧವಾಗಿ ದೇಶಾದ್ಯಂತ ಹಾಗೂ ರಾಜ್ಯದಲ್ಲಿ ನಡೆಸುತ್ತಾ ಬಂದ ಮತೀಯ ಪಕ್ಷವಾದ ಬಿಜೆಪಿ ಕರ್ನಾಟಕದಲ್ಲಿ ಅಧಿಕಾರಕೊಸ್ಕರ ಗಂಭೀರವಾಗಿ ಪ್ರಯತ್ನ ನಡೆಸುತ್ತಿದೆ. "ಬಿಜೆಪಿ ಮೇಲಿನ ಕಳಂಕಗಳನ್ನು ಕಳಚುವ ಸಮಾವೇಶ"ವೆಂದೇ ಕರೆದ ಬಿಜೆಪಿ ರಾಷ್ಟ್ರೀಯ ಕೌನ್ಸಿಲ್ ಬೆಂಗಳೂರಿನಲ್ಲಿ ಸಭೆ ಸೇರಿತು. ಅದರಲ್ಲಿ ಬಿಜೆಪಿ ಅಂಗೀಕರಿಸಿದ ಠರಾವುಗಳು, ಕೊಟ್ಟ ಪತ್ರಿಕಾ ಹೇಳಿಕೆಗಳು, ಮಾಡಿದ ಪ್ರಚಾರ ಎಲ್ಲವೂ ರಾಜ್ಯದ ಜನಸಾಮಾನ್ಯನನ್ನು ವಂಚಿಸುವ ಮತ್ತು ದಾರಿತಪ್ಪಿಸುವ ನೀತಿಯಾಗಿದೆ. ಕಾಂಗ್ರೆಸ್(ಐ) ಪಕ್ಷದ ಆಡಳಿತೆಯಿಂದ ಅತೃಪ್ತಿಗೊಂಡ ಜನತೆಯ ಬೇರೆ ಬೇರೆ ವಿಭಾಗಗಳನ್ನು ತನ್ನೆಡೆಗೆ ಎಳೆಯಲು ಅದು ಯೋಜನಾ ಬದ್ಧವಾಗಿ ಕೆಲಸಮಾಡುತ್ತಿದೆ.

ನೋಡಿ, ನಮ್ಮ ಅಧ್ಯಕ್ಷರು ಹಿಂದುಳಿದ ಜಾತಿಯವರು ಕುರುಬ ಜನಾಂಗದವರು.... ಈಶ್ವರಪ್ಪನವರು... ಎಂದು ಒಂದೆಡೆ (ನಿಜವಾಗಿ ಎಲ್ಲ ಆಟವನ್ನು ಆಡುವವರು ಯುಡಿಯೂರಪ್ಪನವರು) ಇನ್ನೊಂದೆಡೆ ಈತನಕ ದೇಶದಲ್ಲಿ ಮಂಡಲ್ ಕಮಿಶನಿನ ಜಾರಿಯನ್ನು ಶತಾಯಗತಾಯ ವಿರೋಧಿಸುತ್ತಾ ಬಂದವರು, ಇಂದು ತಮ್ಮ ಬಿಜೆಪಿ ಪಕ್ಷದಿಂದ ಮಂಡಲ್ ಕಮಿಶನ್ ವರದಿ ಜಾರಿಗೆ ಏನೇನೂ ಅಡ್ಡಿಯಿಲ್ಲ ಎಂದು ಹೇಳುತ್ತಿದ್ದಾರೆ. ರಾಜ್ಯದ ಹಲವಡೆ ಮುಂದುವರಿದ ಜಾತಿಗಳ ತೀರಾ ಜಾತೀವಾದಿ ನಿಲುಮೆಗಳಿಗೆ ಬದ್ಧರಾಗಿ ಕೆಲಸ ಮಾಡುತ್ತಿರುವವರು, ಕೆಳ ಜಾತಿಗಳ ಮೇಲೆ ಹಲವಡೆಗಳಲ್ಲಿ ಮೇಲ್ಜಾತಿಯವರ ಧಾಳಿಗಳಿಗೆ ಕುಮ್ಮಕ್ಕು ಕೊಟ್ಟವರು, ಇದೀಗ ತಮ್ಮ ಬಿಜೆಪಿ ರಾಜ್ಯದಲ್ಲಿ ಚಿನ್ನಪ್ಪರೆಡ್ಡಿ ವರದಿ ಜಾರಿಗೆ ಪರವೆಂದು ಹೇಳಿಕೆ ಕೊಡುತ್ತಿದ್ದಾರೆ. ಠರಾವು ಮಾಡುತ್ತಿದ್ದಾರೆ. ಅವರ ಪಕ್ಷದ ನೂತನ ಅಧ್ಯಕ್ಷರಾದ ಅಡ್ವಾಣಿಯವರು "ತಾವು ಅಧಿಕಾರಕ್ಕೆ ಬಂದರೆ ದೇಶವನ್ನು ಜಾತಿ ದಂಗೆಯಿಂದ ಮುಕ್ತ ಮಾಡಿ ತೋರಿಸುತ್ತೇವೆ" ಎಂದು ಹೇಳಿ ಪರೋಕ್ಷವಾಗಿ ತಾವೇ ದೇಶದಲ್ಲಿ ಸತತವಾಗಿ ಯೋಜನಾಬದ್ಧವಾಗಿ ನಡೆಸುತ್ತಾ ಬಂದ ಜಾತಿಮತೀಯ ಗಲಭೆಗಳಿಗೆ ಕಾರಣವೆಂಬುದನ್ನು ಒಪ್ಪಿಕೊಂಡಿದ್ದಾರೆ...ರಾಮಮಂದಿರದ ಹೆಸರಿನಲ್ಲಿ ಸಾವಿರಾರು ಕೋಟಿ ರೂಪಾಯಿಯನ್ನು ಮುಗ್ಧ ಜನತೆಯನ್ನು ವಂಚಿಸಿ ವಸೂಲಿ ಮಾಡಿದ ಹಣದ ಲೆಕ್ಕ ಕೊಡಲಾರದ ಬಿಜೆಪಿ, ಇದೀಗ, "ನಾವು ಸಭ್ಯರು, ನಾವು ಕಂಪೆನಿಗಳಿಂದ, ದಲಾಲಿಗಳಿಂದ ಸರ್ಕಾರಕ್ಕೆ ಕೋಟಿ ಕೋಟಿ ತೆರಿಗೆ ಹಣ ಮುಳುಗಿಸುವ ವ್ಯಾಪಾರಸ್ಥರಿಂದ ಹಣ ಅಪಾರ ಪಡೆದು ತಮ್ಮ ರಾಜಕೀಯ ಮಾಡುತ್ತಾ ಬಂದರೂ" ನಾವು ಭ್ರಷ್ಟರಲ್ಲ, ಅವರು ಮಾತ್ರ ಭ್ರಷ್ಟರು ಎಂಬ ರೀತಿಯಲ್ಲಿ ಆರ್ಭಟ ಹೂಡುತ್ತಿದ್ದಾರೆ.

ಇಂದು ಕಾಂಗ್ರೆಸ್(ಐ), ಬಿಜೆಪಿಗಳಲ್ಲಿ ಮೂಲಭೂತವಾಗಿ ವ್ಯತ್ಯಾಸವಿಲ್ಲೆಂದು ಸಾಧಿಸಲು ಹಲವು ಉದಾಹರಣೆಗಳನ್ನು ಕೊಡಬಹುದು. ಪಶ್ಚಿಮ ಬಂಗಾಳದ ಪಂಚಾಯತು ಚುನಾವಣೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್(ಐ) ಒಂದೇ ಮಾದರಿ ಬ್ಯಾಲೆಟ್‌ನಲ್ಲಿ ಎರಡೂ ಚಿಹ್ನೆಗಳನ್ನು ಹಾಕಿ ಪ್ರಚಾರ ಮಾಡಿದ್ದು ಒಂದು ಉದಾಹರಣೆ. ಅದೇ ಕಾಂಗ್ರೆಸ್(ಐ)ನ ಸರಕಾರವು ಮುಕುಂದ ಸ್ಟೀಲ್ ಎಂಬ ಕಂಪೆನಿಯನ್ನು ಬಿಜೆಪಿ ಎಂ.ಪಿ.ಗೆ ಸಾರ್ವಜನಿಕ ವಲಯದ ಉಕ್ಕು ಕಾರ್ಖಾನೆಯನ್ನು ವಹಿಸಿಕೊಡಲು ಹೊರಟಿದೆ.

ನಮ್ಮ ರಾಜ್ಯದಲ್ಲಿ ಇದೇ ಯುಡಿಯೂರಪ್ಪನವರು ನಾವು ರಾಜ್ಯದ ರೈತರ ಸಾಲ ರದ್ದುಪಡಿಸಿಯೇ ತೀರುತ್ತೇವೆ ಎಂದು ಹೇಳುವವರು ಈಗ ಸಾಲದ ಬಗ್ಗೆ ಮಾತಾಡುತ್ತಲೇ ಇಲ್ಲ. ಮಠಾಧಿಪತಿಗಳು ಇಂದು ವೃತ್ತಿಪರ ಶಿಕ್ಷಣದ ವ್ಯಾಪಾರಸ್ಥರಾಗಿ ಸುಪ್ರೀಂ ಕೋರ್ಟಿನ ತೀರ್ಪನ್ನೇ ನೇರವಾಗಿ ವಿರೋಧಿಸುತ್ತಿರವಾಗ ಬಿಜೆಪಿ ಈ ಬಗ್ಗೆ ದನಿಯೆತ್ತುವುದಿಲ್ಲ. ಅವರ ನೇತೃತ್ವದ ಬಿಜೆಪಿ ಕೇವಲ ಸಪ್ಪೆ ಹೇಳಿಕೆಯನ್ನು ಕೊಟ್ಟು ಮಾತ್ರ ಕುಳಿತಿದೆ.

ನಮ್ಮ ಮುಂದಿರುವ ಹಾದಿ

ಆದ್ದರಿಂದ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್(ಐ) ಯಿಂದಾಗಲೀ ಬಿಜೆಪಿಯಿಂದಾಗಲೀ ಜನತೆಯ ಪರವಾಗಿರುವ ಅಭಿವೃದ್ಧಿ ಸಾಧಿಸುವ ಅಧಿಕಾರದ ವಿಕೇಂದ್ರೀಕರಣವನ್ನು ಜಾರಿಗೊಳಿಸುವ ಸರಕಾರವನ್ನು ಅಪೇಕ್ಷಿಸುವುದು ಸರ್ವಥಾ ವ್ಯರ್ಥ.

ಪುನಃ ರಾಜ್ಯದಲ್ಲಿ ರಾಷ್ಟ್ರೀಯ ರಂಗದ ಪಕ್ಷಗಳು ಮತ್ತು ಎಡಪಕ್ಷಗಳು ಹಾಗೂ ರಾಜಕೀಯ ವ್ಯಕ್ತಿಗಳು ಸರ್ವ ಪ್ರಯತ್ನಗಳನ್ನು ನಡೆಸಿ ಈ ಎರಡೂ ಪಕ್ಷಗಳಿಗೆ ಪರ್ಯಾಯವಾದಂತಹ ಒಂದು ರಾಜಕೀಯ ಶಕ್ತಿಕೂಟವನ್ನು ರಚಿಸುವದೊಂದೇ ನಮ್ಮ ಮುಂದಿರುವ ಹಾದಿ.

ಇದು ಸಾಧ್ಯವಾಗಬೇಕಾದರೆ, ಇಂದಿನ ರಾಜಕೀಯ ಅವಶ್ಯಕತೆಗನುಸಾರವಾಗಿ ತಮ್ಮ ಮರ್ಜಿಗಳನ್ನು ಬದಲಿಸಿ, ವೈಯುಕ್ತಿಕ ನಿಲುಮೆಗಳನ್ನು ಬದಿಗಿಟ್ಟು ಮುಖ್ಯವಾಗಿ ಜನತಾದಳ ಎಸ್‌ಜೆಪಿ ಮುಖಂಡರು ಒಂದಾಗಿ ದುಡಿಯಬೇಕು.(ಇದು ರಾಷ್ಟ್ರೀಯ ರಾಜಕೀಯಕ್ಕೂ ಉತ್ತೇಜಕವಾಗುವುದರಲ್ಲಿ ಸಂಶಯವಿಲ್ಲ.) ಇನ್ನೊಂದೆಡೆ ಎಡಪಕ್ಷಗಳು - ಮುಖ್ಯವಾಗಿ ಸಿಪಿಐ(ಎಂ) ಮತ್ತು ಸಿಪಿಐ - ತಮ್ಮ ಎಲ್ಲಾ ಸಾಮೂಹಿಕ ಸಂಘಟನೆಗಳ ಶಕ್ತಿಗಳನ್ನು ಕ್ರೋಢೀಕರಿಸಿ ಕನಿಷ್ಠ ಕಾರ್ಯಕ್ರಮವನ್ನು ಜನತೆಯ ಮುಂದಿಟ್ಟು ದಿಟ್ಟ ವ್ಯಾಪಕ ಹೋರಾಟಗಳನ್ನು ನಡೆಸಲು ಮುಂದಾಗಬೇಕು. (ಕಾಂಗ್ರೆಸ್(ಐ) ಸರಕಾರ ಹೊಸ ಆರ್ಥಿಕ ನೀತಿಗಳ ಹಾಗೂ ಕೋಮುವಾದೀ ದುಷ್ಟಶಕ್ತಿಗಳ ದುಷ್ಟ ಹಂಚಿಕೆಯ ವಿರುದ್ಧ ಹೋರಾಡುವ ಪಕ್ಷಗಳು ಇವೆಲ್ಲವುಗಳ ಜತೆಯಲ್ಲಿ ಹಿಂದುಳಿದ ಜನ ವಿಭಾಗಗಳ ಪ್ರಗತಿಗೆ ಕಟಿಬದ್ಧರಾಗಿ ನಿಲ್ಲುವ ಎಲ್ಲಾ ಶಕ್ತಿಗಳು, ಗುಂಪುಗಳು ಮತ್ತು ವ್ಯಕ್ತಿಗಳ ಜತೆ ಕೂಡಿ ಕೆಲಸ ಮಾಡಲು ಮುಂದಾಗಬೇಕು.

ರಾಜ್ಯದಲ್ಲಿ ಎಡಪಕ್ಷಗಳು, ಜನತಾದಳ ಮತ್ತು ಎಸ್.ಜೆ.ಪಿ. ದಲಿತ ಸಂಘರ್ಷ ಸಮಿತಿ ಮತ್ತು ಎಲ್ಲಾ ದೇಶಪ್ರೇಮಿ ಜಾತ್ಯಾತೀತ ಶಕ್ತಿಗಳನ್ನೂ ವ್ಯಕ್ತಿಗಳನ್ನು ಸೇರಿಸಿ ಪರ್ಯಾಯ ರಾಜಕೀಯ ವೇದಿಕೆಯನ್ನು ಜನತೆಯಲ್ಲಿ ಪ್ರಚಾರ ಪಡಿಸೋಣ. ಕರ್ನಾಟಕದಲ್ಲಿ ಜುಲೈ 14ರ ಅಸಂಘಟಿತ ಕಾರ್ಮಿಕರ ಹೋರಾಟ, ಆಗಸ್ಟ್ 19 ಪಿಕೇಟಿಂಗ್ ಮತ್ತು ಸೆಪ್ಟೆಂಬರ್ 9ರ ಭಾರತ್ ಬಂದ್ ಕಾರ್ಯಕ್ರಮಕ್ಕೆ ಮುಂದಾಗೋಣ......

ಆಗ ಮಾತ್ರ ಕರ್ನಾಟಕದ ರಾಜಕೀಯದಲ್ಲಿ ಒಂದು ಹೊಸ ತಿರುವುಂಟಾಗುವುದು ಹಾಗೂ ಆ ಮೂಲಕ ಜನತೆಯ ಹಿತರಕ್ಷಣೆಯ ರಾಜಕೀಯಕ್ಕೆ ಹೊಸ ಆಯಾಮ ರಾಜ್ಯದಲ್ಲಿ ದೊರೆಯುವುದು.

KRNM/BGS-405 MAG(2) PRB DECR 319-78/79

"ಜನಗಳಿಗೆ ಸಲ್ಲಬೇಕಾದ ಗೌರವ ಸಲ್ಲುವಂತೆ ಮಾಡಿದೆವು"

ಭಾರತೀಯ ಗಣತಂತ್ರದಲ್ಲಿ ಅಭೂತಪೂರ್ವ ದಾಖಲೆ ನಿರ್ಮಿಸಿದ ಜ್ಯೋತಿಬಸು

ಜನಗಳೊಂದಿಗೆ ನಿಕಟ ಸಂಬಂಧ-ಸಂಪರ್ಕ- ಎಡರಂಗದ ಯಶಸ್ವಿ ಆಡಳಿತ ಗುಟ್ಟು ಇದು - ಹೀಗೆಂದವರು ಭಾರತೀಯ ಗಣರಾಜ್ಯದಲ್ಲಿ ಇತ್ತೀಚೆಗೆ ದಾಖಲೆ ಸ್ಥಾಪಿಸಿದ ಪಶ್ಚಿಮಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸು. ಇಡೀ ದೇಶದ ಇತಿಹಾಸದಲ್ಲಿ ಅವರಷ್ಟು ದೀರ್ಘಕಾಲ ಸತತವಾಗಿ ಮುಖ್ಯಮಂತ್ರಿಗಳಾಗಿದ್ದವರು ಬೇರೆ ಯಾರೂ ಇಲ್ಲ. ಮುಖ್ಯಮಂತ್ರಿಗಳಾಗಿ 16 ವರ್ಷಗಳನ್ನು ಪೂರ್ಣ ಗೊಳಿಸಿದ ಸಂದರ್ಭದಲ್ಲಿ ಐ.ಎನ್.ಎನ್. ವಾರ್ತಾ ಸಂಸ್ಥೆ ಅವರ ಈ ಅಭೂತಪೂರ್ವ ದಾಖಲೆಯ ಒಳಗುಟ್ಟೇನು ಎಂದು ಕೇಳಿದಾಗ ಜ್ಯೋತಿ ಬಸುರವರು ನೀಡಿದ ಉತ್ತರವಿದು.



ಆದರೂ ಈ ಅಭೂತಪೂರ್ವ ದಾಖಲೆ ನಿರ್ಮಿಸಿದ ಸಂದರ್ಭದಲ್ಲಿ ಉತ್ಸವದ ಅಬ್ಬರವಿಲ್ಲ. ಯಾವುದೇ ವಿಶೇಷ ಸರ್ಕಾರಿ ಕಾರ್ಯಕ್ರಮವಿಲ್ಲ. ಕಲ್ಕತ್ತೆಯ ಪತ್ರಿಕೆಗಳು ನಡೆಸಿದ ಸಂದರ್ಶನಗಳಲ್ಲಿ ಜ್ಯೋತಿ ಬಸು ಹಾಗೂ ಇತರ ಎಡರಂಗ ಮುಖಂಡರು ಜನತೆಯ ಹಿತಾಸಕ್ತಿ ಕಾಪಾಡಲು ಮತ್ತಷ್ಟು ಮುಡುಪಾಗಿಡಿ ಎಂಬ ಕರೆ ನೀಡಿದರೇ ವಿನಹ ಬೇರೆ ಯಾವ ವೈಭವೋಪೇತ ಕಾರ್ಯಕ್ರಮಗಳಿಲ್ಲ.

ಆದರೂ ಎಲ್ಲರ ಮನಸ್ಸಿನಲ್ಲಿರುವ ಪ್ರಶ್ನೆ- ಒಂದು ಎಡರಂಗ ಸರ್ಕಾರ ಆಳುವ ವರ್ಗಗಳ ವೈರ್ಯವನ್ನು ಎದುರಿಸಿ ಇಷ್ಟು ದೀರ್ಘಕಾಲ ಆಡಳಿತ ನಡೆಸಲು ಹೇಗೆ ಸಾಧ್ಯವಾಯಿತು? ಈ ಅಭೂತಪೂರ್ವ ಸಾಧನೆಗೆ ಕಾರಣಗಳೇನು?

ಇದಕ್ಕೆ ಜ್ಯೋತಿ ಬಸುರವರ ಉತ್ತರ ನೇರ, ಸ್ಪಷ್ಟ- *ಹೌದು- ಇದೊಂದು ಅಭೂತಪೂರ್ವ ಉದಾಹರಣೆ. ನಾವು 16 ವರ್ಷಗಳಿಂದ ಇಲ್ಲಿದ್ದೇವೆ. ಕಾರ್ಮಿಕವರ್ಗದ, ರೈತಾಪಿ ವರ್ಗದ, ಜನಸಾಮಾನ್ಯರ ಹಿತಾಸಕ್ತಿಗಳಿಗಾಗಿ ದುಡಿಯುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ 28 ವರ್ಷ ಆಡಳಿತ ನಡೆಸಿತು. ಇಡೀ ದೇಶದಲ್ಲೂ ಕೆಲವು ತಿಂಗಳಷ್ಟೇ ಬಿಟ್ಟು ಉಳಿದಂತೆಲ್ಲಾ ಅಧಿಕಾರನಡೆಸಿತು. ಬಿಜೆಪಿ ಕೂಡಾ ಕೆಲವು ಸಮಯ ಕೆಲವು ರಾಜ್ಯಗಳಲ್ಲಿ ಅಧಿಕಾರ ನಡೆಸಿತು. ಅವ*

ಕೆಲ್ಲಾ ಹೋಲಿಸಿದರೆ ಎಡರಂಗದ ಸಾಧನೆಗಳು ನಿಜಕ್ಕೂ ಭಾರೀ ದೊಡ್ಡವು ಎಂದರು ಜ್ಯೋತಿಬಸು.

"ನಾವು ವ್ಯಾಪಕ ಬದಲಾವಣೆಗಳನ್ನು ತಂದೆವು ಆದರೆ ಆರಂಭದಲ್ಲೇ ನಾವು ಸ್ಪಷ್ಟವಾಗಿ ಹೇಳಿದ್ದೆವು- ಇಂತಹ ಒಂದು ರಾಜ್ಯದಲ್ಲಿ ರಾಜ್ಯ ಸರಕಾರವನ್ನು ನಡೆಸುತ್ತಾ ಈಗಿನ ವರ್ಗ ವಿಭಜಿತ ಬಂಡವಾಳಶಾಹಿ- ಭೂಮಾಲಕ ವ್ಯವಸ್ಥೆಯ ಸಂಪೂರ್ಣ ಪರಿವರ್ತನೆ ಸಾಧ್ಯವಿಲ್ಲ ಎಂದು. ಕೇಂದ್ರದಲ್ಲಿ ಸುಮಾರಾಗಿ ಎಲ್ಲಾ ಅಧಿಕಾರಗಳೂ ಹಣಕಾಸು, ಯೋಜನೆ, ಶಾಸನ ಇತ್ಯಾದಿ ಎಲ್ಲಾ ಅಧಿಕಾರಗಳು ಜಮಾವಣೆಯಾಗಿರುವುದರಿಂದ ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವುದು ಅಸಾಧ್ಯ ಎಂದಿದ್ದೆವು. ಅಂದರೆ ಜನಗಳಿಗೆ ಎಂದೂ ನಾವು ಸುಳ್ಳು ಭರವಸೆಗಳನ್ನು ನೀಡಲಿಲ್ಲ. ಆದರೆ ಈ ಮಿತಿಯೊಳಗೆ ಎಷ್ಟು ಸಾಧ್ಯವೋ ಜನಗಳಿಗೆ ನೆರವಾಗಲು ನಾವು ಬದ್ಧರಾಗಿದ್ದೆವು. ಇತರರಿಂದ ಮೂಲಭೂತವಾಗಿ ಭಿನ್ನವಾದ, ಜನಗಳ ಹಿತಾಸಕ್ತಿಗಳಿಗೆ ಅನುಗುಣವಾದ ಪರ್ಯಾಯ ದಿಕ್ಕು, ನಿಲುವಿನಿಂದ ಸರ್ಕಾರ ನಡೆಸಿದವು" ಎಂದರು ಜ್ಯೋತಿ ಬಸು.

ಪ್ರತಿಯೊಂದರಲ್ಲೂ ಜನಗಳ ನೆರವು ಸಹಕಾರದ ಮೇಲೆ ಒತ್ತು ನೀಡುತ್ತಾ ಜ್ಯೋತಿ ಬಸು "ನಮ್ಮ ಸರಕಾರ ವಿಧಾನ ಸೌಧದಿಂದ (ರೈಟರ್ಸ್ ಬಿಲ್ಡಿಂಗ್‌ನಿಂದ) ನಡೆಸುವ ಸರಕಾರವಲ್ಲ. ಅದು ಜನಗಳೊಂದಿಗೆ ನಿಲ್ಲುವ ಸರಕಾರ ಎಂದು ಆರಂಭದಲ್ಲೇ ನಾವು ಹೇಳಿದ್ದೆವು. ಆದ್ದರಿಂದ ವಿವಿಧ ಮಟ್ಟಗಳಲ್ಲಿ ಜನರ ಭಾವಹಿಂಸುವಿಕೆ, ಸಲಹೆಗಳು ನಮಗೆ ಮುಖ್ಯ, ನಮ್ಮ ತಪ್ಪುಗಳ, ಸೋಲುಗಳ ಬಗ್ಗೆ ಜನಗಳ ಟೀಕೆಗಳನ್ನು ಗಂಭೀರವಾಗಿ ಅರಿತುಕೊಳ್ಳಲು ನಾವು ಒತ್ತು ನೀಡಿದೆವು' ಎಂದರು.

ತಮ್ಮ ಸರಕಾರದ ಅತೀ ದೊಡ್ಡ ಸಾಧನೆಯೇನು ಎಂದು ಕೇಳಿದಾಗ ಎಂದಿನಂತೆ ಜ್ಯೋತಿಬಸು 'ನಾವು ಜನತೆಯ ಹಕ್ಕುಗಳನ್ನು ರಕ್ಷಿಸಿದೆವಷ್ಟೇ ಅಲ್ಲ, ಅದನ್ನು ವಿಸ್ತರಿಸಿದೆವು' ಎಂದರು. ಪಶ್ಚಿಮಬಂಗಾಳದಲ್ಲಿ ಪ್ರಜಾಪ್ರಭುತ್ವ ಈಗ ಸಮಾಜದ ಎಲ್ಲಾ ಮಟ್ಟಗಳಲ್ಲೂ ವಿಸ್ತರಿಸಿದೆ. ಕಾಂಗ್ರೆಸ್ ಆಳ್ವಿಕೆಯಲ್ಲಿ ಪ್ರಜಾಪ್ರಭುತ್ವವನ್ನು ನಾಶ ಗೊಳಿಸಲಾಗಿತ್ತು. ನಾವು ಪಂಚಾಯತ್‌ಗಳಿಗೆ, ನಗರದ ಸ್ವಾಯತ್ತ ಸಂಸ್ಥೆಗಳಿಗೆ ನಿಯಮಿತವಾಗಿ ಚುನಾವಣೆಗಳನ್ನು ನಡೆಸಿದೆವು. ಅವುಗಳಿಗೆ ಬಹಳಷ್ಟು ಅಧಿಕಾರಗಳನ್ನು, ಹಣಕಾಸುಗಳನ್ನು ಒದಗಿಸಿದೆವು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಜನತೆಗೆ ಸಲ್ಲಬೇಕಾಗಿದ್ದ ಗೌರವವನ್ನು ನೀಡಿದೆವು. ತಮ್ಮ ಆತ್ಮಗೌರವ, ಆತ್ಮವಿಶ್ವಾಸ ಹಾಗೂ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ನೆರವಾದೆವು ಎನ್ನುತ್ತಾರೆ ಜ್ಯೋತಿಬಸು.

ಗ್ರಾಮೀಣ ಅಭಿವೃದ್ಧಿ, ಕೃಷಿ, ನೀರಾವರಿ, ಸಣ್ಣ ಮತ್ತು ಗುಡಿ ಕೈಗಾರಿಕೆಗಳು, ಸಣ್ಣ ಉಳಿತಾಯ, ಶಿಕ್ಷಣ, ಸಾಕ್ಷರತೆ, ಸಾಮಾಜಿಕ ಅರಣ್ಯೀಕರಣ, ಮೀನುಗಾರಿಕೆ ಇತ್ಯಾದಿಗಳಲ್ಲಿ ಎಡರಂಗ ಸರ್ಕಾರ ಸತತ ಪ್ರಗತಿ ಸಾಧಿಸಿತು. ಇಡೀ ದೇಶದಲ್ಲಿ ಅತ್ಯಂತ ತೀವ್ರಗಾಮಿ ಭೂ ಸುಧಾರಣೆ ಕಂಡ ರಾಜ್ಯ ಪಶ್ಚಿಮಬಂಗಾಳ. ಕೇಂದ್ರ ಸತತವಾಗಿ ವಿರೋಧವೊಡ್ಡಿದರೂ ಹಿಂದೆ ನಿರಂತರವಾಗಿದ್ದ ವಿದ್ಯುತ್ ಕೊರತೆಯ ಸಮಸ್ಯೆಯನ್ನು ಬಗೆಹರಿಸಲಾಯಿತು. ಆದರೆ ದೊಡ್ಡ ಹಾಗೂ [illegible] ಉದ್ದಿಮೆಗಳ ಕ್ಷೇತ್ರದ ಬೆಳವಣಿಗೆ ನಿರೀಕ್ಷಿತ ಮಟ್ಟದಲ್ಲಿಲ್ಲ ಎಂದೂ ಜ್ಯೋತಿಬಸು ಒಪ್ಪಿಕೊಳ್ಳುತ್ತಾರೆ. ಇದಕ್ಕೆ ಮೂಲ ಕಾರಣ ಕೇಂದ್ರದ ನಿರ್ಲಕ್ಷ್ಯ ಹಾಗೂ ಅಡ್ಡಿ ಆತಂಕಗಳು. ಆದರೂ ಇತ್ತೀಚಿನ ವರ್ಷಗಳಲ್ಲಿ ಉದ್ದಿಮೆಗಳಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು, ಬಂಡವಾಳ ಹೂಡಿಕೆಗೆ ಇತರ ಅಗತ್ಯ ಪ್ರೋತ್ಸಾಹವನ್ನು ನೀಡುವಲ್ಲಿ ಯಶಸ್ಸು ಸಾಧಿಸಲಾಗಿದೆ ಎಂದು ಜ್ಯೋತಿ ಬಸು ಹೇಳಿದರು.

●

ಸಾಮೂಹಿಕ ಸಂಘಟನೆಗಳ ರಾಜ್ಯ ವೇದಿಕೆ ರಚನೆ

ಎಪ್ರಿಲ್ 15,93 ರಂದು ನವದೆಹಲಿಯಲ್ಲಿ ಜರುಗಿದ ಕಾರ್ಮಿಕ ಮತ್ತು ಇತರ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ಸಮಾವೇಶವು ಸರ್ಕಾರದ ಆರ್ಥಿಕ ನೀತಿಯ ಮತ್ತು ಕೋಮುವಾದದ ವಿರುದ್ಧ ಕೊಟ್ಟಿರುವ ಸೆಪ್ಟೆಂಬರ್ 9,93 ರಂದು ಭಾರತ್ ಬಂದ್ ಮತ್ತು ಇದರ ಪೂರಕವಾಗಿ ಆಗಸ್ಟ್ 19,1993 ರಂದು ಜೈಲ್‌ಭರೋ ಕಾರ್ಯಕ್ರಮದ ಕರೆಯನ್ನು ಕರ್ನಾಟಕ ರಾಜ್ಯದಲ್ಲಿಯೂ ಯಶಸ್ವಿ ಮಾಡಲು ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳಲು ದಿನಾಂಕ ಜೂನ್ 23,1993 ರಂದು ಜರುಗಿದ ಕಾರ್ಮಿಕ, ಕೃಷಿ ಕಾರ್ಮಿಕರ, ರೈತರ, ಬ್ಯಾಂಕ್, ಎಲ್.ಐ.ಸಿ,. ವಿದ್ಯಾರ್ಥಿ ಮತ್ತು ಯುವಜನರ ಸಂಘಟನೆಗಳು ಸಭೆ ನಡೆಯಿತು.

ಕಾಂ ಎಸ್. ಸೂರ್ಯನಾರಾಯಣರಾವ್, ಅಧ್ಯಕ್ಷರು, ಸಿಐಟಿಯು ರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಎಐಟಿಯುಸಿ ರಾಜ್ಯ ಸಮಿತಿ, ಎಐಟಿಯುಸಿ ಬೆಂಗಳೂರು ಜಿಲ್ಲಾ ಸಮಿತಿ, ಸಿಐಟಿಯು ರಾಜ್ಯ ಸಮಿತಿ, ಸಿಐಟಿಯು ಬೆಂಗಳೂರು ಜಿಲ್ಲಾ ಸಮಿತಿ, ಹೆಚ್.ಎಂ.ಎಸ್. ಕರ್ನಾಟಕ ಪ್ರಾಂತ ರೈತ ಸಂಘ, ಡಿ.ವೈ.ಎಫ್.ಐ, ಕರ್ನಾಟಕ ಪ್ರಾಂತ ಕೃಷಿ ಕೂಲಿಗಾರರ ಸಂಘ, ಎಫ್‌ಎಂಆರ್‌ಎಐ, ಎಐಎಡಬ್ಲ್ಯೂಯು, ಎಸ್‌ಎಫ್‌ಐ, ಎಐಟಿಇಎ (ಕೆಪಿಬಿಇಎಫ್), ಜಿಐಇಯು, ಎಐಎಲ್‌ಐಸಿಇಎಫ್, ಬಿಇಎಫ್ (ಕೆ) ಮತ್ತು ಬಿಕೆಎಂಯು ಸಂಘಟನೆಗಳ 29 ಪ್ರತಿನಿಧಿಗಳು ಸಭೆಯಲ್ಲಿ ಹಾಜರಿದ್ದರು.

1.ಈ ಎರಡು ತೀರ್ಮಾನಗಳನ್ನು ಜಾರಿ ಮಾಡುವ ರಾಜ್ಯ ಮಟ್ಟದ ವೇದಿಕೆಗೆ "ಸರ್ಕಾರದ ಆರ್ಥಿಕ ನೀತಿಯ ಮತ್ತು ಕೋಮುವಾದದ ವಿರುದ್ಧ ಸಾಮೂಹಿಕ ಸಂಘಟನೆಗಳ ವೇದಿಕೆ (ಕರ್ನಾಟಕ)" ಎಂದು ಕರೆಯಬೇಕೆಂದು ಹಾಗೂ ಈ ವೇದಿಕೆಗೆ ರಾಜ್ಯ ರೈತ ಸಂಘ, ಡಿಎಸ್‌ಎಸ್,, ಉಪಾಧ್ಯಾಯರ, ವಕೀಲರ ಸಂಘಟನೆಗಳ, ಜನತಾದಳದ, ವಿದ್ಯಾರ್ಥಿ, ಯುವಜನರ ಸಂಘಟನೆಗಳ, ಬರಹಗಾರರ, ವಿಜ್ಞಾನಿಗಳ, ಸಾಂಸ್ಕೃತಿಕ ಕ್ಷೇತ್ರ, ರೈಲ್ವೆ, ಪೋಸ್ಟಲ್ ದೂರವಾಣಿ, ಅಂಚೆ, ಆರ್.ಎಂ.ಎಸ್. ಮುಂತಾದ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳನ್ನು ಕರೆಯಲು ಸಭೆ ತೀರ್ಮಾನಿಸಿತು.

3.ಜಿಲ್ಲೆಯಲ್ಲಿ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಜಾರಿ ಮಾಡಲು ಪ್ರತಿ ಜಿಲ್ಲೆಯಲ್ಲಿಯೂ ಜಿಲ್ಲಾ ಮಟ್ಟದ ಸದರಿ ಸಂಘಟನೆಗಳ ವೇದಿಕೆಗಳನ್ನು ತಕ್ಷಣವೇ ಸಂಘಟಿಸಲು ಈ ವೇದಿಕೆಯ ವಿವಿಧ ಸಂಘಟನೆಗಳಿಗೆ ಜವಾಬ್ದಾರಿ ಕೊಡಲಾಯಿತು.

ಇವು ಜಿಲ್ಲೆಗಳಲ್ಲಿ ಸಮಾವೇಶಗಳನ್ನು ಮತ್ತು ಜಾಥಾಗಳನ್ನು ಜುಲೈ ತಿಂಗಳ ಕೊನೆಯೊಳಗೆ ನಡೆಸುವವು.

ಸುಮಾರು ಕನಿಷ್ಠ ಎರಡು ಲಕ್ಷ ಕಾರ್ಯಕರ್ತರು ಆಗಸ್ಟ್ 19,1993 ದಸ್ತಗಿರಿಯಾಗಲು ಸಂಘಟನೆಗಳು ಪ್ರಯತ್ನಪಡುತ್ತವೆ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಲಾಗಿದೆ.

ರಾವ್ ಸರಕಾರದ ಎರಡು ವರ್ಷಗಳು! ....

ಪುಟ 1ರಿಂದ

ಲಗೊಂಡುದ್ದೇ ಕಾರಣ ಎಂದೂ ಮರೆಮಾಚಲಾಗುತ್ತಿದೆ.

ಹೊಸ ಆರ್ಥಿಕ ನೀತಿಗಳ ಒಟ್ಟು ಪರಿಣಾಮವೆಂದರೆ ದೇಶದ ಆರ್ಥಿಕ ಸಾರ್ವಭೌಮತೆಗೆ ಕುತ್ತು ಹಾಗೂ ಭಾರತ ಒಂದು ಸ್ವಾವಲಂಬೀ ಆರ್ಥಿಕತೆಯನ್ನು ಕಟ್ಟುವ ಅಗಾಧ ಸಾಧ್ಯತೆಗಳ ನಾಶ.

ಸಾಮ್ರಾಜ್ಯಶಾಹಿಗಳ ಆರ್ಥಿಕ ಒತ್ತಡಗಳಿಗೆ ಮಣಿದ ಫಲ ವಿದೇಶಾಂಗ ಧೋರಣೆಯ ರಂಗದಲ್ಲೂ ಕಾಣಿಸುತ್ತಿದೆ. ಸಾಮ್ರಾಜ್ಯಶಾಹಿ-ವಿರೋಧ ಅಲಿಪ್ತ ವಿದೇಶಾಂಗ ನೀತಿಯ ಆಧಾರವಾಗಿತ್ತು. ಆ ನೀತಿಯಿಂದ ದೂರಸರಿಯಲಾಗುತ್ತಿದೆ.

ಭ್ರಷ್ಟ ಆಡಳಿತದ ಹೆಗ್ಗುರುತು!

ಎರಡು ವರ್ಷಗಳ ರಾವ್ ಆಡಳಿತೆ ಆಳುವ ಪಕ್ಷವಾಗಿ ಕಾಂಗ್ರೆಸ್(ಐ) ನಮ್ಮ ಸಂಸದೀಯ ವ್ಯವಸ್ಥೆಯನ್ನು ಭ್ರಷ್ಟಗೊಳಿಸುವಲ್ಲಿ ಎಂತಹ ಪಾತ್ರ ವಹಿಸುತ್ತಿದೆ ಎಂಬುದನ್ನು ಚೆನ್ನಾಗಿ ಬೆಳಕಿಗೆ ತಂದಿದೆ. ದೊಡ್ಡ ಬಂಡವಾಳಿಗರು, ಆಳುವ ಪಕ್ಷದ ರಾಜಕಾರಣಿಗಳು ಹಾಗೂ ಕಪ್ಪು ಹಣದ ತ್ರಿಮೂರ್ತಿ ರೂಪ ದೇಶದ ರಾಜಕೀಯದಲ್ಲಿ ಬೇರು ಬಿಟ್ಟಿದೆ. ರಾಜೀವ್‌ಗಾಂಧಿ ಕಾಲದಲ್ಲಿ ಬೋಫೋರ್ಸ್ ಹಗರಣದ ರೂಪದಲ್ಲಿ ಇದು ಕಂಡು ಬಂದಿದ್ದರೆ., ನರಸಿಂಹರಾವ್ ಸರಕಾರದ ಭ್ರಷ್ಟ ಆಡಳಿತದ ಹೆಗ್ಗುರುತು 5000 ಕೋಟಿ ರೂ.ಗಳ ಭ್ರಷ್ಟಚಾರವಷ್ಟೇ ಅಲ್ಲ. ಆರ್ಥಿಕ ಉದಾರೀಕರಣ ನೀತಿಗಳ ಮೂಲಕ ಹಣ ದೋಚಲು ಇಡೀ ವ್ಯವಸ್ಥೆಯನ್ನೇ ತೆರೆದಿಟ್ಟ ಅಡ್ಡದಾರಿ. ಹೇಗಾದರೂ ಆಗಲಿ, ಬಹುಪಾಲು ಜನ ಎಷ್ಟೇ ಕಷ್ಟ-ನಷ್ಟ ಅನುಭವಿಸಲಿ, ಅವುಗಳ ಯಾವುದರ ಪರಿವೆಯೂ ಇಲ್ಲದೆ ಇನ್ನಷ್ಟು ಸಿರಿವಂತರಾಗಿ ಎಂದು ಸಿರಿವಂತರಿಗೆ ಅನೀತಿಯುತ ಕರೆ ನೀಡಿದ ಹೊಸ ಆರ್ಥಿಕ ನೀತಿಯ ಫಲಗಳು ಈ ಹರ್ಷದ್ ಮೆಹ್ತಾಗಳು, ಹಿತೇನ್‌ದಲಾಲ್‌ಗಳು ಕೃಷ್ಣಮೂರ್ತಿಗಳು ಇತ್ಯಾದಿಗಳು. ಇಂತಹ ಸರಕಾರೀ ನೀತಿಗಳೇ ದೊಡ್ಡ ಬಂಡವಾಳಗಾರರ- ರಾಜಕಾರಣಿಗಳ ನಡುವೆ ಸಂಬಂದಗಳ ಮೇಲಿನ ಸಂಕೋಲೆಗಳನ್ನೆಲ್ಲಾ ಹರಿದೊಗೆದವು. ಈಗ ಇವು ಹೆಚ್ಚೆದ್ದು ಕುಣಿಯುತ್ತಿವೆ. ರಾಜಕೀಯ ವ್ಯವಸ್ಥೆಯೇ ಕಪ್ಪು ಹಣದಿಂದ ವಂಚನೆಯ ಹಣದಿಂದ ಹೊಲಸೆದ್ದು ಹೋಗಿರುವ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿಗಳಿಗೆ ಒಂದು ಕೋಟಿ ರೂ ಕೊಟ್ಟೆನೆಂದು ಹರ್ಷದ್ ಮೆಹ್ತಾ ಹಾಕಿರುವ ಆಪಾದನೆಯನ್ನು ಪರಿಶೀಲಿಸಬೇಕು.

ಜನ ಕ್ಷಮಿಸುವುದಿಲ್ಲ

ತನ್ನ ಸರಕಾರ ಎರಡು ವರ್ಷಗಳನ್ನು ಪೂರೈಸಿರುವ ವೇಳೆಯಲ್ಲಿ ನರಸಿಂಹರಾವ್ ಇಡೀ ಶೇರು ಹಗರಣದ ಬಗ್ಗೆ ರಾಜಕೀಯ ಮುಖಂಡರ ಶಾಮೀಲಿನ ಬಗ್ಗೆ ಸಂಪೂರ್ಣ ಸತ್ಯವನ್ನು ಅರಿಯುವರೆಗೆ ಅಧಿಕಾರದಿಂದಿಳಿಯಬೇಕು ಎಂಬ ವ್ಯಾಪಕ ಒತ್ತಾಯವನ್ನು ಎದುರಿಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷ ಈ ಒತ್ತಾಯವನ್ನು ತಿರಸ್ಕರಿಸಿದ್ದರೂ ಅದೊಂದು ದೊಡ್ಡ ಅಸ್ತ್ರವಾಗಿಯೇ ಇರುತ್ತದೆ. ತನ್ನ ಸ್ವಂತ ಹಿತಾಸಕ್ತಿಯ ರಕ್ಷಣೆಗಾಗಿ ಕೂಡಾ ಕಾರ್ಯೋನ್ಮುಖವಾಗಲಾರದ ಅಸಮರ್ಥತೆ ನಿಸ್ಸತ್ವಗೊಂಡ ಕಾಂಗ್ರೆಸ್(ಐ)ನದ್ದು. ಈ ಸರಕಾರದ ಅನಾಹುತಕಾರಿ ದಾಖಲೆಗಾಗಿ ಅವರನ್ನು ಈ ದೇಶದ ಜನ ಎಂದೂ ಕ್ಷಮಿಸಲಾರರು. ಅವರ ಮೇಲೆ ದೊಡ್ಡ ಆಪಾದನೆಯ ಪಟ್ಟಿಯೇ ಇದೆ. ಸಂವಿಧಾನದ ಜಾತ್ಯಾತೀತ ನೀತಿಗಳನ್ನು ರಕ್ಷಿಸುವ ವಿಫಲತೆ, ಜನ-ವಿರೋಧಿ ದುಷ್ಟ ಆರ್ಥಿಕ ನೀತಿಗಳು ಹಾಗೂ ಸಾರ್ವಜನಿಕ ಜೀವನದಲ್ಲಿ ನಾಚಿಕೆಗೆಟ್ಟ ಭ್ರಷ್ಟಚಾರವನ್ನು ತುಂಬಿದ್ದು ಇವುಗಳಲ್ಲಿ ಮುಖ್ಯವಾದ ಆಪಾದನೆಗಳು. ಜನ ಈ ಎಲ್ಲದರ ಬಗ್ಗೆ ಒಂದು ನಿರ್ಧಾರಕ್ಕೆ ಬರುತ್ತಾರೆ.

ಭಾರತ ಕ[illegible]ಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪರವಾಗಿ ಮುದ್ರಣ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ಶಾಂಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು 560 027 [illegible]